ಸಂಪುಟ: 05 ಸಂಚಿಕೆ: 53 ಪುಟಗಳು: 08 ಬುಧವಾರ 07 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸೀಮಿತ ಸಾಧನೆಯ ಮನಸ್ಥಿತಿಯಿಂದ ನಾವು ಹೊರಬರಲು ಸಾಧ್ಯವಿಲ್ಲ ಎಂಬಂತೆ ಒಂದು ಮನೋಭಾವದ ಸಮಸ್ಯೆ ಇದೆ ಎಂದು ತೋರುತ್ತದೆ.

## ಸಿದ್ದರಾಮಯ್ಯ ನಿಂದಿಸಿ ವಿಡಿಯೋ ಮಾಡಿದ್ದ ಪೊಲೀಸ್ ಪೇದೆ ಬಂಧನ!

• **ಉದಯವಾಹಿನಿ, ಮೈಸೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ವಿಡಿಯೋ ಮಾಡಿದ್ದ ಮೈಸೂರು ಕೇಂದ್ರ ಕಾರಾಗೃಹದ ವೀಕ್ಷಕ ಎಚ್‌ಎಸ್ ಮಧು ಕುಮಾರ್ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ಬೆಟ್ಟದ ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ವಿಜಯನಗರದಲ್ಲಿನ ಮನೆಯಲ್ಲಿ ಮಧು ಅವರನ್ನು ಬಂಧಿಸಿದ ಪೊಲೀಸರು, ನ್ಯಾಯಾಧೀಶರ ಎದುರು ಹಾಜರು ಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ನಡುವೆ ಕಾರಾಗೃಹ ಇಲಾಖೆಯಲ್ಲಿಯೂ ಮಧು ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಮಧು ಕುಮಾರ್ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ಬೆಳಗಾವಿಯಲ್ಲಿ ಪೊಲೀಸ್ ಅಧಿಕಾರಿ ಗರಂ ಆಗಿ ಅವರ ಮೇಲೆ ಕೈ ಎತ್ತಿದ್ದ ಘಟನೆಯಿಂದ ಬೇಸರ ಗೊಂಡ ಮಧು ಆ ವಿಷಯವನ್ನು ಉಲ್ಲೇಖಿಸಿ ವಿಡಿಯೋ ಮಾಡಿದ್ದಾರೆ. ಸಿಎಂಗೆ ಅವಾಚ್ಯ ಪದ ಬಳಸಿದ್ದಾರೆ. ಉದಯಗಿರಿ ಪೊಲೀಸ್ ಠಾಣೆ ಹಲ್ಲೆ, ಸಿಎಂ ಸಿದ್ದರಾಮಯ್ಯ ಮೇಲಿನ ಮುಡಾ ಪ್ರಕರಣ ಸೇರಿದಂತೆ ವಿವಿಧ ವಿಷಯಗಳನ್ನು ಉಲ್ಲೇಖ ಮಾಡಿ ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ಜತೆಗೆ ವಿಡಿಯೋವನ್ನು ಸಿಎಂ ಸಿದ್ದರಾಮಯ್ಯಗೆ ತಲುಪಿಸಿ ಎಂದು ಹೇಳಿದ್ದರು. ವಿಡಿಯೋ ಕೊನೆಯಲ್ಲಿ ಮಧು ಎಂಬಾತನು, ನಾನು ಮಾಡಿರುವ ಈ ವಿಡಿಯೋವನ್ನು ಸಿಎಂಗೆ ಮುಟ್ಟಿಸಿ. ಇದರಿಂದ ನನ್ನ ಕೆಲಸ ಹೋದರು ಪರವಾಗಿಲ್ಲ ಎಂದು ಹೇಳಿದ್ದರು.

## ಕರ್ನಾಟಕದ 3 ಸ್ಥಳಗಳಲ್ಲಿ ಯುದ್ಧದ ಮಾಕ್ ಡ್ರಿಲ್

• **ಉದಯವಾಹಿನಿ, ಬೆಂಗಳೂರು**

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22 ರಂದು ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಗೃಹ ಸಚಿವಾಲಯವು (ಎಂಎಚ್‌ಎ) ಮೇ 7ರಂದು ದೇಶಾದ್ಯಂತ 244 ಸ್ಥಳಗಳಲ್ಲಿ ಮಾಕ್ ಡ್ರಿಲ್‌ಗಳನ್ನು ನಡೆಸಲು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ 3 ಸ್ಥಳಗಳಲ್ಲಿ ಈ ಅಣಕು ಕಾರ್ಯಾಚರಣೆ ನಡೆಯಲಿದೆ. ಕರ್ನಾಟಕದ ಬೆಂಗಳೂರು ನಗರ, ರಾಯಚೂರು ಮತ್ತು ಕಾರವಾರದಲ್ಲಿ ಈ ಡ್ರಿಲ್‌ಗಳು ನಡೆಯಲಿವೆ. ಈ ಡ್ರಿಲ್‌ಗಳು ಸಂಭವನೀಯ ದಾಳಿಯ ಸಂದರ್ಭದಲ್ಲಿ ಜನರನ್ನು ರಕ್ಷಿಸಲು ಮತ್ತು ಪ್ರಮುಖ ಸ್ಥಳಗಳನ್ನು ಮರೆಮಾಚಲು ತರಬೇತಿ ನೀಡುವ ಗುರಿಯನ್ನು ಹೊಂದಿವೆ.
ಗೃಹ ರಕ್ಷಕ ದಳ, ನಾಗರಿಕ ರಕ್ಷಣೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಮುಖ್ಯಸ್ಥರಾದ ಪ್ರಶಾಂತ್ ಕುಮಾರ್ ಠಾಕೂರ್ ಅವರು ಈ ಬಗ್ಗೆ ವಿವರ ನೀಡಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ಬೆಂಗಳೂರು ಒಂದು ದೊಡ್ಡ ನಗರವಾಗಿದೆ. ಇಲ್ಲಿ ಹೆಚ್ಚಿನ ಜನಸಂಖ್ಯೆ ಇದೆ. ಇನ್ನು ರಾಯಚೂರಿನಲ್ಲಿ ರಾಜ್ಯಕ್ಕೆ ಗರಿಷ್ಠ ವಿದ್ಯುತ್ ಪೂರೈಕೆ ಮಾಡುವ ಉಷ್ಣ ವಿದ್ಯುತ್ ಸ್ಥಾವರ ಇದೆ. ಕಾರವಾರದಲ್ಲಿ ಕೈಗಾ ಅಣು ವಿದ್ಯುತ್ ಸ್ಥಾವರ ಇದೆ ಎಂದು ವಿವರಿಸಿದ್ದಾರೆ. ಬುಧವಾರ ಮಧ್ಯಾಹ್ನ 4 ಗಂಟೆಯೊಳಗೆ ಡ್ರಿಲ್‌ಗಳು ನಡೆಯುತ್ತವೆ ಎಂದು ಅವರು ತಿಳಿಸಿದ್ದಾರೆ. ಬೆಂಗಳೂರನ್ನು ಭಾರತದ ಸಿಲಿಕಾನ್ ವ್ಯಾಲಿ ಎಂದೇ ಹೆಸರಾಗಿದ್ದು, ದೇಶದ ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡುವ ಪ್ರಮುಖ ಐಟಿ ಮತ್ತು ಬಿಟಿ ಸಂಸ್ಥೆಗಳನ್ನು ಹೊಂದಿದೆ. ಅಲ್ಲದೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಯಲಹಂಕ ವಾಯುನೆಲೆ ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಸೇರಿದಂತೆ ಪ್ರಮುಖ ಸಂಸ್ಥೆಗಳೂ ನಗರದಲ್ಲಿವೆ.

## ಪುಲಿಟ್ಜರ್ ಅಂತಿಮ ಸುತ್ತಿನಲ್ಲಿ ಗೌರಿ ಲಂಕೇಶ್ ಕುರಿತ ಪುಸ್ತಕ

• **ಉದಯವಾಹಿನಿ, ಬೆಂಗಳೂರು**

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಕುರಿತು ಅಮೆರಿಕದ ಪತ್ರಕರ್ತರಾದ ರೊಲೊ ರೋಮಿಂಗ್ ಅವರು ಬರೆದ 'ಐ ಆ್ಯಮ್ ಆನ್ ದಿ ಹಿಟ್ ಲಿಸ್ಟ್' ಪುಸ್ತಕವು ಪುಲಿಟ್ಜರ್ ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿ ಸ್ಥಾನ ಪಡೆದಿದೆ. ಈ ಪುಸ್ತಕದಲ್ಲಿನ ವಿಚಾರಗಳು 'ಜಾಗತಿಕವಾಗಿ ಕಂಡುಬರುವ ವಿಷಯವಸ್ತುಗಳಾದ ಸರ್ವಾಧಿಕಾರ, ಮೂಲಭೂತವಾದ ಮತ್ತು ಮುಕ್ತ ಅಭಿವ್ಯಕ್ತಿಗೆ ಎದುರಾಗಿರುವ ಇತರ ಬೆದರಿಕೆಗಳ ಬಗ್ಗೆ ಕೂಡ ಮಾತನಾಡುತ್ತವೆ' ಎಂದು ಪುಲಿಟ್ಜರ್ ಪ್ರಶಸ್ತಿ ಮಂಡಳಿಯು ಹೇಳಿದೆ. ಗೌರಿ ಹತ್ಯೆಯ ತನಿಖೆಯ ಕುರಿತಾದ ಈ ಪುಸ್ತಕವು ಅವರ ಬದುಕಿನ ಬಗೆಗಿನ ವಿವರಗಳನ್ನೂ ಒಳಗೊಂಡಿದೆ.
'ಜನರಲ್ ನಾನ್-ಫಿಕ್ಷನ್' ವಿಭಾಗದಲ್ಲಿ ಈ ಪುಸ್ತಕವು ಪ್ರಶಸ್ತಿಗೆ ಪರಿಗಣಿತವಾಗಿತ್ತು. ಆದರೆ ಈ ಕೃತಿಗಿಂತಲೂ, ಬೆಂಜಮಿನ್ ನ್ಯಾಥನ್ಸ್ ಅವರು ಬರೆದ 'ಟು ದಿ ಸಕ್ಸಸ್ ಆಫ್ ಅವರ್ ಹೋಪ್ಲೆಸ್ ಕಾಸ್' ಕೃತಿಗೆ ಹೆಚ್ಚಿನ ಮನ್ನಣೆ ದೊರೆತ ಕಾರಣಕ್ಕೆ ಅದಕ್ಕೆ ಪುಲಿಟ್ಜರ್ ಪ್ರಶಸ್ತಿ ಘೋಷಣೆ ಆಗಿದೆ.
ಗೌರಿ ಅವರನ್ನು 2017ರಲ್ಲಿ ಅವರ ಮನೆಯ ಎದುರೇ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. 'ದಿ ಟ್ರಿಬ್ಯೂನ್' ಪತ್ರಿಕೆಯಲ್ಲಿ ಈ ಪುಸ್ತಕದ ವಿಮರ್ಶೆ ಬರೆದಿರುವ ಪ್ರೊ. ಅವಿಜಿತ್ ಪಾಠಕ್ ಅವರು, 'ತೀವ್ರವಾದ ಮತ್ತು ರಾಜಕೀಯ ಭ್ರಮನಿರಸನದ ಹಿನ್ನೆಲೆಯಲ್ಲಿ ಭಾರತದ ಪ್ರಜಾತಂತ್ರವು ಅದೆಷ್ಟು ದುರ್ಬಲವಾಗಿದೆ ಎಂಬುದರ ಬಗ್ಗೆ ಓದುಗರನ್ನು ಹಿಡಿದಿಟ್ಟುಕೊಳ್ಳುವ ಶೈಲಿಯಲ್ಲಿ ಇದು ವಿವರಣೆ ಒದಗಿಸುತ್ತದೆ' ಎಂದು ಹೇಳಿದ್ದಾರೆ.



**● ಅಕ್ರಮ ಗಣಿಗಾರಿಕೆ: ಸಿಬಿಐ ವಿಶೇಷ ಕೋರ್ಟ್ ತೀರ್ಪು ● ಓಬಳಾಪುರಂ ಮೈನಿಂಗ್ ಕೇಸ್: ಜನಾರ್ದನ ರೆಡ್ಡಿಗೆ 7 ವರ್ಷ ಜೈಲು ಶಿಕ್ಷೆ ● ಜನಾರ್ದನ ರೆಡ್ಡಿ ದೋಷಿ ಎಂದ ಸಿಬಿಐ ನ್ಯಾಯಾಲಯ**

# ಗಣಿಧಣಿಗೆ ಮತ್ತೆ ಸೆರೆವಾಸ

### ಸುಪ್ರೀಂ ಕೋರ್ಟ್‌ನಿಂದ ಜಾಮೀನು

2012ರಲ್ಲಿ ಸಿಬಿಐ ನ್ಯಾಯಾಲಯ, 2012ರ ಸೆ. 17ರವರೆಗೆ ರೆಡ್ಡಿಯವರ ನ್ಯಾಯಾಂಗ ಬಂಧನವನ್ನು ವಿಸ್ತರಿಸಿತು. ಸಿಬಿಐ ನ್ಯಾಯಾಲಯದಿಂದ ಬಂಧನಾವಧಿ ವಿಸ್ತರಣೆಯಾಗುತ್ತಿದ್ದಂತೆ, ರೆಡ್ಡಿಯವರು ಸುಪ್ರೀಂ ಕೋರ್ಟ್ ಮೊರೆ ಹೋದರು. ಅಲ್ಲಿ ಸುದೀರ್ಘ ವಿಚಾರಣೆ ನಡೆದು 2015ರ ಜನವರಿ 21ರಂದು ಜನಾರ್ದನ ರೆಡ್ಡಿಯವರಿಗೆ ಜಾಮೀನು ಸಿಕ್ಕಿತು. ಆದರೆ, ಸಾಕ್ಷ್ಯಾನಾಶದ ಭೀತಿಯಿದ್ದ ಕಾರಣ, ಜನಾರ್ದನ ರೆಡ್ಡಿಯವರಿಗೆ ಬಳ್ಳಾರಿ ಪ್ರವೇಶಿಸದಂತೆ ನಿರ್ಬಂಧ ಹೇರಿತ್ತು. 2021ರ ಮೇ 24ರಂದು ರೆಡ್ಡಿಯವರಿಗೆ ಬಳ್ಳಾರಿ ಪ್ರವೇಶಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿತು.

### ಮೊದಲು ದನಿಯೆತ್ತಿದ್ದು ಇವರೇ!

ರೆಡ್ಡಿ ವಿರುದ್ಧ ಇಂಥದ್ದೊಂದು ಕೇಸ್ ದಾಖಲಾಗಲು ಮೂಲ ಕಾರಣ ಬಳ್ಳಾರಿಯ ಉದ್ಯಮಿ ಟಪಾಲ್ ಗಣೇಶ್. ಬಳ್ಳಾರಿಯ ಸಮೀಪ, ಕರ್ನಾಟಕದ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ ಓಬಳಾಪುರಂನಲ್ಲಿ ರೆಡ್ಡಿಯವರು ಓಬಳಾಪುರಂ ಮೈನಿಂಗ್ ಕಂಪನಿ (ಒಎಂಸಿ) ಹೆಸರಿನ ಕಂಪನಿಯ ಮೂಲಕ ಹಲವಾರು ದಶಕಗಳಿಂದ ಗಣಿಗಾರಿಕೆ ನಡೆಸುತ್ತಿದ್ದರು. ಈ ಗಣಿಗಾರಿಕೆಯಲ್ಲಿ ಕೆಲವು ಅಕ್ರಮಗಳಾಗಿವೆ ಎಂಬುದು ಟಪಾಲ್ ಗಣೇಶ್ ಅವರ ಆರೋಪವಾಗಿತ್ತು. ಕರ್ನಾಟಕದ ಭೂಭಾಗದಲ್ಲಿರುವ ಕಬ್ಬಿಣದ ಅದಿರನ್ನು ತೋಡಿ ಅವರು ಗಣಿಗಾರಿಕೆ ನಡೆಸಿದ್ದರು. ಅಲ್ಲದೆ, ತಾವು ಗಣಿಗಾರಿಕೆಗಾಗಿ ತೋಡಿರುವ ಭೂಮಿ ಕರ್ನಾಟಕದಲ್ಲ, ಆಂಧ್ರಪ್ರದೇಶಕ್ಕೆ ಸೇರಿದ್ದೆಂದು ಸಾಬೀತುಪಡಿಸಲು ಅವರು ಕರ್ನಾಟಕ - ಆಂಧ್ರ ಗಡಿ ರೇಖೆಯನ್ನೇ ಬದಲು ಮಾಡಿ ನಕ್ಷೆಗಳನ್ನು ತಯಾರಿಸಿ ಸರ್ಕಾರಗಳ ಒಪ್ಪಿಗೆ ಪಡೆದುಕೊಂಡಿದ್ದರು. ಇದೇ ಅಸಲಿ ವಿಚಾರ. ಟಪಾಲ್ ಗಣೇಶ್ ಅವರು ಮಾಡಿದ್ದ ಈ ಆರೋಪಗಳ ಅಡಿಯಲ್ಲಿ 2010ರಲ್ಲಿ ಸಿಬಿಐನಲ್ಲಿ ಈ ಕುರಿತಾಗಿ ಕೇಸ್ ದಾಖಲಾಗಿತ್ತು. ಆಗ, ಜನಾರ್ದನ ರೆಡ್ಡಿಯವರು ಆಗಿನ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದರು. ಸಿಬಿಐ ತನಿಖೆ ಆರಂಭವಾದ ಹಿನ್ನೆಲೆಯಲ್ಲಿ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತು.

• **ಉದಯವಾಹಿನಿ, ದೆಹಲಿ**

ದೇಶಾದ್ಯಂತ ಸಂಚಲನ ಸೃಷ್ಟಿಸಿದ್ದ ಓಬಳಾಪುರಂ ಮೈನಿಂಗ್ ಕಂಪನಿ (ಒಎಂಸಿ)ಯ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಮಾಜಿ ಸಚಿವ, ಗಂಗಾವತಿ ಹಾಲಿ ಶಾಸಕ ಗಾಲಿ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಸಿಬಿಐ ವಿಶೇಷ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ.
ಒಎಂಸಿ ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ - ಪ್ರತಿವಾದ ಆಲಿಸಿದ್ದ ಹೈದರಾಬಾದ್ ಸಿಬಿಐ ನ್ಯಾಯಾಲಯ ತೀರ್ಪನ್ನು ಇಂದಿಗೆ ಕಾಯ್ದಿರಿಸಿತ್ತು. ಮಂಗಳವಾರ ತೀರ್ಪು ಪ್ರಕಟಿಸಿದ ಕೋರ್ಟ್, ಒಎಂಸಿ ಕಂಪನಿ ಮಾಲೀಕ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಓಬಳಾಪುರಂನಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆ ಪ್ರಕರಣ ಸಂಬಂಧ ಬರೋಬ್ಬರಿ 13 ವರ್ಷಗಳಿಂದ ನಡೆದ ಸುದೀರ್ಘ ವಿಚಾರಣಾ ಪ್ರಕ್ರಿಯೆಯಲ್ಲಿ 3,400ಕ್ಕೂ ಹೆಚ್ಚು ದಾಖಲೆಗಳನ್ನು ಪರಿಶೀಲಿಸಲಾಗಿದೆ ಮತ್ತು 219 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ.
ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಜನಾರ್ದನ ರೆಡ್ಡಿ ಅವರ ಶಾಸಕ ಸ್ಥಾನಕ್ಕೆ ಕುತ್ತು ಬರುವ ಸಾಧ್ಯತೆ ಇದೆ.
ಇನ್ನು, ಇದೇ ಪ್ರಕರಣದಲ್ಲಿ ವಿ.ಡಿ.ರಾಜಗೋಪಾಲ್, ದಿ. ರಾವ್ ಲಿಂಗಾರೆಡ್ಡಿ, ಕೆ.ಮೆಹಫೂಸ್ ಅಲಿ ಖಾನ್ ಕೂಡ ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದೆ
ಜನಾರ್ದನ ರೆಡ್ಡಿ, ಬಿ.ವಿ ಶ್ರೀನಿವಾಸ ರೆಡ್ಡಿ (ಒಎಂಸಿ ವ್ಯವಸ್ಥಾಪಕ ನಿರ್ದೇಶಕ), ಮೆಫಾಜ್ ಅಲಿ ಖಾನ್ (ಜನಾರ್ದನ ರೆಡ್ಡಿ ಆಪ್ತ ಸಹಾಯಕ), ವಿ ಡಿ ರಾಜಗೋಪಾಲ್ (ಗಣಿ ಇಲಾಖೆಯ ಮಾಜಿ ನಿರ್ದೇಶಕ), ಕೃಪಾನಂದಂ (ನಿವೃತ್ತ ಐಎಎಸ್ ಅಧಿಕಾರಿ), ಸಬಿತಾ ಇಂದ್ರಾರೆಡ್ಡಿ (ತೆಲಂಗಾಣದ ಮಾಜಿ ಸಚಿವೆ , ಹಾಲಿ ಶಾಸಕಿ), ವೈ. ಶ್ರೀಲಕ್ಷ್ಮಿ (2022ರಲ್ಲಿ ಸೇವೆಯಿಂದ ಬಿಡುಗಡೆಯಾದ ಐಎಎಸ್ ಅಧಿಕಾರಿ) ಮತ್ತು ದಿವಂಗತ ಆರ್. ಲಿಂಗಾ ರೆಡ್ಡಿ (ಅಂದಿನ ಗಣಿ ಇಲಾಖೆಯ ಸಹಾಯಕ ನಿರ್ದೇಶಕ) ಈ ಪ್ರಕರಣದ ಆರೋಪಿಗಳಾಗಿದ್ದಾರೆ.
ಇವರ ವಿರುದ್ಧ ಐಪಿಸಿ ಸೆಕ್ಷನ್ 120 ಬಿ, 420, 409, 468 ಮತ್ತು 471 ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(2) ಜೊತೆಗೆ 13(1)(ಡಿ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ. 2009 ರಲ್ಲಿ ಸಿಬಿಐ ಒಎಂಸಿ ಕಂಪನಿಯ ಅಕ್ರಮ ಗಣಿಗಾರಿಕೆ ಆರೋಪ ಸಂಬಂಧ

## ಜನಾರ್ದನ ರೆಡ್ಡಿಗೆ ಡಬಲ್ ಶಾಕ್

ತನಿಖೆ ಪ್ರಾರಂಭಿಸಿತ್ತು. ವೈ.ಎಸ್. ರಾಜಶೇಖರ ರೆಡ್ಡಿ ಅವಿಭಜಿತ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಗಾಲಿ ಜನಾರ್ದನ ರೆಡ್ಡಿ ಅವರ ಒಎಂಸಿ ಕಂಪನಿಗೆ ಓಬಳಾಪುರಂ ಮತ್ತು ಡಿ. ಹಿರೇಹಾಳದಲ್ಲಿ ಕ್ರಮವಾಗಿ 68.5 ಹೆಕ್ಟೇರ್ ಮತ್ತು 39.5 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆ ನೀಡುವಲ್ಲಿ ಅಕ್ರಮ ನಡೆದಿದೆ ಎಂದು ಆರೋಪ ಕೇಳಿ ಬಂದಿತ್ತು. ಅಂದಿನ ಗಣಿ ಇಲಾಖೆಯ ಸಹಾಯಕ ನಿರ್ದೇಶಕ ಲಿಂಗಾ ರೆಡ್ಡಿ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆ ನೀಡುವ ವೇಳೆ 23 ಅರ್ಜಿದಾರರನ್ನು ನಿರ್ಲಕ್ಷಿಸಿ, ಒಎಂಸಿ ಕಂಪನಿಗೆ ಗುತ್ತಿಗೆ ಕೊಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು ಎಂಬ ಆರೋಪ ಇದೆ.
**ವಿ.ಡಿ.ರಾಜಗೋಪಾಲ್‌ಗೆ ಹೆಚ್ಚುವರಿ ಶಿಕ್ಷೆ:** ಪ್ರಕರಣದ ಅಪರಾಧಿಗಳಲ್ಲಿ ಒಬ್ಬರಾದ ಅಂದಿನ ಗಣಿ ನಿರ್ದೇಶಕರಾಗಿದ್ದ ವಿ.ಡಿ.ರಾಜಗೋಪಾಲ್ ಅವರಿಗೆ 7 ವರ್ಷಗಳ ಜೊತೆಗೆ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಹೆಚ್ಚುವರಿಯಾಗಿ 4 ವರ್ಷಗಳ ಶಿಕ್ಷೆ ವಿಧಿಸಲಾಗಿದೆ. ಅಂದರೆ, ಒಟ್ಟು ಜೈಲು ಶಿಕ್ಷೆ 11 ವರ್ಷಗಳು. ಅಧಿಕಾರ ದುರುಪಯೋಗ ಮಾಡಿಕೊಂಡು ಅಕ್ರಮ ಗಣಿಗಾರಿಕೆಗೆ ನೆರವು ನೀಡಿದ್ದಕ್ಕೆ ನ್ಯಾಯಾಲಯ ಹೆಚ್ಚುವರಿ ಶಿಕ್ಷೆ ನೀಡಿದೆ. ಇದು 13 ವರ್ಷದ ಹಿಂದೆ, 29 ಲಕ್ಷ ಟನ್ ಅದಿರು ಕಳ್ಳತನ ಮಾಡಿರುವ ಗಂಭೀರ ಪ್ರಕರಣವಾಗಿದೆ.

### ಇಲ್ಲಿ ಬಿಜೆಪಿ ಅಲ್ಲಿ ಕಾಂಗ್ರೆಸ್!

**ಅದು 2009ರ ಸಮಯ. ಕರ್ನಾಟಕದಲ್ಲಿ ಪ್ರವಾಸೋದ್ಯಮ ಸಚಿವರಾಗಿದ್ದ ರೆಡ್ಡಿ ಮೇಲೆ ಅಕ್ರಮ ಗಣಿಗಾರಿಕೆ ಆರೋಪಗಳು ಕೇಳಿಬಂದಾಗ ಆಂಧ್ರಪ್ರದೇಶದಲ್ಲಿ ಅಧಿಕಾರದಲ್ಲಿದ್ದುದ್ದು ಕಾಂಗ್ರೆಸ್ ಪಕ್ಷ ಹಾಗೂ ಆಗ ಅಲ್ಲಿ ಮುಖ್ಯಮಂತ್ರಿಯಾಗಿದ್ದು ಕೆ. ರೋಸಯ್ಯ. ಈ ಮೊದಲೇ ಹೇಳಿದ ಹಾಗೆ ಓಬಳಾಪುರಂ ಆಂಧ್ರಪ್ರದೇಶಕ್ಕೆ ಸೇರಿದ್ದಾಗಿತ್ತು. ಆ ಹಿನ್ನೆಲೆಯಲ್ಲಿ, ಓಬಳಾಪುರಂ ಅಕ್ರಮ ಗಣಿಗಾರಿಕೆಗೆ ಆಗಿನ ಕಾಂಗ್ರೆಸ್ ಸರ್ಕಾರದ ಬೆಂಬಲವೂ ಇದೆ ಎಂಬ ಆರೋಪಗಳು ಕೇಳಿಬಂದವು. ಆಂಧ್ರಪ್ರದೇಶದಲ್ಲಿ ಪ್ರಮುಖ ವಿಪಕ್ಷವಾಗಿದ್ದ ತೆಲುಗುದೇಶಂ ಪಾರ್ಟಿ (ಟಿಡಿಪಿ), ಇದರ ವಿರುದ್ಧ ದೊಡ್ಡ ಹೋರಾಟ ಮಾಡಿತು. ಖುದ್ದು ಆಂಧ್ರ ಸಿಎಂ ಕೆ. ರೋಸಯ್ಯನವರೇ ಈ ಅಕ್ರಮ ಗಣಿಗಾರಿಕೆಯಲ್ಲಿ ಕೈ ಜೋಡಿಸಿದ್ದಾರೆಂಬ ಆರೋಪಗಳು ಕೇಳಿಬಂದವು. ಆಗ ಕೆ. ರೋಸಯ್ಯನವರು ತಡ ಮಾಡದೇ, ಆಂಧ್ರ ಅರಣ್ಯ ಇಲಾಖೆಯ ಮೂವರು ಹಿರಿಯ ಅಧಿಕಾರಿಗಳ ಸಮಿತಿಯನ್ನು ನೇಮಿಸಿ ತನಿಖೆ ಶುರು ಮಾಡಿಸಿದರು. ಆ ಸಮಿತಿಯ ವರದಿಯನ್ನು ಆಧರಿಸಿ ರೋಸಯ್ಯ ಅವರು ಪ್ರಕರಣವನ್ನು ಸಿಬಿಐಗೆ ವಹಿಸಿದರು. 2009ರಲ್ಲಿ ಈ ಪ್ರಕರಣ ಸಿಬಿಐನಲ್ಲಿ ದಾಖಲಾಗಿ, 2010ರಲ್ಲಿ ಸಿಬಿಐ, ರೆಡ್ಡಿ ವಿರುದ್ಧ ತನ್ನ ತನಿಖೆಯನ್ನು ಆರಂಭಿಸಿತು.**

### ಸಿಬಿಐನಿಂದ ಮಧ್ಯರಾತ್ರಿ ಬಂಧನ

**ಕಡೆಗೆ ಸಿಬಿಐ ಸಲ್ಲಿಸಿದ ದೋಷಾರೋಪಪಟ್ಟಿಯ ಆಧಾರದಲ್ಲಿ 2011ರ ಸೆ. 5ರ ಮಧ್ಯರಾತ್ರಿ ಬಳ್ಳಾರಿಯಲ್ಲಿರುವ ತಮ್ಮ ನಿವಾಸದಿಂದ ಜನಾರ್ದನ ರೆಡ್ಡಿಯವರನ್ನು ಬಂಧಿಸಲಾಯಿತು. ಅಲ್ಲಿಂದ ಅವರನ್ನು ನೇರವಾಗಿ ಹೈದರಾಬಾದ್ ನಲ್ಲಿರುವ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಗಿತ್ತು. ಇದೇ ಸಂದರ್ಭದಲ್ಲಿ ಹಲವಾರು ಐಪಿಎಸ್ , ಐಎಎಸ್ ಅಧಿಕಾರಿಗಳನ್ನು ಸಿಬಿಐ ಬಂಧಿಸಿತ್ತು.**

## ಬಂದ್ ಹೆಸರಿನಲ್ಲಿ ಮಾಕ್ ಡ್ರಿಲ್‌ಗೆ ತೊಂದರೆ ನೀಡಿದರೆ ಸುಮ್ಮನಿರಲ್ಲ

• **ಉದಯವಾಹಿನಿ, ಕಾರವಾರ**

ಪಹಲ್ಗಾಮ್ ದಾಳಿಯಿಂದ ಯುದ್ಧ ಸನ್ನಿವೇಶ ಸೃಷ್ಟಿಯಾಗಿರುವ ಹಿನ್ನಲೆಯಲ್ಲಿ ಕೇಂದ್ರ ಸರಕಾರದ ಸೂಚನೆಯಂತೆ ಬುಧವಾರ (ಮೇ 7) ವಿವಿಧ ರಕ್ಷಣಾ ಸಂಸ್ಥೆಗಳೊಂದಿಗೆ ಸಿವಿಲ್ ಡಿಫೆನ್ಸ್ ಅಣಕು ಕಾರ್ಯಾಚರಣೆ ನಡೆಯಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ ನಾರಾಯಣ ತಿಳಿಸಿದರು.
ದೇಶದ 244 ಜಿಲ್ಲೆಗಳಲ್ಲಿ ಅಣಕು ಕಾರ್ಯಾಚರಣೆ ನಡೆಯುತ್ತಿದೆ. ಕಾರವಾರ ಭದ್ರತಾ ಸೂಕ್ಷ್ಮ ಪ್ರದೇಶವಾದ್ದರಿಂದ ಇಲ್ಲಿಯೂ ಅಣಕು ಕಾರ್ಯಾಚರಣೆ ನಡೆಯಲಿದೆ. ಕೈಗಾ ಅಣುಸ್ಥಾವರ ಸಿಐಎಸ್‌ಎಫ್, ಕೋಸ್ಟ್ ಗಾರ್ಡ್, ನೇವಿ ಹೀಗೆ ವಿವಿಧ ರಕ್ಷಣಾ ಸಂಸ್ಥೆಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಲಿವೆ ಎಂದರು. ಬುಧವಾರ ಮಧ್ಯಾಹ್ನ 4 ಗಂಟೆಗೆ ಅಣಕು ಕಾರ್ಯಾಚರಣೆ



ಆರಂಭವಾಗಲಿದೆ. ರಾತ್ರಿ ಎಂಟು ಗಂಟೆವರೆಗೆ ನಡೆಯಲಿದೆ. ಹೇಗೆ ನಡೆಯಲಿದೆ, ಎಲ್ಲಿ ನಡೆಯಲಿದೆ ಎನ್ನುವುದು ಜಿಲ್ಲಾಧಿಕಾರಿ ಅಧ್ಯಕ್ಷತೆ ಸಭೆಯಲ್ಲಿ ನಿರ್ಧಾರ ಆಗಲಿದೆ ಎಂದು ಹೇಳಿದರು. ನೌಕಾಸೇನೆ, ಪೊಲೀಸ್ ಸಂವಹನ, ದಾಸ್ತಾನು ನಿರ್ವಹಣೆ, ಯುದ್ಧ ವಿಮಾನ ಪತನ ಆದರೆ ಕೈಗೊಳ್ಳಬೇಕಾದ ಕ್ರಮ, ಹೀಗೆ ಯುದ್ಧ ಸನ್ನಿವೇಶದಲ್ಲಿ ಸಾರ್ವಜನಿಕರು ಏನು ಮಾಡಬೇಕು ಎನ್ನುವ ಬಗ್ಗೆ ಅಣಕು ಕಾರ್ಯಾಚರಣೆ ನಡೆಯಲಿದೆ. ಈ ಕಾರ್ಯಾಚರಣೆಗೆ ದೇಶದಲ್ಲಿ 'ಆಪರೇಷನ್ ಅಭ್ಯಾಸ' ಎಂದು ಹೆಸರಿಡಲಾಗಿದೆ ಎಂದು ಮಾಹಿತಿ ನೀಡಿದರು. ಸಂಘಟನೆಗಳು ಸುಹಾಸ್ ಶೆಟ್ಟಿ ಕೊಲೆ ಖಂಡಿಸಿ ಬೃಹತ್ ಜಾಥಾ ಮಾಡುವುದಾಗಿ ತಿಳಿಸಿದ್ದಾರೆ. ಅದಕ್ಕೆ ಅನುಮತಿ ಕೊಟ್ಟಿದ್ದೇವೆ. ಕಾರವಾರ ಭದ್ರತಾ ಸೂಕ್ಷ್ಮ ಪ್ರದೇಶ ಆಗಿರುವ ಹಿನ್ನಲೆಯಲ್ಲಿ ಕೇಂದ್ರ ಸರಕಾರದ ಸೂಚನೆಯಂತೆ ಬುಧವಾರ (ಮೇ 7) ಅಣಕು ಕಾರ್ಯಾಚರಣೆ ನಡೆಸುತ್ತಿದ್ದೇವೆ. ಈ ವೇಳೆ ಬಂದ್ ಹೆಸರಿನಲ್ಲಿ ತೊಂದರೆ ಮಾಡಿದರೆ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಖಡಕ್ ಎಚ್ಚರಿಕೆ ನೀಡಿದೆ.

### ಬಂದ್ ತೊಂದರೆ ಮಾಡಿದರೆ ಕ್ರಮ

**ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಯಾರೂ ಬಂದ್‌ಗೆ ಕರೆ ಕೊಡುವ ಹಾಗಿಲ್ಲ. ಬಲವಂತವಾಗಿ ಬಂದ್ ಮಾಡಿಸುವ ಹಾಗಿಲ್ಲ. ಮಂಗಳೂರಿನಲ್ಲಿ ಬಂದ್‌ಗೆ ಕರೆ ಕೊಟ್ಟವರ ಮೇಲೆ ಪ್ರಕರಣ ದಾಖಲಿಸುವ ಕ್ರಮ ಆಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್ಚರಿಸಿದರು.**

## ದೇಶದ ಇತಿಹಾಸದಲ್ಲಿ ಎಂದೂ ಈ ರೀತಿ ಆಗಿರಲಿಲ್ಲ: ದೇವೇಗೌಡ

**■ ಪ್ರಧಾನಿ ನರೇಂದ್ರ ಮೋದಿ ದಿಟ್ಟ ನಿರ್ಧಾರ ■ ಉಗ್ರರ ವಿರುದ್ಧ ಪ್ರಧಾನಿಗಳು ಕೈಗೊಳ್ಳುವ ನಿರ್ಧಾರಕ್ಕೆ ಜೆಡಿಎಸ್ ಬದ್ಧ**

• **ಉದಯವಾಹಿನಿ, ಹೊಸದಿಲ್ಲಿ**

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೈಗೊಳ್ಳುತ್ತಿರುವ ಎಲ್ಲಾ ಕ್ರಮಗಳನ್ನು ಮುಕ್ತಕಂಠದಿಂದ ಬೆಂಬಲಿಸುವುದಾಗಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರು, ರಾಜ್ಯಸಭಾ ಸದಸ್ಯರು ಹಾಗೂ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಹೇಳಿದರು.
ಪೆಹಲ್ಗಾಮ್ ಘಟನೆ ಅಮಾನವೀಯ. ಮೊದಲ ಬಾರಿಗೆ ಭಯೋತ್ಪಾದಕರು ಪ್ರವಾಸಿಗರ ಮೇಲೆ ದಾಳಿ ಮಾಡಿದ್ದಾರೆ.
ಇದು ಅತ್ಯಂತ ಹೇಯ. ಈ ಕೆಲಸ ಮಾಡಿದವರಿಗೆ ತಕ್ಕ ಶಾಸ್ತಿ ಆಗಲೇಬೇಕು. ಈ ಹಿನ್ನೆಲೆಯಲ್ಲಿ ಪ್ರಧಾನಿಗಳು ಕೈಗೊಳ್ಳುವ ನಿರ್ಧಾರಕ್ಕೆ ಜೆಡಿಎಸ್ ಬದ್ಧವಾಗಿರುತ್ತದೆ ಎಂದು ಸ್ಪಷ್ಟಪಡಿಸಿದರು.
ರಕ್ಷಣಾ ಪಡೆಗಳಿಗೆ ಮೋದಿ ಅವರು ಮುಕ್ತ ಸ್ವಾತಂತ್ರ್ಯ ನೀಡಿದ್ದಾರೆ. ಮೊದಲ ಬಾರಿಗೆ ದೇಶದ ಪ್ರಧಾನಿ ಮೋದಿ ಅವರು ಇಂತಹ ದಿಟ್ಟ ನಿರ್ಧಾರ ಮಾಡಿದ್ದಾರೆ. ಇತಿಹಾಸದಲ್ಲಿ ಈ ರೀತಿ ಎಂದೂ ನಿರ್ಧಾರ ಆಗಿರಲಿಲ್ಲ ಎಂದ ಮಾಜಿ ಪ್ರಧಾನಿಗಳು, ಗೃಹ, ರಕ್ಷಣೆ ಹಾಗೂ ವಿದೇಶಾಂಗ ಖಾತೆಗಳನ್ನು ನಿಭಾಯಿಸುತ್ತಿರುವ ಸಚಿವರುಗಳು ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ದೇವೇಗೌಡರು ಮೆಚ್ಚುಗೆ ವ್ಯಕ್ತಪಡಿಸಿದರು.



### ಹಿಂದೂ ಮುಸ್ಲಿಂ ಎನ್ನುವ ಪ್ರಶ್ನೆಯಲ್ಲ

ಇಡೀ ದೇಶ ಪ್ರಧಾನಿ ಮೋದಿಯವರ ಜೊತೆ ನಿಂತಿದೆ. ಎಲ್ಲಾ ರಾಜಕೀಯ ಪಕ್ಷಗಳು ಮೋದಿಯವರ ನಿರ್ಧಾರವನ್ನು ಬೆಂಬಲಿಸಿವೆ. ಭಯೋತ್ಪಾದಕರಿಗೆ ತಕ್ಕ ಪಾಠ ಕಲಿಸಬೇಕಾಗಿದೆ. ಪಾಕಿಸ್ತಾನ ಪ್ರೇರಿತ ಉಗ್ರರನ್ನು ಸದೆಬಡಿಯುವವರೆಗೆ ವಿರಮಿಸುವುದಿಲ್ಲ ಎಂದು ಮೋದಿ ಹೇಳಿದ್ದಾರೆ. ನಾನು, ನಮ್ಮ ಪಕ್ಷ ಇಡೀ ದೇಶ ಪ್ರಧಾನಿ ಮೋದಿ ಜೊತೆಗಿರುತ್ತೇವೆ ಎಂದು ದೇವೇಗೌಡರು ಹೇಳಿದರು.
1971ರ ಯುದ್ಧ ಕಾಲಕ್ಕೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಹೋಲಿಕೆ ಮಾಡಲು ಸಾಧ್ಯವಿಲ್ಲ. ಭಾರತ ಅಗಾಧವಾಗಿ ಬೆಳೆದಿದೆ. ಕಳೆದ ಹತ್ತು ವರ್ಷಗಳಲ್ಲಿ ದೇಶವು ಸಾಕಷ್ಟು ಅಭಿವೃದ್ಧಿ, ಬದಲಾವಣೆಯನ್ನು ಕಂಡಿದೆ ಎಂದ ದೇವೇಗೌಡರು; ಇಲ್ಲಿ ಹಿಂದೂ ಮುಸ್ಲಿಂ ಎನ್ನುವ ಪ್ರಶ್ನೆಯಲ್ಲ. ಧರ್ಮ, ಜಾತಿ ಪ್ರಶ್ನೆ ಉದ್ಭವವಾಗುದಿಲ್ಲ. ದೇಶದ ಭದ್ರತೆ ಮುಖ್ಯ.
ಯುದ್ಧ ಮಾಡಬೇಕೋ ಬೇಡವೋ ಎನ್ನುವ ನಿರ್ಧಾರವನ್ನು ಸೇವೆಗೆ ಬಿಡಲಾಗಿದೆ. ಮೂರು ಸೇನೆಗಳ ಮುಖ್ಯಸ್ಥರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದು ಮಾಜಿ ಪ್ರಧಾನಿಗಳು ಹೇಳಿದರು.
ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರಕಾರ ಮುಂದಿನ ಜನಗಣತಿ ಜೊತೆಯಲ್ಲಿಯೇ ಜಾತಿ ಗಣತಿಯನ್ನು ಮಾಡುತ್ತಿರುವುದು ಸ್ವಾಗತಾರ್ಹ ಎಂದು ಮಾಜಿ ಪ್ರಧಾನಿಗಳು ಮತ್ತು ರಾಜ್ಯಸಭಾ ಸದಸ್ಯರಾದ ಎಚ್.ಡಿ.ದೇವೇಗೌಡರು ಹೇಳಿದರು.
ಯುದ್ಧದ ಕಾರ್ಮೋಡದ ಮಧ್ಯೆ ದೇಶಾದ್ಯಂತ ಇಂದು ಮಾಕ್ ಡ್ರಿಲ್ ನಡೆಸಲಾಗುತ್ತಿದೆ. ಕೇಂದ್ರ ನಿಲುವಿಗೆ ನಮ್ಮ ಸಂಪೂರ್ಣ ಬೆಂಬಲವಿದೆ.
ಕರ್ನಾಟಕದ ಜಾತಿಗಣತಿಗೆ ಸಿದ್ದರಾಮಯ್ಯ ಅವರ ಸಂಪುಟದಲ್ಲಿಯೇ ಸಹಮತ ಇಲ್ಲ. ಈ ಬಗ್ಗೆ ಸಿದ್ದರಾಮಯ್ಯ ಅವರಿಗೆ ನಾನು ಪತ್ರ ಬರೆದಿದ್ದೆ. ನನಗೆ ಅವರು ಈವರೆಗೆ ಉತ್ತರ ಕೊಟ್ಟಿಲ್ಲ ಎಂದು ಅವರು ಹೇಳಿದರು.

### ನಿಮ್ಮ ಜಾತಿ ಬಗ್ಗೆ ಸರಿಯಾದ ಮಾಹಿತಿ ಕೊಡಿ

**ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಾರೆ. ಹಾಗಾದರೆ ಸಿಎಂ ಕಚೇರಿಯಲ್ಲಿ ಎಷ್ಟು ಹಿಂದುಳಿದವರು ಇದ್ದಾರೆ ಸಿಎಂ ಕಚೇರಿಯಲ್ಲಿ ಎಷ್ಟು ಅವರದ್ದೆ ಸಮುದಾಯದ ಉದ್ಯೋಗಿಗಳು ಎಷ್ಟಿದ್ದಾರೆ ಎನ್ನುವುದನ್ನು ಹೇಳಬೇಕು. ಅವರು ಹೇಳುತ್ತಾರೆಯೇ ಅಂತಹ ಸಿದ್ದರಾಮಯ್ಯನವರು ಮೋದಿ ಅವರಿಗೆ ಪಾಠ ಮಾಡುತ್ತಾರೆ ಎಂದು ಗೌಡರು ಟೀಕಾ ಪ್ರಹಾರ ನಡೆಸಿದರು. ಜಾತಿ ಸಮೀಕ್ಷೆಯ ಮೂಲಕ ಬೆಣ್ಣೆ ತಿಂದು, ಉಳಿದವರಿಗೆ ನೀರು ಮಜ್ಜಿಗೆ ಕೊಡಲು ಸಿದ್ದರಾಮಯ್ಯ ಹೊರಟಿದ್ದಾರೆ. ಇದು ಸರಿಯಲ್ಲ. ಜನರು ಎಲ್ಲಾವನ್ನೂ ಗಮನಿಸುತ್ತಿದ್ದಾರೆ ಎಂದು ಎಚ್.ಡಿ.ದೇವೇಗೌಡ ಹೇಳಿದರು.**

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,846/Gram24ct ₹9,025/Gram22ct ಬೆಳ್ಳಿ: ₹96.90/Gram

# ಸ್ಯಾಕ್ಸೋಫೋನ್ ವಾದನ

• ಉದಯವಾಹಿನಿ ಬೆಂಗಳೂರು



ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ವತಿಯಿಂದ ಮೇ 8, ಗುರುವಾರ ಸಂಜೆ 6-30ಕ್ಕೆ ಸ್ಯಾಕ್ಸೋಫೋನ್ ವಾದನ : ದಿವ್ಯ ಶ್ರೀ ರಂಗನಾಥನ್, ಶ್ರೀ ಎಸ್. ಶಶಿಧರ್ (ಪಿಟೀಲು) ಶ್ರೀ ಕಾರ್ತೀಕ್ ಪ್ರಣವ್ (ಮೃದಂಗ) ಸ್ಥಳ : ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 152/1, ವಜ್ರಕ್ಷೇತ್ರ, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ ತ್ಯಾಗರಾಜನಗರ 3ನೇ ಬ್ಲಾಕ್, ಬೆಂಗಳೂರು-28

# ಜಾಹೀರಾತು: ಸಿಎಂ ಸಿದ್ದರಾಮಯ್ಯ ವಿರುದ್ಧದ ಕ್ರಿಮಿನಲ್ ಪ್ರಕರಣ ವಜಾ

• ಉದಯವಾಹಿನಿ ಬೆಂಗಳೂರು

ಸಿದ್ದರಾಮಯ್ಯ ಅವರು 2013 ರಿಂದ 2018ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ತಮ್ಮ ಸರ್ಕಾರದ ಸಾಧನೆಗಳನ್ನು ಬಿಂಬಿಸುವ ಜಾಹೀರಾತುಗಳನ್ನು ಬಿಬಿಎಂಪಿ ವ್ಯಾಪ್ತಿಯ ಬಸ್ ತಂಗುದಾಣಗಳಲ್ಲಿ ಪ್ರದರ್ಶಿಸುವ ಮೂಲಕ ಬೊಕ್ಕಸಕ್ಕೆ ರೂ.68 ಕೋಟಿಗೂ ಹೆಚ್ಚಿನ ಮೊತ್ತದ ನಷ್ಟ ಉಂಟು ಮಾಡಿದ್ದಾರೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ. ಬಿಬಿಎಂಪಿ ಮಾಜಿ ಸದಸ್ಯ ಎನ್.ಆರ್.ರಮೇಶ್ ಅವರು ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ಪ್ರಕರಣದ ತನಿಖೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ದೂರಿನಲ್ಲಿ ಉಲ್ಲೇಖಿಸಲಾಗಿರುವ ಅಪಾದನೆಗಳನ್ನು ಸಾಬೀತುಪಡಿಸುವ ಯಾವುದೇ ಆಧಾರಗಳಿಲ್ಲ ಎಂಬ ಅಭಿಪ್ರಾಯದೊಂದಿಗೆ ವಜಾಗೊಳಿಸಿದ್ದಾರೆ. ದೂರಿನಲ್ಲಿ ಸಿದ್ದರಾಮಯ್ಯ ಸಚಿವ ಕೆ.ಜೆ.ಜಾರ್ಜ್ ಅಂದಿನ ಬಿಬಿಎಂಪಿ ಆಯುಕ್ತ ಐಎಎಸ್ ಅಧಿಕಾರಿ ಮಂಜುನಾಥ ಪ್ರಸಾದ್ ಮತ್ತಿತರರ ವಿರುದ್ಧ ಆಪಾದನೆ ಹೊರಿಸಲಾಗಿತ್ತು.

# ಮಗಳ ನಿಶ್ಚಯ ಕಾರ್ಯ: ಕೊಲೆ ಅಪರಾಧಿಗೆ ಪೆರೋಲ್

• ಉದಯವಾಹಿನಿ ಬೆಂಗಳೂರು

ಕೊಲೆ ಅಪರಾಧದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿ ಏಳು ವರ್ಷಗಳಿಂದ ಜೈಲಿನಲ್ಲಿರುವ ಕೈದಿಯೊಬ್ಬರು ತಮ್ಮ ಮಗಳ ಮದುವೆ ನಿಶ್ಚಯ ಕಾರ್ಯಕ್ಕೆ ಹಾಜರಾಗಲು ಹೈಕೋರ್ಟ್, 60 ದಿನಗಳ ಪೆರೋಲ್ ಮಂಜೂರು ಮಾಡಿದೆ. 'ಮಗಳ ಮದುವೆ ನಿಶ್ಚಯ ಕಾರ್ಯ ನಡೆಸಬೇಕಿದ್ದು, ನನ್ನ ಪತಿ ಫರೀದ್ ಅಲಿಯಾಸ್ ಫಾಹೀದ್‌ಗೆ 90 ದಿನಗಳ ಪೆರೋಲ್ ಮಂಜೂರು ಮಾಡಲು ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಕೋರಿ ಫಾಹಿದ್ ಪತ್ನಿ ಅಫ್ಸಾನ (42) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

# ನಿನ್ನೆ ಬೆಂಗಳೂರು ನಗರದಲ್ಲಿ ಪ್ರತ್ಯೇಕ ರಸ್ತೆ ಅಪಘಾತ: 3 ಜನ ಸಾವು

• ಉದಯವಾಹಿನಿ ಬೆಂಗಳೂರು

ನಗರದಲ್ಲಿ ರಾತ್ರಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಜೆಸಿಬಿ ಅಪರೇಟರ್ ಸೇರಿ ಮೂವರು ಮೃತಪಟ್ಟಿದ್ದಾರೆ.ಖಾಸಗಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸವಾರ ದೇವರಬೀಸನಹಳ್ಳಿ ನಿವಾಸಿ ಮಲ್ಲಪ್ಪ (26) ಮೃತಪಟ್ಟಿರುವ ಘಟನೆ ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ರೈಲು ನಿಲ್ದಾಣದ ಬಳಿ ಘಟನೆ ನಡೆದಿದೆ. ಕಲಬುರಗಿ ಮೂಲದ ಮಲ್ಲಪ್ಪ ವೃತ್ತಿಯಲ್ಲಿ ಜೆಸಿಬಿ ಆಪರೇಟರ್ ಆಗಿದ್ದು, ದೇವರಬೀಸನಹಳ್ಳಿಯಲ್ಲಿ ನೆಲಸಿದ್ದರು. ಭಾನುವಾರ ರಾತ್ರಿ ಯಲಹಂಕದಲ್ಲಿ ಸ್ನೇಹಿತರನ್ನು ಭೇಟಿಯಾಗಿ ವಾಪಸ್ ಮನೆ ಕಡೆಗೆ ಹೊರಟ್ಟಿದ್ದರು. ಕೆ.ಆರ್.ಪುರ ರೈಲು ನಿಲ್ದಾಣದ ಬಳಿ ತೆರಳುವಾಗ ವೇಗವಾಗಿ ಬಂದ ಖಾಸಗಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ದ್ವಿಚಕ್ರ ವಾಹನ ಸಹಿತ ರಸ್ತೆಗೆ ಬಿದ್ದ ಮಲ್ಲಪ್ಪನ ಮೇಲೆ ಆ ಬಸ್‌ನ ಚಕ್ರ ಉರುಳಿದ ಪರಿಣಾಮ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು. ಖಾಸಗಿ ಬಸ್‌ನ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ಈ ಸಂಬಂಧ ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಐಪಿಎಲ್ ಪಂದ್ಯ ವೀಕ್ಷಣೆ ವೇಳೆ ಐಪಿಎಸ್ ಅಧಿಕಾರಿ ಮಕ್ಕಳಿಗೆ ಲೈಂಗಿಕ ಕಿರುಕುಳ

• ಉದಯವಾಹಿನಿ ಬೆಂಗಳೂರು

ಇತ್ತೀಚೆಗೆ ಇಲ್ಲಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದ ವೇಳೆ ಹಿರಿಯ ಐಪಿಎಸ್ ಅಧಿಕಾರಿಯ ಮಕ್ಕಳಿಗೆ ಕಿರುಕುಳ ನೀಡಲಾಗಿದೆ ಎಂದು ಆರೋಪಿಸಲಾಗಿದ್ದು, ಲೈಂಗಿಕ ಕಿರುಕುಳ ಮತ್ತು ಕ್ರಿಮಿನಲ್ ಬೆದರಿಕೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೇ 3 ರಂದು ರಾತ್ರಿ 9.40ರ ಸುಮಾರಿಗೆ ಚಿನ್ನಸ್ವಾಮಿ ಕ್ರೀಡಾಂಗಣದ ಡೈಮಂಡ್ ಬಾಕ್ಸ್‌ನಲ್ಲಿ ಈ ಘಟನೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ. ದೂರುದಾರರಾದ ಐಪಿಎಸ್ ಅಧಿಕಾರಿಯ ಪತ್ನಿಯ ಪ್ರಕಾರ, ಇಬ್ಬರು ಅಪರಿಚಿತ ವ್ಯಕ್ತಿಗಳು ತಮ್ಮ ಮಗನನ್ನು (22) ನಿಂದಿಸಿದ್ದಾರೆ ಮತ್ತು ಅವರ ಮಗಳನ್ನು (26) ಅನುಚಿತವಾಗಿ ಸ್ಪರ್ಶಿಸಿದ್ದಾರೆ. ಅಪರಿಚಿತರು ಜೋರಾಗಿ ಕೂಗುವ ಮೂಲಕ ಬೆದರಿಕೆ ಹಾಕಿದ್ದಾರೆ ಮತ್ತು ತಮ್ಮ ಮಕ್ಕಳಿಗೆ ತೊಂದರೆ ನೀಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಅವರು ಆಕೆಯ ಮಗಳನ್ನು ಸಹ ನಿಂದಿಸಿದ್ದು, ಅವಳೊಂದಿಗೆ 'ಅಸಭ್ಯವಾಗಿ' ವರ್ತಿಸಿದ್ದಾರೆ. ದೂರುದಾರರು ಇಡೀ ಘಟನೆಯನ್ನು ತಮ್ಮ ಮಗ ತನ್ನ ಮೊಬೈಲ್ ಫೋನ್‌ನಲ್ಲಿ ರೆಕಾರ್ಡ್ ಮಾಡಿದ್ದಾನೆ ಎಂದು ಹೇಳಿಕೊಂಡಿದ್ದಾರೆ. ಘಟನೆಯಲ್ಲಿ ಭಾಗಿಯಾಗಿರುವ ಶಂಕಿತರಲ್ಲಿ ಒಬ್ಬರು ಆದಾಯ ತೆರಿಗೆ ಇಲಾಖೆಯ ಹಿರಿಯ ಅಧಿಕಾರಿಯಾಗಿದ್ದಾರೆ. ದೂರಿನ ಆಧಾರದ ಮೇಲೆ, ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ವಿಚಾರಣಾಧೀನ ಕೈದಿಯಿಂದ 8.71 ಲಕ್ಷ ರೂ. ವಶಪಡಿಸಿಕೊಂಡ ಸಿಸಿಬಿ

• ಉದಯವಾಹಿನಿ ಬೆಂಗಳೂರು

ಮಾದಕ ವಸ್ತು ಕಳ್ಳ ಸಾಗಣಿಕೆಯಿಂದ ಅಕ್ರಮವಾಗಿ ಆರೋಪಿ ಗಳಿಸಿದ್ದ 8.71 ಲಕ್ಷ ರು ಹಣವನ್ನು ಸಿಸಿಬಿ ಪೊಲೀಸರು ಮುಟ್ಟಗೋಲು ಹಾಕಿಕೊಂಡಿದ್ದಾರೆ.

ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಪರಪ್ಪನ ಅಗ್ರಹಾರದಲ್ಲಿ ವಿಚಾರಣಾಧೀನ ಕೈದಿಯಾಗಿರುವ 32 ವರ್ಷದ ಅಮೀರ್ ಖಾನ್ ಜೈಲಿನಿಂದಲೇ ತನ್ನ ಮಾದಕ ದ್ರವ್ಯ ಜಾಲವನ್ನು ನಡೆಸುತ್ತಲೇ ಇದ್ದ. ಆತ ಒಂದು ವರ್ಷಕ್ಕೂ ಹೆಚ್ಚು ಕಾಲ ಕೇಂದ್ರ ಕಾರಾಗೃಹದಲ್ಲಿದ್ದ, ಆತನ ವಿರುದ್ಧ 2 ಪ್ರಕರಣಗಳು ದಾಖಲಾಗಿದ್ದು, ಸದ್ಯ ವಿಚಾರಣೆಯ ಹಂತದಲ್ಲಿವೆ. ನಗರದಲ್ಲಿ ಮೊದಲು ಮಾದಕ ದ್ರವ್ಯ ಗ್ರಾಹಕನನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಮಾದಕ ದ್ರವ್ಯಗಳನ್ನು ಎಲ್ಲಿಗೆ ತಲುಪಿಸಬೇಕು ಮತ್ತು ಯಾವ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಯಿಸಬೇಕು ಎಂಬುದರ ಕುರಿತು ಖಾನ್ ಫೋನ್ ಮೂಲಕ ಸೂಚನೆ ನೀಡುತ್ತಿದ್ದ ಎಂದು ಮಾರಾಟಗಾರ ಬಹಿರಂಗಪಡಿಸಿದ್ದಾನೆ. ಖಾನ್ ಮಾದಕ ದ್ರವ್ಯ ಗ್ರಾಹಕರ ಡೇಟಾವನ್ನು ಹೊಂದಿದ್ದು, ಫೋನ್ ಮೂಲಕ ಸಂವಹನ ನಡೆಸಿದ್ದ. ಬ್ಯಾಂಕ್ ವಿವರಗಳು ಮತ್ತು ಫೋನ್ ದಾಖಲೆಗಳನ್ನು ಪತ್ತೆಹಚ್ಚಿದ ನಂತರ, ಸಿಸಿಬಿ ಅಧಿಕಾರಿಗಳು ಖಾನ್ನೈವಾಡವನ್ನು ಶಂಕಿಸಿ ಜೈಲಿನ ಮೇಲೆ ದಾಳಿ ನಡೆಸಿದರು. ಆದಾಗ್ಯೂ, ಆ ಹೊತ್ತಿಗೆ ಖಾನ್ ತನ್ನ ಮೊಬೈಲ್ ಫೋನ್ ನಾಶಪಡಿಸಿದ್ದ ಎಂದು ಹೇಳಲಾಗಿದೆ.


# ಅನಧಿಕೃತ ಕಟ್ಟಡಗಳಿಗೆ ನೀರು, ವಿದ್ಯುತ್ ಸಂಪರ್ಕ ಕಡಿತಗೊಳಿಸಲು ತೀರ್ಮಾನ

## ಬಿಲ್ಡರ್‌ಗಳ ಅಕ್ರಮ ತಡೆಗೆ ಬಿಬಿಎಂಪಿ ಮಾರ್ಗಸೂಚಿ: ಮುಚ್ಚಳಿಕೆ ಕೊಟ್ಟರಷ್ಟೇ ಕಟ್ಟಡಗಳ ನಕ್ಷೆ ಮಂಜೂರಾತಿ

• ಉದಯವಾಹಿನಿ ಬೆಂಗಳೂರು

ಮಹಾನಗರದಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಹಾಕಲು ಇನ್ನಿಲ್ಲದ ಕಸರತ್ತು ನಡೆಸುತ್ತಿರುವ ಬಿಬಿಎಂಪಿಯು, ಒಸಿ ಮತ್ತು ಸಿಸಿ ಪಡೆದ ನಂತರವಷ್ಟೇ ಫ್ಲ್ಯಾಟ್‌ಗಳನ್ನು ಖರೀದಿದಾರರಿಗೆ ವರ್ಗಾಯಿಸುವುದಾಗಿ ಬಿಲ್ಡರ್‌ಗಳು ಅಥವಾ ಮಾಲೀಕರು ಮುಚ್ಚಳಿಕೆ ಪ್ರಮಾಣ ಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ.

ಬಿಬಿಎಂಪಿಯಿಂದ ಪಡೆಯುವ ನಕ್ಷೆ ಮಂಜೂರಾತಿಗೆ ಅನುಗುಣವಾಗಿ ಕಟ್ಟಡ ನಿರ್ಮಿಸಿ, ಪೂರ್ಣತಾ ಪ್ರಮಾಣಪತ್ರ, ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ನಂತರವೇ ಖರೀದಿದಾರರಿಗೆ ಫ್ಲ್ಯಾಟ್ ಅಥವಾ ಮನೆಗಳನ್ನು ನೋಂದಣಿ ಮಾಡಿಕೊಡುವುದಾಗಿ ಮುಚ್ಚಳಿಕೆ ಪ್ರಮಾಣಪತ್ರ ಸಲ್ಲಿಸಿದರಷ್ಟೇ ನಕ್ಷೆ ಮಂಜೂರಾತಿ ನೀಡಲು ತೀರ್ಮಾನಿಸಲಾಗಿದೆ. ಕಟ್ಟಡ ಮಾಲೀಕರು ನಕ್ಷೆ ಮಂಜೂರಾತಿ, ಕಟ್ಟಡ ಪ್ರಾರಂಭಿಕ ಪ್ರಮಾಣಪತ್ರ ಪಡೆದ ನಂತರ ಸ್ವಾಧೀನಾನು ಭವ ಪ್ರಮಾಣಪತ್ರಗಳನ್ನೇ (ಒಸಿ) ಪಡೆಯುತ್ತಿಲ್ಲ. ಅನುಮತಿಗಿಂತ ಹೆಚ್ಚುವರಿ ಅಂತಸ್ತುಗಳ ನಿರ್ಮಾಣ ಅಥವಾ ನಿಯಮ ಉಲ್ಲಂಘಿಘಿಸಿ ಕಟ್ಟಡಗಳನ್ನು ನಿರ್ಮಿಸಿರುವ ಮಾಲೀಕರು ಹಾಗೂ




**ಏನಿದು ಹೊಸ ರೂಲ್ಸ್ ಇಲ್ಲಿದೆ ಮಾಹಿತಿ**

ಬಿಲ್ಡರ್‌ಗಳು ಒಸಿ ಪಡೆಯಲು ಮುಂದಾಗುತ್ತಿಲ್ಲ. ಇದರಿಂದ ಪಾಲಿಕೆಗೆ ಕೋಟ್ಯಂತರ ರೂ. ನಷ್ಟವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಅಕ್ರಮ ಕಟ್ಟಡಗಳಿಗೆ ಕಡಿವಾಣ ಹಾಕಲು ಪಾಲಿಕೆಯು ಮಾರ್ಗಸೂಚಿಗಳನ್ನು ರೂಪಿಸಿದೆ. ನಗರದಲ್ಲಿ ಕಟ್ಟಡ ಕುಸಿತ ಪ್ರಕರಣಗಳಲ್ಲಿ ಪ್ರಾಣ ಹಾನಿ ಸಂಭವಿಸಿದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಪಾಲಿಕೆಯು, ಸಮೀಕ್ಷೆ ಕೈಗೊಂಡು ಸಾವಿರಾರು ಅನಧಿಕೃತ ಕಟ್ಟಡಗಳನ್ನು ಗುರುತಿಸಿದೆ. ಆದರೆ, ಈವರೆಗೆ ತೆರವು ಕಾರ್ಯ ಕೈಗೊಂಡಿಲ್ಲ. ಇದರಿಂದ ನಿಯಮ ಉಲ್ಲಂಘಿಸಿ ನಿರ್ಮಾಣಗೊಳ್ಳುವ ಕಟ್ಟಡಗಳಿಗೆ ಕಡಿವಾಣ ಬೀಳದಂತಾಗಿದೆ.

**ಅಧಿಕಾರಿಗಳ ಹೆಗಲಿಗೆ ಅಕ್ರಮ ತಡೆ ಹೊಣೆ:** ಪಾಲಿಕೆಯಿಂದ ಮಂಜೂರಾದ ನಕ್ಷೆಯಂತೆ ಕಟ್ಟಡ ನಿರ್ಮಾಣವಾಗುತ್ತಿರುವ ಕುರಿತು ಆಯಾ ವಲಯಗಳ ಕಾರ್ಯ ವ್ಯಾಪ್ತಿಯ ಸಂಬಂಧಪಟ್ಟ ನಗರ ಯೋಜಕರು ಹಾಗೂ ಸಹಾಯಕ ನಿರ್ದೇಶಕರು ಪ್ರತಿ ಎರಡು ತಿಂಗಳಿಗೊಮ್ಮೆ ಸ್ಥಳ ಪರಿಶೀಲನೆ ಕೈಗೊಂಡು ವರದಿಯನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕು. ನಕ್ಷೆ ಮಂಜೂರಾತಿ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ್ದರೆ, ಅಂಥ ಉಲ್ಲಂಘನೆಗಳ ವಿರುದ್ಧ ಆಯಾ ಉಪ ವಿಭಾಗಗಳ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳಿಗೆ ವರದಿ ಕಳುಹಿಸಬೇಕೆಂದು ಮುಖ್ಯ ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಹಾಗೆಯೇ, ಆಯಾ ವಾರ್ಡ್‌ಗಳ ಸಹಾಯಕ ಎಂಜಿನಿಯರ್‌ಗಳು ಹಾಗೂ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳು ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳನ್ನು ಪರಿಶೀಲಿಸಿ ಕ್ರಮ ಜರುಗಿಸಬೇಕು. ಆನಂತರ ಉಲ್ಲಂಘನೆಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಬೇಕು. ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ನಕ್ಷೆ

### ಅನಧಿಕೃತ ಕಟ್ಟಡಗಳ ವಿರುದ್ಧ ಕ್ರಮ

**ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ನಂತರ ಹೆಚ್ಚುವರಿ ನಿರ್ಮಾಣ, ಉಲ್ಲಂಘನೆಗಳು ಕಂಡು ಬಂದಲ್ಲಿ ಆಯಾ ವಾರ್ಡ್‌ನ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಸಹಾಯಕ ಎಂಜಿನಿಯರ್‌ಗಳು ಉಲ್ಲಂಘನೆಗಳ ಕುರಿತ ಮಾಹಿತಿಯನ್ನು ಸಂಬಂಧಿ ಸಿದ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳಿಗೆ ವರದಿ ಸಲ್ಲಿಸಬೇಕು. ಆನಂತರ ಅನಧಿಕೃತ ನಿರ್ಮಾಣದ ವಿರುದ್ಧ ಮಾರ್ಗಸೂಚಿಯಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.**

ಮಂಜೂರಾತಿಯಂತೆ ಅಥವಾ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಬಗ್ಗೆ ಕಾಲಕಾಲಕ್ಕೆ ಪರಿಶೀಲಿಸಿ ವರದಿ ಸಲ್ಲಿಸುವ ಜವಾಬ್ದಾರಿಯನ್ನು ಹಲವು ಅಧಿಕಾರಿಗಳಿಗೆ ವಹಿಸಲಾಗಿದೆ. ಕಟ್ಟಡಗಳ ತಪಾಸಣೆಯನ್ನು ಜನವರಿ, ಮಾರ್ಚ್, ಮೇ, ಸೆಪ್ಟೆಂಬರ್, ನವೆಂಬರ್ ತಿಂಗಳ ಪ್ರಥಮಾರ್ಧದಲ್ಲಿ ಕೈಗೊಳ್ಳಬೇಕು. ಕೇಂದ್ರ ಕಚೇರಿ ವ್ಯಾಪ್ತಿಯಲ್ಲಿ ನಗರ ಯೋಜನೆಯ ಉಪ ನಿರ್ದೇಶಕರು ಕಾಲಕಾಲಕ್ಕೆ ತಪಾಸಣೆ ಕೈಗೊಂಡು ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವ ಕಾರ್ಯದ ಮೇಲ್ವಿಚಾರಣೆ ನಡೆಸಬೇಕು ಎಂದು ನಿರ್ದೇಶನ ನೀಡಲಾಗಿದೆ.

ಬಿಬಿಎಂಪಿ ಕಾಯಿದೆ 2020ರ ಕಲಂ 248(3) ಅಡಿಯಲ್ಲಿ ಆದೇಶ ಹೊರಡಿಸಿದ ತಕ್ಷಣ ಅನಧಿಕೃತ ಕಟ್ಟಡಕ್ಕೆ ಒದಗಿಸಿರುವ ತಾತ್ಕಾಲಿಕ ಅಥವಾ ಶಾಶ್ವತ ಸೇವಾ ಸಂಪರ್ಕಗಳನ್ನು ಕಡಿತಗೊಳಿಸುವಂತೆ ವಲಯ ಆಯುಕ್ತರು ಬೆಸ್ಕಾಂ ಮತ್ತು ಜಲಮಂಡಳಿಗೆ ಪತ್ರ ಬರೆಯಬೇಕೆಂದು ಸೂಚಿಸಲಾಗಿದೆ.

**ಅಧಿಕಾರಿಗಳಿಗೆ ಶಿಕ್ಷೆಯ ಎಚ್ಚರಿಕೆ:** ಪಾಲಿಕೆಯಿಂದ ಹೊರಡಿಸಿರುವ ಮಾರ್ಗಸೂಚಿಯಂತೆ ಕರ್ತವ್ಯ ನಿರ್ವಹಿಸದೆ ಅನಧಿಕೃತ ಕಟ್ಟಡಗಳನ್ನು ತಡೆಯಲು ವಿಫಲರಾಗುವ ಮತ್ತು ಉಲ್ಲಂಘನೆ ಭಾಗಗಳನ್ನು ತೆರವು ಮಾಡದೆ ನಿರ್ಲಕ್ಷ್ಯ ವಹಿಸುವ ಅಧಿಕಾರಿ, ಸಿಬ್ಬಂದಿ ವಿರುದ್ಧ ಬಿಬಿಎಂಪಿ ಕಾಯಿದೆ-2020ರ ಕಲಂ 252, ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿ ಇಲಾಖೆ ವಿಚಾರಣೆ ಕೈಗೊಂಡು ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

# ಹೆಚ್‌ಡಿಕೆ ಆರೋಗ್ಯ ಕುರಿತು ಹರಡಿದ ವದಂತಿ; ನಿಖಿಲ್ ಕುಮಾರಸ್ವಾಮಿ ಸ್ಪಷ್ಟನೆ

• ಉದಯವಾಹಿನಿ ಬೆಂಗಳೂರು



ಕೇಂದ್ರ ಸಚಿವ ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಆರೋಗ್ಯ ಸಮಸ್ಯೆ ಕುರಿತು ವದಂತಿಗಳು ಹರಡಿದ್ದು, ಈ ಬಗ್ಗೆ ಕುಮಾರಸ್ವಾಮಿಯವರ ಪುತ್ರ ಹಾಗೂ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿಯವರು ಸ್ಪಷ್ಟನೆ ನೀಡಿದ್ದಾರೆ.

ಮಂಡ್ಯ ಜಿಲ್ಲೆಯ ಬೆಟ್ಟಹಳ್ಳಿ ಗ್ರಾಮದಲ್ಲಿ ಸೋಮೇಶ್ವರಸ್ವಾಮಿ ದೇವಸ್ಥಾನದ ಪುನರ್ ಪ್ರತಿ ಷ್ಠಾಪನೆ ಮತ್ತು ಶಿಖರ ಕಳಸ ಪ್ರತಿಷ್ಠಾಪನಾ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಮಾರಣ್ಣ ಅರೋಗ್ಯ ಸರಿ ಇಲ್ಲ ಅಂತ ರಾಜ್ಯದಲ್ಲೆಡೆ ಚರ್ಚೆಗಳು ಶುರುವಾಗಿದೆ, ಸೋಮೇಶ್ವರ ಸ್ವಾಮಿಯ ಸನ್ನಿಧಿ ಯಲ್ಲಿ ನಿಂತು ಒಂದು ಮಾತನ್ನು ತಿಳಿಸುತ್ತೇನೆ. ಅವರ ತಂದೆ ತಾಯಿ ಆಶೀರ್ವಾದ, ಭಗವಂತನ ಕೃಪೆ, ಜೊತೆಯಲ್ಲಿ ನಿಮ್ಮೆಲ್ಲರ ಪ್ರೀತಿಯ ಹಾರೈಕೆಯಿಂದ ಸನ್ಮಾನ್ಯ ಕುಮಾರಣ್ಣ ಅವರು ಆರೋಗ್ಯವಾಗಿದ್ದಾರೆ. ಯಾವುದೇ ಆರೋಗ್ಯದ ಸಮಸ್ಯೆ ಇಲ್ಲ, ಯಾರು ಕೂಡ ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಈ ಹಿಂದೆ ಮೂರು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಕುಮಾರಸ್ವಾಮಿಯವರು, ಇತ್ತೀಚೆಗಷ್ಟೇ ಆರೋಗ್ಯ ಪರೀಕ್ಷೆಗಾಗಿ ಅಪೋಲೋ ಆಸ್ಪತ್ರೆಯಲ್ಲಿ ದೀರ್ಘಕಾಲ ಸಮಯ ಕಳೆದಿದ್ದು, ಬಳಿಕ ಜಿಂದಾಲ್ ನೇಚರ್‌ಕ್ಯೂರ್ ಸಂಸ್ಥೆಗೂ ಭೇಟಿ ನೀಡಿದ್ದಾರೆನ್ನಲಾಗಿದ್ದು, ಈ ಬೆಳವಣಿಗೆ ಅವರ ಆರೋಗ್ಯ ಸಮಸ್ಯೆ ಕುರಿತು ಊಹಾಪೋಹಗಳಿಗೆ ಕಾರಣವಾಗಿದೆ.

**ಕುಮಾರಣ್ಣ ಅವರು 2ನೇ ಬಾರಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಮೂರು ವಿದ್ಯುತ್ ಉತ್ಪಾದಕ ಘಟಕಗಳನ್ನು ಮತ್ತು ನೀರಾವರಿಗೆ 200 ಕೋಟಿಗೂ ಹೆಚ್ಚು ಅನುದಾನವನ್ನು ನೀಡಿ ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಕುಮಾರಣ್ಣ ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆಂದು ತಿಳಿಸಿದರು.**

# ಮೊಬೈಲ್ ಲೌಡ್‌ಸ್ಪೀಕರ್ ವಿಚಾರಕ್ಕೆ ಪತ್ನಿಯ ಕೊಂದ ಪತಿಯ ಬಂಧನ

• ಉದಯವಾಹಿನಿ ಬೆಂಗಳೂರು

ಮೊಬೈಲ್ ಫೋನ್ ಲೌಡ್ ಸ್ಪೀಕರ್ ಹಾಕುವ ವಿಚಾರಕ್ಕೆ ದಂಪತಿ ನಡುವೆ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಪತ್ನಿಯನ್ನು ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ ಪತಿಯನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಹಾಗಣಪತಿನಗರ ನಿವಾಸಿ ಲೋಕೇಶ್ ಕುಮಾರ್ ಗೆಹಲೋಟ್ (43) ಬಂಧಿತ. ಈತ ಏ.24ರಂದು ಸಂಜೆ ಸುಮಾರು 6 ಗಂಟೆಗೆ ಪತ್ನಿ ನಮಿತಾ ಸಾಹು (43) ಜತೆಗೆ ಜಗಳ ತೆಗೆದು ಕೊಲೆ ಮಾಡಿ ಪರಾರಿಯಾಗಿದ್ದ. ಈ ಸಂಬಂಧ ನೀಡಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ರಾಜಸ್ಥಾನ ಮೂಲದ ಲೋಕೇಶ್ ಕಬ್ಬನ್‌ಪೇಟೆಯಲ್ಲಿ ಫೋಟೋ ಸ್ಟುಡಿಯೋ ನಡೆಸುತ್ತಿದ್ದ. ಐದು ವರ್ಷಗಳ ನಮಿತಾ ಸಾಹುರನ್ನು ಮದುವೆ ಆಗಿದ್ದ. ದಂಪತಿಗೆ 3 ವರ್ಷದ ಹೆಣ್ಣು ಮಗುವಿದ್ದು, ಬಸವೇಶ್ವರನಗರದ ಮಹಾಗಣಪತಿ ನಗರದ ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ಆರೋಪಿ ಲೋಕೇಶ್ ಏ.24ರಂದು ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ. ಈ ವೇಳೆ ಪತ್ನಿಯ ಅಣ್ಣ ಸತ್ಯಂ, ಲೋಕೇಶ್ ಮೊಬೈಲ್‌ಗೆ ಕರೆ ಮಾಡಿದ್ದರಿಂದ ಆತನೊಂದಿಗೆ ಮಾತನಾಡುತ್ತಿದ್ದ. ಆಗ ಪತ್ನಿ ನಮಿತಾ ಯಾರು ಕರೆ ಮಾಡಿರುವುದು ಎಂದು ಕೇಳಿದ್ದಾರೆ. ಅದಕ್ಕೆ ನಿಮ್ಮ ಅಣ್ಣ ಎಂದು ಲೋಕೇಶ್ ಹೇಳಿದ್ದಾನೆ. ಹಾಗಾದರೆ, ಲೌಡ್ ಸ್ಪೀಕರ್ ಹಾಕಿಕೊಂಡು ಮಾತನಾಡಿ ಎಂದು ನಮಿತಾ ಹೇಳಿದ್ದಾಳೆ ಅಷ್ಟಕ್ಕೆ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳ ಶುರುವಾಗಿದೆ. ಜಗಳ ವಿಕೋಪಕ್ಕೆ ತಿರುಗಿ ಲೋಕೇಶ್ ರೊಚ್ಚಿಗೆದ್ದು ಪತ್ನಿ ಮೇಲೆ ಹಲ್ಲೆ ಮಾಡಿದ್ದಾನೆ. ಬಳಿಕ ಆಕೆಯನ್ನು ನೆಲಕ್ಕೆ ಕೆಡವಿ ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ. ನಮಿತಾ ಅವರ ಕುಟುಂಬ ಸದಸ್ಯರು, ಗೆಹ್ಲೋಟ್ ತಮ್ಮ ಫೋಟೋ ಸ್ಟುಡಿಯೋ ಅಭಿವೃದ್ಧಿಪಡಿಸಲು ಮತ್ತು ನಗರದಲ್ಲಿ ಒಂದು ನಿವೇಶನ ಖರೀದಿಸಲು ಹಣಕ್ಕಾಗಿ ಕಿರುಕುಳ ನೀಡುತ್ತಿದ್ದರು ಎಂದು ಆರೋಪಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

# ಗ್ರಾಮದಲ್ಲೂ ಕುಡಿಯುವ ನೀರಿನ ಸಮಸ್ಯೆ ಎದುರಾಗಬಾರದು: ಅಧಿಕಾರಿಗಳಿಗೆ ಸಿಎಂ ಸೂಚನೆ

• ಉದಯವಾಹಿನಿ ಬೆಂಗಳೂರು




ರಾಜ್ಯದ ಒಂದೇ ಒಂದು ಗ್ರಾಮದಲ್ಲೂ ಶುದ್ಧ ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ಸಮಸ್ಯೆಯಾಗಬಾರದು ಎಂದು ಅಧಿಕಾರಿಗಳಿಗೆ ಸಿದ್ದರಾಮಯ್ಯ ಅವರು ಖಡಕ್ ಸೂಚನೆ ನೀಡಿದ್ದಾರೆ. ವಿಧಾನಸೌಧದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಉಸ್ತುವಾರಿ ಕಾರ್ಯದರ್ಶಿಗಳೊಂದಿಗೆ ವೀಡಿಯೋ ಸಂವಾದ ನಡೆಸಿದರು.

ರಾಜ್ಯದಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿನ ನಿರ್ವಹಣೆಗೆ ಹಣಕಾಸು ಕೊರತೆಯಿಲ್ಲ. ಪಂಚಾಯತ್ ರಾಜ್ ಇಲಾಖೆಗೆ 60 ಕೋಟಿ ರೂ. ಈಗಾಗಲೇ ಬಿಡುಗಡೆ ಮಾಡಲಾಗಿದೆ. ಜಿಲ್ಲೆಗಳಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿ, ಟಾಸ್ಕ್ ಫೋರ್ಸ್‌ನಿಂದ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸಬೇಕು ಎಂದು ಸೂಚನೆ ನೀಡಿದರು. ಪ್ರತಿ ವರ್ಷ ಕುಡಿಯುವ ನೀರಿನ ತೊಂದರೆ ಎದುರಿಸುತ್ತಿರುವ ಗ್ರಾಮಗಳಲ್ಲಿ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸಲು ಯೋಜನೆ ರೂಪಿಸಬೇಕು. ಅಗತ್ಯಬಿದ್ದರೆ ಮಾತ್ರ ಬೋರ್‌ವೆಲ್‌ಗಳನ್ನು ಕೊರೆಯಬೇಕು. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಬೋರ್‌ವೆಲ್ ಕೊರೆದು ವೆಚ್ಚ ಮಾಡಬಾರದು. ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ವಾಡಿಕೆಗಿಂತ ಶೇಕಡಾ 55ರಷ್ಟು ಮಾನ್ಸೂನ್ ಪೂರ್ವ ಮಳೆ ಹೆಚ್ಚಾಗಿದೆ. ವಾಡಿಕೆಗಿಂತ ಯಾವುದೇ ಜಿಲ್ಲೆಯಲ್ಲಿ ಕಡಿಮೆ ಮಳೆ ದಾಖಲಾಗಿಲ್ಲ. 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಎಲ್ಲಾ ಜಲಾಶಯಗಳಲ್ಲಿ ಶೇ.50ರಿಂದ ಶೇ.60ರಷ್ಟು ಹೆಚ್ಚಿನ ನೀರಿನ ಸಂಗ್ರಹವಿದೆ. ಈ ವರ್ಷ ವಾಡಿಕೆಗಿಂತ ಹೆಚ್ಚು ಮುಂಗಾರು ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಾನ್ಸೂನ್ ವಿಳಂಬವಾದರೆ 6,319 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು ಎಂದು ಗುರುತಿಸಲಾಗಿದೆ. ಪ್ರಸ್ತುತ 551 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 123 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಅಗತ್ಯ ಸಂದರ್ಭದಲ್ಲಿ ನೀರು ಪಡೆಯಲು ಈಗಾಗಲೇ 3ಸಾವಿರ ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದ್ದು, 480 ಬೋರ್‌ವೆಲ್‌ಗಳನ್ನು ಖಾಸಗಿಯವರಿಂದ ಬಾಡಿಗೆ ಪಡೆದು ನೀರು ಒದಗಿಸಲಾಗುತ್ತಿದೆ. ರಾಜ್ಯದ ಯಾವುದೇ ಒಂದು ಹಳ್ಳಿಯಲ್ಲೂ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಅಗತ್ಯ ವ್ಯವಸ್ಥೆಯನ್ನು ಈಗಲೇ ಮಾಡಬೇಕೆಂದು ಸೂಚನೆ ನೀಡಿದರು.

# ಹಬ್ಬ, ಶುಭಾಶಯ ನೆಪದಲ್ಲಿ ಬರುವ ಎಪಿಕೆ ಫೈಲ್ ಡೌನ್‌ಲೋಡ್ ಮಾಡಿದ್ರೆ ಆಪತ್ತು

• ಉದಯವಾಹಿನಿ ಬೆಂಗಳೂರು

ಸಂಚಾರ ನಿಯಮ ಉಲ್ಲಂಘನೆಗೆ ದಂಡ ಪಾವತಿಸಿ ಎಂದು ಅಪರಿಚಿತರು ವಾಟ್ಸಾಪ್‌ಗೆ ಅಂಡ್ರಾಯ್ಡ್ ಪ್ಯಾಕೇಜ್ ಕಿಟ್ (ಎಪಿಕೆ) ಫೈಲ್ ಕಳಿಸಿದರೆ ತಕ್ಷಣ ಲಿಂಕ್ ಕ್ಲಿಕ್ ಮಾಡಬೇಡಿ. ಒಂದು ವೇಳೆ ಕ್ಲಿಕ್ ಮಾಡಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಜತೆಗೆ ಬ್ಯಾಂಕ್ ಖಾತೆಯಲ್ಲಿರುವ ಹಣವೂ ಕೆಲವೇ ಕ್ಷಣಗಳಲ್ಲಿ ಮಾಯವಾಗಲಿದೆ..! ಹತ್ತಾರು ವೇಷ ಧರಿಸಿ ಸಾರ್ವಜನಿಕರ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕುತ್ತಿರುವ ಸೈಬರ್ ಖದೀಮರು, ಈಗ ಸಂಚಾರ ಪೊಲೀಸರ ಹೆಸರಿನಲ್ಲೂ ವಂಚನೆ ಮಾಡುತ್ತಿದ್ದಾರೆ. ದಂಡ ಪಾವತಿಯ ಎಪಿಕೆ ಫೈಲ್‌ಗಳ ಲಿಂಕ್ ಕಳುಹಿಸಿ ಹಣ ವರ್ಗಾವಣೆ ಮಾಡಿಕೊಳ್ಳುತ್ತಿರುವುದು ಮುಂದುವರಿದಿದೆ. ಸೈಬರ್ ವಂಚಕರ ಹೊಸ ತಂತ್ರಕ್ಕೆ ಸಿಲುಕಿದ ಕೆಂಗೇರಿ ಉಪನಗರದ ಎನ್. ಎಸ್. ಶಿವಾನಂದಸ್ವಾಮಿ (58) ತಮ್ಮ ತಾಯಿಯ ಬ್ಯಾಂಕ್ ಖಾತೆಯಲ್ಲಿನ 1.50 ಲಕ್ಷ ರೂ. ಕಳೆದುಕೊಂಡಿದ್ದಾರೆ. ಈ ಕುರಿತು ಶಿವಾನಂದಸ್ವಾಮಿ ನೀಡಿರುವ ದೂರು ಆಧರಿಸಿ ಅಪರಿಚಿತರ ವಿರುದ್ಧ




ಪ್ರಕರಣ ದಾಖಲಿಸಿಕೊಂಡಿರುವ ಕೆಂಗೇರಿ ಠಾಣೆ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

**1 ರೂ. ಕಳಿಸಿ 1.50 ಲಕ್ಷ ರೂ. ದೋಚಿದ್ರು:** ಶಿವಾನಂದಸ್ವಾಮಿ ಅವರ 80 ವರ್ಷದ ವೃದ್ಧೆ ತಾಯಿ ಗಂಗಮ್ಮ ಹೆಸರಿನಲ್ಲಿ ಕೆನರಾ ಬ್ಯಾಂಕ್ ಖಾತೆಯಿದ್ದು, ಖಾತೆಗೆ ಶಿವಾನಂದ ಸ್ವಾಮಿ ಅವರ ಮೊಬೈಲ್ ನಂಬರ್ ಲಿಂಕ್ ಆಗಿತ್ತು.

ಏ.9ರಂದು ಬೆಳಗ್ಗೆ 8 ಗಂಟೆ ಸುಮಾರಿಗೆ ಗಂಗಮ್ಮ ಬ್ಯಾಂಕ್ ಖಾತೆಗೆ 1 ರೂ. ಸಂದಾಯವಾಗಿತ್ತು. ಇದಾದ ಬಳಿಕ ಶಿವಾನಂದಸ್ವಾಮಿ ವಾಟ್ಸಾಪ್ ನಂಬರ್‌ಗೆ ಅಪರಿಚಿತ ನಂಬರ್‌ನಿಂದ ಎಪಿಕೆ ಫೈಲ್ ಬಂದಿದ್ದು, 'ನಿಮ್ಮ ವಾಹನದ ಸಂಚಾರ ನಿಯಮ ಉಲ್ಲಂಘನೆ ದಂಡ ಬಾಕಿ ಉಳಿದಿದೆ. ಎಪಿಕೆ ಫೈಲ್‌ನ ಲಿಂಕ್ ಕ್ಲಿಕ್ ಮಾಡಿ ದಂಡ ಪಾವತಿಸಿ, ಇಲ್ಲದಿದ್ದರೆ ವಾರೆಂಟ್ ಜಾರಿಯಾಗಲಿದ್ದು ಬಂಧಿಸಬೇಕಾಗುತ್ತದೆ' ಎಂಬ ಸಂದೇಶವಿತ್ತು.

ಪೊಲೀಸರ ಕಡೆಯಿಂದಲೇ ಸಂದೇಶ ಬಂದಿರಬಹುದು ಎಂದು ಭಾವಿಸಿದ ಶಿವಾನಂದ ಅವರು, ಎಪಿಕೆ ಫೈಲ್ ಲಿಂಕ್ ಕ್ಲಿಕ್ ಮಾಡಿದ್ದಾರೆ. ತಕ್ಷಣ ಮೊಬೈಲ್ ಹ್ಯಾಕ್ ಆಗಿದ್ದು, ಕೆಲ ನಿಮಿಷ ವರ್ಕ್ ಆಗಿಲ್ಲ. ಇದಾದ ಬಳಿಕ ಮೊಬೈಲ್ ಕಾರ್ಯನಿರ್ವಹಣೆಗೆ ಲಭ್ಯವಾಗಿದ್ದು, ಗಂಗಮ್ಮನ ಖಾತೆಯಲ್ಲಿದ್ದ 1.50 ಲಕ್ಷ ರೂ. ಕಡಿತಗೊಂಡಿರುವ ಸಂದೇಶ ಬಂದಿದೆ. ಸೈಬರ್ ವಂಚನೆ ಬಳಿಕ ಎಚ್ಚೆತ್ತ ಶಿವಾನಂದ ಅವರು ಸೈಬರ್ ಸಹಾಯವಾಣಿ 1930ಗೆ ಕರೆ ಮಾಡಿ ದೂರು ನೀಡಿದ್ದಾರೆ. ಬಳಿಕ ಕೆಂಗೇರಿ ಠಾಣೆಯಲ್ಲೂ ದೂರು ಸಲಿಸಿದ್ದಾರೆ.

ವಂಚನೆ ಬಗ್ಗೆ 'ವಿಜಯ ಕರ್ನಾಟಕ' ಜತೆ ಮಾತನಾಡಿದ ಶಿವಾನಂದ, ''ಪೊಲೀಸರೇ ಸಂದೇಶ ಕಳಿಸಿರಬಹುದು ಎಂದು ಅಚಾನಕ್ಕಾಗಿ ಎಪಿಕೆ ಫೈಲ್ ಲಿಂಕ್ ಕ್ಲಿಕ್ ಮಾಡಿದೆ. ಕೂಡಲೇ ನನ್ನ ಮೊಬೈಲ್ ಹ್ಯಾಕ್ ಮಾಡಿದ್ದ ಸೈಬರ್ ವಂಚಕರು, ಬ್ಯಾಂಕ್ ಖಾತೆ ವಿವರ ಸಂಗ್ರಹಿಸಿದ್ದಾರೆ. ಬಳಿಕ ಆಟೋಮ್ಯಾಟಿಕ್ ಒಟಿಪಿಯನ್ನು ಅವರೇ ಪಡೆದು ಕೊಂಡು ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ನಮ್ಮ ತಾಯಿ ಬ್ಯಾಂಕ್ ಖಾತೆಯಲ್ಲಿದ್ದ ಹಣ ಪೂರ್ತಿ ದೋಚಿದ್ದಾರೆ, ಎಂದು ತಿಳಿಸಿದರು. ''ಪ್ಲೇ ಸ್ಟೋರ್ ಹಾಗೂ ಆಯಪ್ ಸ್ಟೋರ್‌ನಲ್ಲಿ ಹೊರತುಪಡಿಸಿ ಎಪಿಕೆ ಫೈಲ್‌ಗಳಲ್ಲಿ ಯಾವುದನ್ನೂ ಡೌನ್‌ಲೋಡ್ ಮಾಡಬಾರದು. ಮೊಬೈಲ್‌ನಲ್ಲಿ ಆಯಂಟಿ ವೈರಸ್ ಇನ್‌ಸ್ಟಾಲ್ ಮಾಡಿಕೊಂಡಿರಬೇಕು.

### ಸೈಬರ್ ತಜ್ಞರು ಕೊಡುವ ಸಲಹೆಗಳೇನು?

**ವಂಚನೆ ಸಲುವಾಗಿಯೇ ಸೈಬರ್ ಕ್ರಿಮಿಗಳು ಎಪಿಕೆ ಫೈಲ್‌ಗಳನ್ನು ಸೃಷ್ಟಿಸಿರುತ್ತಾರೆ. ಹಬ್ಬದ ಶುಭಾಶಯ, ಗ್ರೀಟಿಂಗ್ ಕಾರ್ಡ್ ಕಳುಹಿಸುವ ನೆಪದಲ್ಲಿ ಎಪಿಕೆ ಫೈಲ್‌ಗಳನ್ನು ವಾಟ್ಸಾಪ್ ಮುಖಾಂತರ ಕಳಿಸುತ್ತಾರೆ. ಇವುಗಳನ್ನು ಕ್ಲಿಕ್ ಮಾಡಿದ ಕೂಡಲೇ ಇಡೀ ಮೊಬೈಲ್‌ನ ಡೇಟಾ ವಂಚಕರಿಗೆ ಲಭ್ಯವಾಗಲಿದ್ದು, ಖಾಸಗಿ ಮಾಹಿತಿ ಯನ್ನು ಕದಿಯುತ್ತಾರೆ. ಜತೆಗೆ, ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಮೊಬೈಲ್ ನಂಬರ್‌ಗೆ ಬರುವ ಒಟಿಪಿ ಪಡೆದು ಅದನ್ನು ಬಳಸಿ ಹಣ ವರ್ಗಾವಣೆ ಮಾಡಿಕೊಳ್ಳುತ್ತಾರೆ, ಎಂದು ಸೈಬರ್ ತಜ್ಞ ಡಾ.ಹರ್ಷ ತಿಳಿಸುತ್ತಾರೆ.**

# ನಮ್ಮ ಮೆಟ್ರೋಗೆ 10 ಎಕರೆ ಬಿಟ್ಟುಕೊಡಲು ಖಾಸಗಿ ಸಂಸ್ಥೆ ಒಪ್ಪಿಗೆ

## ಹಲವು ಸುತ್ತಿನ ಮಾತುಕತೆ ಬಳಿಕ ಬಿಎಂಆರ್‌ಸಿಎಲ್ 10 ಎಕರೆ ನೀಡಿದರೂ ಯೋಜನೆ ಕೈಗೊಳ್ಳುವುದಾಗಿತಿಳಿಸಿತ್ತು

• ಉದಯವಾಹಿನಿ ಬೆಂಗಳೂರು

ಹೆಬ್ಬಾಳದಲ್ಲಿ ಬಹು ಮಾದರಿ ಸಾರಿಗೆ ಹಬ್ ನಿರ್ಮಾಣಕ್ಕೆ ಬಿಎಂಆರ್‌ಸಿಎಲ್ ಸಂಸ್ಥೆಯು 45 ಎಕರೆ ಜಾಗ ಬಯಸಿದ್ದು, ಕೆಐಎಡಿಬಿಯಿಂದ ಭೂಮಿ ಹಂಚಿಕೆ ಪಡೆದಿರುವ ಖಾಸಗಿ ಸಂಸ್ಥೆಯು ಸುಮಾರು 10 ಎಕರೆಯನ್ನು ಯೋಜನೆಗೆ ಬಿಟ್ಟುಕೊಡುವ ಬಗ್ಗೆ ಬಹುತೇಕ ತೀರ್ಮಾನವಾಗಿದೆ.

ಬಿಟ್ಟು ಕೊಡುವ ಭೂಮಿಗೆ ಪ್ರತಿಯಾಗಿ ಎಫ್‌ಎಆರ್ ಪಡೆಯಲು ಸಂಸ್ಥೆ ಒಪ್ಪಿದ್ದು, ಬಹು ಕಾಲದಿಂದ ಕಗ್ಗಂಟಾಗಿದ್ದ ಸಮಸ್ಯೆ ಬಹುತೇಕ ಇತ್ಯರ್ಥ ಹಂತಕ್ಕೆ ತಲುಪಿದಂತಾಗಿದೆ. (ನಮ್ಮ ಮೆಟ್ರೋ ಆನೇಕಲ್‌ಗೆ ವಿಸ್ತರಣೆ) ಬಿಎಂಆರ್‌ಸಿಎಲ್ ಯೋಜನೆಗಾಗಿ 45.5 ಎಕರೆ ಭೂಮಿ ಹಸ್ತಾಂತರಕ್ಕೆ ಮನವಿ ಮಾಡಿತ್ತು. ಆದರೆ ಹಲವು ಸುತ್ತಿನ ಮಾತುಕತೆ ಬಳಿಕ ಬಿಎಂಆರ್‌ಸಿಎಲ್ 10 ಎಕರೆ ನೀಡಿದರೂ ಯೋಜನೆ ಕೈಗೊಳ್ಳುವುದಾಗಿ ತಿಳಿಸಿತ್ತು. ಅದರಂತೆ ನಡೆದ ಸಭೆಯಲ್ಲಿ ಚರ್ಚೆ ನಡೆದು ಸಂಸ್ಥೆಯು ತನಗೆ ಹಂಚಿಕೆಯಾಗಿರುವ 55.13 ಎಕರೆ ಭೂಮಿಯಲ್ಲಿ ಸುಮಾರು 10 ಎಕರೆಯನ್ನು ಬಿಟ್ಟುಕೊಡಲು ಬಹುತೇಕ ಒಪ್ಪಿಗೆ ಸೂಚಿಸಿದೆ. ಆ ಭೂಮಿಗೆ ಪ್ರತಿಯಾಗಿ ಯಾವುದೇ ಹಣಕಾಸಿನ ಪರಿಹಾರ ನೀಡಲಾಗುವುದಿಲ್ಲ. ಬದಲಿಗೆ ಎಫ್‌ಎಆರ್ ಪಡೆಯಲು ಸಂಸ್ಥೆ ಸಮ್ಮತಿಸಿದೆ. ಸದ್ಯದಲ್ಲೇ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಮತ್ತೊಂದು ಸುತ್ತಿನ ಸಭೆ ನಡೆಸಿ ಭೂಮಿ ಹಸ್ತಾಂತರ ಹಾಗೂ ಎಫ್‌ಎಆರ್ ನೀಡಿಕೆ ಮತ್ತು ಇತರ ಪ್ರಕ್ರಿಯೆಗಳ ಬಗ್ಗೆ ಸಮಾಲೋಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. (ನಮ್ಮ ಮೆಟ್ರೋ ಕಿತ್ತಳೆ ಮಾರ್ಗ)

ಸಭೆಯಲ್ಲಿ ಸುರಂಗ ರಸ್ತೆ ನಿರ್ಮಾಣಕ್ಕೆ ಅಗತ್ಯವಾದ ಜಾಗವನ್ನು ರಕ್ಷಣಾ ಇಲಾಖೆಯಿಂದ ಪಡೆಯುವ ಬಗ್ಗೆಯೂ ಚರ್ಚೆಯಾಯಿತು. ಅಗತ್ಯ ಭೂಮಿಯನ್ನು ಪಡೆದುಕೊಂಡು ಶೀಘ್ರ ಟೆಂಡರ್ ಪ್ರಕ್ರಿಯೆ ಆರಂಭಿಸುವ ಕುರಿತಂತೆಯೂ ಸಮಾಲೋಚನೆ ನಡೆಸಲಾಗಿದೆ.

**ಸಚಿವರುಗಳ ಮಹತ್ವದ ಸಭೆ:** ಬೆಂಗಳೂರಿನಲ್ಲಿ ನಮ್ಮ ಮೆಟ್ರೋ, ಸುರಂಗ ರಸ್ತೆ, ರಸ್ತೆ ಸಾರಿಗೆ ಮತ್ತಿತರ ಸಾರ್ವಜನಿಕ ಉಪಯೋಗಿ ಯೋಜನೆಗಳ ವಿಸ್ತರಣೆ ಸಂಬಂಧ ಡಿಸಿಎಂ ಹಾಗೂ ಬೃಹತ್, ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಅವರು ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳು, ಸಂಬಂಧಪಟ್ಟ ಸಂಸ್ಥೆಯ ಪ್ರಮುಖರೊಂದಿಗೆ ಸಭೆ ನಡೆಸಿ ಚರ್ಚಿಸಿದರು. ಸಭೆ ನಂತರ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ಹೆಬ್ಬಾಳ ಜಂಕ್ಷನ್ ಬಹಳ ಮುಖ್ಯವಾದ ಪ್ರದೇಶವಾಗಿದೆ.

ಆ ಜಂಕ್ಷನ್‌ನಲ್ಲಿ ನಮ್ಮ ಮೆಟ್ರೋ ಹಾಗೂ ಟನಲ್ ರಸ್ತೆ ಅಗತ್ಯವಿದೆ. ಹಾಗಾಗಿ, ನಾವು ಅಗತ್ಯವಿರುವ ಜಾಗ ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ನಾವು ಯೋಜನೆ ಹಿಂಪಡೆಯಲು ಸಾಧ್ಯವಿಲ್ಲ, ಎಂದು ಹೇಳಿದರು.



**45.5 ಎಕರೆ ಭೂಮಿ ಹಸ್ತಾಂತರಕ್ಕೆ ಮನವಿ**

### ಟನಲ್ ರಸ್ತೆ ನಿರ್ಮಾಣ ಬಗ್ಗೆ ಸಭೆ

**ನಮ್ಮ ಮೆಟ್ರೋ ಹಾಗೂ ಟನಲ್ ರಸ್ತೆ ನಿರ್ಮಾಣ ಸಂಬಂಧ ಅಧಿಕಾರಿಗಳ ಜತೆಗೂಡಿ ಯೋಜನೆ ವಿನ್ಯಾಸ ಸಿದ್ಧಪಡಿಸುವಂತೆ ಸೂಚಿಸಲಾಗಿದೆ. ಯೋಜನೆಗೆ ರಕ್ಷಣಾ ಇಲಾಖೆ ಹಾಗೂ ಖಾಸಗಿಯ ಎಷ್ಟು ಭೂಮಿ ಪಡೆಯಬೇಕು ಎಂಬ ಬಗ್ಗೆಯೂ ಚರ್ಚಿಸಲಾಗಿದೆ. ಟಿಡಿಆರ್ ಅಥವಾ ಎಫ್‌ಎಆರ್ ರೂಪದಲ್ಲಿ ಪರಿಹಾರ ನೀಡಲು ನಾವು ಬದ್ಧವಾಗಿದ್ದೇವೆ. ಆದರೆ, ನಾವು ಆ ಜಾಗ ಬಿಟ್ಟು ಕೊಡಲು ಸಿದ್ಧವಿಲ್ಲ. ಟನಲ್ ರಸ್ತೆ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಬೇಕಿದ್ದು, ಅದಕ್ಕೆ ಅಗತ್ಯವಿರುವ ಜಾಗದ ವಿಚಾರವಾಗಿಯೂ ಸಭೆಯಲ್ಲಿ ಚರ್ಚಿಸಿದ್ದೇವೆ,'' ಎಂದು ತಿಳಿಸಿದರು.**

- **ಹೆಬ್ಬಾಳದಲ್ಲಿ ಬಹು ಮಾದರಿ ಸಾರಿಗೆ ಹಬ್ ನಿರ್ಮಾಣಕ್ಕೆ ಬಿಎಂಆರ್‌ಸಿಎಲ್ ಮುಂದು.**
- **ಖಾಸಗಿ ಸಂಸ್ಥೆಯು ಸುಮಾರು 10 ಎಕರೆಯನ್ನು ಯೋಜನೆಗೆ ಬಿಟ್ಟು ಕೊಡಲು ಒಪ್ಪಿದೆ.**
- **ಬಹು ಕಾಲದಿಂದ ಕಗ್ಗಂಟಾಗಿದ್ದ ಸಮಸ್ಯೆ ಬಹುತೇಕ ಇತ್ಯರ್ಥ ಹಂತಕ್ಕೆ ತಲುಪಿದೆ.**

ಅಂತರಾಳದಿಂದ..
EDITORIAL

# ಪಠ್ಯಪುಸ್ತಕ ಪರಿಷ್ಕರಣೆ ಎಂಬ ಕತ್ತರಿ ಪ್ರಯೋಗ

ದೇಶದ ಶೈಕ್ಷಣಿಕ ಕ್ಷೇತ್ರಕ್ಕೆ ಅಗತ್ಯವಾದ ಪಠ್ಯಗಳನ್ನು ರೂಪಿಸುವುದು ಹಾಗೂ ಸಂಶೋಧನೆಗಳನ್ನು ಕೈಗೊಳ್ಳುವುದು ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ನಿರ್ವಹಿಸಬೇಕಾದ ಬಹಳ ಮುಖ್ಯವಾದ ಕೆಲಸ. ಆದರೆ ಇದು ಮಾಡಬೇಕಾದ ಕೆಲಸವನ್ನು ಬಿಟ್ಟು ಮಾಡಬಾರದ ಕೆಲಸವನ್ನು ಮಾಡುತ್ತಿದೆ. ಬಿಜೆಪಿ ಸರಕಾರವಿದ್ದಾಗಲಂತೂ ಪಠ್ಯಪುಸ್ತಕಕ್ಕೆ ತನ್ನ ಮೂಗಿನ ನೇರಕ್ಕೆ ಕತ್ತರಿ ಪ್ರಯೋಗ ಮಾಡುತ್ತಲೇ ಬಂದಿದೆ. ಪ್ರಸಕ್ತ ವರ್ಷದ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ದಿಲ್ಲಿಯ ಸುಲ್ತಾನರು ಮತ್ತು ಮೊಗಲರ ಕುರಿತ ಭಾಗವನ್ನು ಕೈ ಬಿಡಲಾಗಿದೆ. ಇವುಗಳ ಬದಲಾಗಿ ಭಾರತದ ಪ್ರಾಚೀನ ರಾಜ ವಂಶಗಳು ಹಾಗೂ ಮಹಾ ಕುಂಭಮೇಳ ಕುರಿತ ಮತ್ತು ಯಾತ್ರಾ ಸ್ಥಳಗಳ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆ. ಇತಿಹಾಸ, ಭೂಗೋಳ ಶಾಸ್ತ್ರ ಪೌರ ನೀತಿಗೆ ಸಂಬಂಧಿಸಿದಂತೆ ಇದ್ದ ಪ್ರತ್ಯೇಕ ಪಠ್ಯಪುಸ್ತಕಗಳನ್ನು ಬದಲಿಸಿ ಬೇರೆ ಪಠ್ಯಪುಸ್ತಕಗಳನ್ನು ಒದಗಿಸಲಾಗಿದೆ.ಪರಿಷ್ಕರಿಸಲಾದ ಹೊಸ ಪುಸ್ತಕದಲ್ಲಿ ಇತಿಹಾಸದ ಪಾಠ ಮೂರು ಮತ್ತು ಆರನೇ ಶತಮಾನದ ನಡುವಿನ ಗುಪ್ತರ ಕಾಲಕ್ಕೆ ಕೊನೆಗೊಳಿಸಲಾಗಿದೆ. ಇತಿಹಾಸಕ್ಕೆ ಸಂಬಂಧಿಸಿದ ಮೊದಲಿನ ಪಠ್ಯಪುಸ್ತಕ 7ನೇ ಶತಮಾನದ ನಂತರದ ವಿವರಗಳನ್ನು ಒಳಗೊಂಡಿತ್ತು. ಅದರಲ್ಲಿ ದಿಲ್ಲಿಯ ಸುಲ್ತಾನರು, ಮೊಗಲ ಆಡಳಿತಗಾರರು ಹಾಗೂ ಅವರ ಆಡಳಿತ ವ್ಯವಸ್ಥೆಯನ್ನು ಒಳಗೊಂಡಂತೆ ಮಧ್ಯಯುಗದ ಬಗ್ಗೆ ಸಾಕಷ್ಟು ವಿವರಗಳನ್ನು ಒಳಗೊಂಡಿತ್ತು. ಈಗ ಅದರ ಬದಲಿಗೆ ಭಾರತ ಮತ್ತು ಜಗತ್ತಿನ ಐದು ಅಂಶಗಳ ಬಗ್ಗೆ ವಿಶೇಷ ಗಮನವನ್ನು ಸೆಳೆಯಲಾಗಿದೆ. ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಸಂಪ್ರದಾಯಗಳ ಬಗ್ಗೆ ಧಾರ್ಮಿಕ ಕ್ಷೇತ್ರಗಳ ಬಗ್ಗೆ ವಿಶೇಷ ಗಮನವನ್ನು ನೀಡಲಾಗಿದೆ. ಕುಂಭ ಮೇಳದ ಬಗ್ಗೆ ವಿಶೇಷ ವರ್ಣನೆ ಮಾಡಲಾಗಿದೆ. ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವದ ಕಾಲ ಘಟ್ಟವನ್ನು ಪಠ್ಯಪುಸ್ತಕದ ಮೊದಲ ಭಾಗದಲ್ಲಿ ಕೈ ಬಿಡಲಾಗಿದೆ. ಕೇಂದ್ರದ ಆಡಳಿತ ಪಕ್ಷದ ಸೈದ್ಧಾಂತಿಕ ನಿಲುವಿಗೆ ಪೂರಕವಾಗಿ ಬದಲಾವಣೆ ಮಾಡಲಾಗಿದೆ ಎಂಬುದು ಬರೀ ಟೀಕೆಯಲ್ಲ ವಾಸ್ತವ ಸಂಗತಿಯಾಗಿದೆ. ಅಯೋಧ್ಯೆಯ ಬಾಬರಿ ಮಸೀದಿ ನೆಲಸಮ, ದಲಿತ ಮತ್ತು ನಕ್ಸಲ್ ಚಳವಳಿಗಳು, 2002ರ ಗುಜರಾತ್ ಗಲಭೆ, ಹಿಂಸಾಚಾರಕ್ಕೆ ಸಂಬಂಧಿಸಿದ ವಿವರಗಳು ಇವುಗಳಿಗೆ ಕತ್ತರಿ ಪ್ರಯೋಗ ಮಾಡಲಾಗಿದೆ. ಆದರೂ ಪಠ್ಯಪುಸ್ತಕದ ಯಾವ ಭಾಗವನ್ನು ತೆಗೆದು ಹಾಕಲಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಒಟ್ಟಾರೆ ಇದರಲ್ಲಿ ಸಾಕಷ್ಟು ಗೊಂದಲಗಳಿವೆ.ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ವಿವಾದ ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲ ಕೆಲವು ರಾಜ್ಯಗಳಲ್ಲೂ ಸಮಸ್ಯೆಗೆ ಕಾರಣವಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಸರಕಾರವಿದ್ದಾಗಲೂ ವಿವಾದದ ಅಲೆಯನ್ನು ಎಬ್ಬಿಸಿತ್ತು. ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಶೀಲನಾ ಸಮೀತಿಯು ಪಠ್ಯಪುಸ್ತಕಗಳಲ್ಲಿ ಇದ್ದ ಬಸವಣ್ಣ ನಾರಾಯಣ ಗುರು, ಪೆರಿಯಾರ್ ಅವರಂತಹ ಸಮಾಜ ಸುಧಾರಕರ ಬಗ್ಗೆ ಇದ್ದ ವಿವರಗಳನ್ನು ತೆಗೆದು ಹಾಕಿತ್ತು. ಹಿಂದಿನ ಜನಸಂಘ, ಅಂದರೆ ಈಗಿನ ಬಿಜೆಪಿ ಅಧಿಕಾರ ರಾಜಕಾರಣವನ್ನು ಪ್ರಭಾವಿಯಾಗಿ ಪ್ರವೇಶಿಸಿದ ನಂತರ ತನ್ನ ಕೋಮುವಾದಿ ರಾಜಕಾರಣದ ಅನುಕೂಲಕ್ಕೆ ತಕ್ಕಂತೆ ಪಠ್ಯಪುಸ್ತಕ ಪರಿಷ್ಕರಣೆ ಎಂಬ ನಯವಾದ ಹೆಸರಿನಲ್ಲಿ ಮನ ಬಂದಂತೆ ಪಠ್ಯಪುಸ್ತಕ ಪರಿಷ್ಕರಣೆ ಮಾಡುತ್ತಲೇ ಬರಲಾಗಿದೆ. ವೈದಿಕಶಾಹಿಯ ಮೌಢ್ಯ ಕಂದಾಚಾರಗಳ ವಿರುದ್ಧ ದನಿಯೆತ್ತಿದೆ ಇಸ್ಲಾಮ್ ಮಾತ್ರವಲ್ಲ, ಬೌದ್ಧ ಜೈನ, ಲಿಂಗಾಯತ, ಸಿಖ್ ಧರ್ಮಗಳ ಬಗೆಗೂ ಪಠ್ಯಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ಸಾಕಷ್ಟು ಅವಾಂತರ ಮಾಡಲಾಗಿದೆ. ತಮ್ಮದು ಪ್ರತ್ಯೇಕ ಧರ್ಮ ಎಂದು ಈ ಧರ್ಮಾನುಯಾಯಿಗಳು ಪದೇ ಪದೇ ಹೇಳುತ್ತಿದ್ದರೂ ಇವುಗಳನ್ನು ಸನಾತನ ಧರ್ಮದ ಪಟ್ಟಿಗೆ ಬಲವಂತವಾಗಿ ಸೇರಿಸಿಕೊಳ್ಳುತ್ತಲೇ ಬರಲಾಗಿದೆ. ಕರ್ನಾಟಕದಲ್ಲೇ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರವಿದ್ದಾಗಲೂ ಇಂಥ ಅವಾಂತರ ನಡೆದಿತ್ತು.ಕೇಂದ್ರ ಸರಕಾರ 1961ರಲ್ಲಿ ಸ್ಥಾಪನೆ ಮಾಡಿದ ಎನ್‌ಸಿಇಆರ್‌ಟಿಯನ್ನು ಆಡಳಿತ ನಡೆಸುವ ಪಕ್ಷಗಳು ಅದರಲ್ಲೂ ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಲೇ ಬಂದಿವೆ ಎಂಬ ಆರೋಪ ಹೊಸದಲ್ಲ. 1977–79ರ ಕಾಲಾವಧಿಯಲ್ಲಿ ಕೇಂದ್ರದಲ್ಲಿ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪಕ್ಷ ಅಧಿಕಾರದಲ್ಲಿ ಇದ್ದಾಗ ಹಾಗೂ 2002ರಲ್ಲಿ ಎನ್‌ಡಿಎ ಸರಕಾರವಿದ್ದಾಗ ಪಠ್ಯಪುಸ್ತಕ ಪರಿಷ್ಕರಣೆ ಎಂಬುದು ದೊಡ್ಡ ವಿವಾದಕ್ಕೆ ಕಾರಣವಾಗಿತ್ತು. ಆಗ ಜನತಾಪಕ್ಷದಲ್ಲಿದ್ದ ಮಧುಲಿಮಯೆ ಅವರಂಥ ಸಮಾಜವಾದಿಗಳು ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದ್ದರು. ಬಿಜೆಪಿ ದೇಶದ ಇತಿಹಾಸವನ್ನು ತಿರುಚಿ ಶಿಕ್ಷಣವನ್ನು ಕೇಸರೀಕರಣ ಮಾಡುತ್ತಿದೆ ಎಂದು ಆರೋಪಿಸುತ್ತಲೇ ಬಂದಿದ್ದಾರೆ. ಇದಕ್ಕೆ ಪ್ರತಿಯಾಗಿ ಬಿಜೆಪಿ ಸಮರ್ಥಿಸುತ್ತಲೇ ಬಂದಿದೆ. ತಮ್ಮ ರಾಜಕೀಯ ಮತ್ತು ಸೈದ್ಧಾಂತಿಕ ಅನುಕೂಲಕ್ಕಾಗಿ ಈ ರೀತಿ ಪಠ್ಯಪುಸ್ತಕಗಳನ್ನು ಬದಲಿಸುತ್ತ ಪರಿಷ್ಕರಿಸುತ್ತಾ ಹೋದರೆ ವಿದ್ಯಾರ್ಥಿಗಳ ಮೇಲೆ ಎಂಥ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂಬುದರ ಅರಿವೂ ಇವರಿಗಿಲ್ಲ. ಪಠ್ಯಪುಸ್ತಕಗಳಲ್ಲಿ ಯಾವ ಪರಿಯಾಗಿ ಬದಲಾವಣೆ ಮಾಡಲಾಗಿದೆಯೆಂದರೆ ಬಾಬರಿ ಮಸೀದಿ ನೆಲಸಮಕ್ಕೆ ಸಂಬಂಧಿಸಿದ ಹಿಂದುತ್ವ ಕೋಮುವಾದಿ ಮಾಹಿತಿಯನ್ನು ತಿದ್ದುಪಡಿ ಮಾಡಲಾಗಿದೆ. ಹರಪ್ಪ ನಾಗರಿಕತೆಯನ್ನು ಸಿಂಧೂ ಸರಸ್ವತಿ ನಾಗರಿಕತೆ ಎಂದು ಬದಲಿಸಲಾಗಿದೆ. ಗಾಂಧೀಜಿ ಹತ್ಯೆಯ ನಂತರ ಆರೆಸ್ಸೆಸ್‌ನ್ನು ನಿಷೇಧಿಸಲಾಗಿತ್ತು ಎಂಬುದನ್ನು ಕೈ ಬಿಡಲಾಗಿದೆ. ಗಾಂಧಿ ಹಂತಕ ನಾಥರಾಮ ಗೋಡ್ಸೆ ಕುರಿತ ಉಲ್ಲೇಖದಲ್ಲಿ ಬ್ರಾಹ್ಮಣ ಎಂಬ ಮಾಹಿತಿಯನ್ನು ತೆಗೆದು ಹಾಕಲಾಗಿದೆ.

**2014ರಲ್ಲಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ, ಅಂದರೆ ಎನ್‌ಡಿಎ ಸರಕಾರ ಬಂದಾಗಲೂ ಪಠ್ಯಪುಸ್ತಕಗಳನ್ನು ಐದು ಬಾರಿ ಪರಿಷ್ಕರಣೆ ಮಾಡಲಾಗಿತ್ತು. 12,11,10 ಹಾಗೂ 8ನೇ ಮತ್ತು 7ನೇ ತರಗತಿಯ ಪಠ್ಯಪುಸ್ತಕಗಳು ಸೇರಿದಂತೆ ಹಲವಾರು ತರಗತಿಯ ಪಠ್ಯಪುಸ್ತಕಗಳನ್ನು ಪರಿಷ್ಕರಣೆಗೆ ಒಳಪಡಿಸಲಾಗಿದೆ. ಪ್ರತೀ ಬಾರಿ ಪಠ್ಯಪುಸ್ತಕಗಳ ಪರಿಷ್ಕರಣೆ ನಡೆದಾಗಲೂ ತೀವ್ರ ವಿವಾದ ಉಂಟಾಗಿದೆ. ಪ್ರತಿಪಕ್ಷ ಮುಖಂಡರು ಮಾತ್ರವಲ್ಲ ಶಿಕ್ಷಣ ಕ್ಷೇತ್ರದ ಪರಿಣಿತರು, ಇತಿಹಾಸ ತಜ್ಞರು ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ.**

# ರಾಮಾಯಣ



## ಶ್ರೀರಾಮನು ಗುಹಸುಮಂತ್ರರೆನ್ನು ಕಳುಹಿಸಿ ಗಂಗಾನದಿಯನ್ನು ದಾಟಿದ್ದು

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ನಮಗೆ ಬಹುಜನರೊಡನೆ ವನವಾಸವು ಯೋಗ್ಯವಲ್ಲ. ನಮಗೆ ಯಷ್ಯಾಶ್ರಮವೇ ವಿಧಿ. ನಮ್ಮ ತಂದೆಯಾದ ದಶರಥರಾಯನು ಆಜ್ಞಾಪಿಸಿದ ರೀತಿಯಲ್ಲಿ ಜಡೆಗಳನ್ನು ನಿರ್ಮಿಸಿ ಸೀತಾಲಕ್ಷ್ಮಣಸಹಿತನಾಗಿ ವನಾಂತರಕ್ಕೆ ಹೋಗುತ್ತೇನೆ. ನೀನು ಆಲದ ಹಾಲನ್ನು ತರಿಸಿಕೊಡು ಎಂದು ನುಡಿದನು. ಗುಹನು ಶೀಘ್ರದಲ್ಲಿ ಆಲದ ಹಾಲನ್ನು ತರಿಸಿಕೊಡಲು ಲಕ್ಷ್ಮಣನು ತನಗೂ ಶ್ರೀರಾಮನಿಗೂ ಜಡೆಗಳನ್ನು ನಿರ್ಮಿಸಿದನು. ಆಗ ರಾಮಲಕ್ಷ್ಮಣರಿಬ್ಬರೂ ಜಟಾಧಾರಿಗಳಾಗಿ ಋಷಿಗಳಿಗೆ ಸಮಾನರಾಗಿ ಒಪ್ಪುತ್ತಿದ್ದರು. ಹೀಗೆ ಸೀತಾಲಕ್ಷ್ಮಣಸಮೇತನಾದ ಶೀರಾಮನು ಋಷಿಮಾರ್ಗವನ್ನು ಕೈಗೊಂಡನು. ಆಮೇಲೆ ತನ್ನ ಪ್ರಿಯಸಖನಾದ ಗುಹನಿಗೆ ಎಚ್ಚರಿಕೆಯಿಂದ ರಾಜ್ಯಪರಿಪಾಲನವನ್ನು ಮಾಡಿಕೊಂಡಿರಹೇಳಿ ನಾವೆಯನ್ನು ನೋಡಿ ಗಂಗೆಯನ್ನು ದಾಟಲಿಚ್ಛೆಯುಳ್ಳವನಾದನು. ಮೊದಲು ಲಕ್ಷ್ಮಣನು ನಾವೆಯಮೇಲೆ ಸೀತಾದೇವಿಯನ್ನು ಮೆಲ್ಲಗೆ ಹತ್ತಿಸಿ ತಾನೂ ಹತ್ತಿದನು. ಅನಂತರ ರಾಮನು ನಾವೆಯನ್ನೇರಿ ತನ್ನ ಇಷ್ಟದೇವತಾಕವಾದ ಮಂತ್ರವನ್ನು ಜಪಿಸಿ ಧ್ಯಾನವನ್ನು ಮಾಡಿಕೊಂಡು ಸೀತಾಲಕ್ಷ್ಮಣಸಮೇತನಾಗಿ ನಾವೆಯಮೇಲೆ ಹೋಗುತ್ತಿದ್ದನು. ಆಗ ಸುಮಂತ್ರನು ರಾಮಲಕ್ಷ್ಮಣಸೀತಾದೇವಿಯರಿಗೆ ನಮಸ್ಕಾರವನ್ನು ಮಾಡಿ ಹಿಂದಿರುಗಲು ನಿಶ್ಚಯಿಸಿದನು. ಗುಹನೂ ಶ್ರೀರಾಮನಿಗೆ ನಮಸ್ಕಾರವನ್ನು ಮಾಡಿ ತನ್ನ ಬಲಸಮೇತನಾಗಿ ತನ್ನ ಪಟ್ಟಣಕ್ಕೆ ತೆರಳಿದನು. ಆಮೇಲೆ ಶ್ರೀರಾಮನು ನಾವೆಯನ್ನು ನಡೆಯಿಸುವ ಅಂಬಿಗನನ್ನು ಶೀಘ್ರದಲ್ಲಿ ನಡೆಯಿಸಹೇಳಲು ಆತನು ಹುಟ್ಟುಗಳಿಂದ ನಾವೆಯನ್ನು ಅತಿವೇಗದಿಂದ ನಡೆಯಿಸುತ್ತಿದ್ದನು.

ಆ ಸಮಯದಲ್ಲಿ ಸೀತಾದೇವಿಯು ಗಂಗಾಮಧ್ಯದಲ್ಲಿ ಕೈ ಮುಗಿದುಕೊಂಡು ಗಂಗಾದೇವಿಯನ್ನು ಕುರಿತು ಎಲ್ ಗಂಗಾದೇವಿಯೆ, ಮಹಾತ್ಮನಾದ ದಶರಥರಾಯನ ಕುಮಾರನಾದ ಶ್ರೀರಾಮನು ತನ್ನ ತಂದೆಯ ವಾಕ್ಯವನ್ನು ಪರಿಪಾಲಿಸಬೇಕೆಂದು ಈ ವನಕ್ಕೆ ಬಂದನು. ಈ ವನದಲ್ಲಿ ಹದಿನಾಲ್ಕು ವರುಷಗಳು ಸಂಚರಿಸಿಕೊಂಡಿರಬೇಕು. ಈ ಸ್ವಾಮಿಯನ್ನು ನೀನು ರಕ್ಷಿಸು. ಹದಿನಾಲ್ಕು ವರುಷಗಳೆಂಬ ಮಿತಿ ತೀರಿದಮೇಲೆ ದಶರಥರಾಯನ ಕುಮಾರನು ಲಕ್ಷ್ಮಣಸಮೇತನಾಗಿ ತಿರುಗಿ ಬರುವನು. ಆತನ ಕೂಡ ನಾನೂ ಕ್ಷೇಮದಿಂದ ತಿರುಗಿ ಬಂದರೆ ಸಮಸ್ತ ಇಷ್ಟಾರ್ಥವನ್ನೂ ಕೊಡುವ ನಿನ್ನ ದರ್ಶನವನ್ನು ಪುನಃ ಮಾಡುವೆನು. ನೀನು ಪ್ರಸನ್ನಳಾದರೆ ಸಮಸ್ತ ಇಷ್ಟಾರ್ಥಗಳನ್ನೂ ಕೊಡುವುದಕ್ಕೆ ಸಮರ್ಥಳು. ನೀನು ಸಮುದ್ರರಾಜನ ಪಟ್ಟದ ರಾಣಿ, ಗಂಗಾದೇವಿ, ನಿನಗೆ ನಮಸ್ಕಾರಮಾಡಿ ಬೇಡಿಕೊಳ್ಳುತ್ತೇನೆ. ದಶರಥರಾಯನ ಕುಮಾರನಾಗಿ ಪುರುಷೋತ್ತಮನಾದ ಶ್ರೀರಾಮನು ಕ್ಷೇಮದಿಂದ ತಿರುಗಿ ಬಂದರೆ ನಿನ್ನ ಪ್ರೀತ್ಯರ್ಥವಾಗಿ ಸಾವಿರ ಗೋದಾನಗಳನ್ನು ಬ್ರಾಹ್ಮಣರಿಗೆ ಕೊಡುವೆನು. ಅನೇಕ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುವೆನು, ಮತ್ತು ನಿನಗೆ ಸಂತೋಷವಾಗುವ ಮರಾದೆಯಲ್ಲಿ ಸಾವಿರ ಸುರಾಘಟಗಳನ್ನೂ ಅನೇಕ ಮಾಂಸೋಪಹಾರ ಗಳನ್ನೂ ಬಲಿಯಾಗಿ ಕೊಡುವೆನು. ನಿನ್ನ ತೀರದಲ್ಲಿರುವ ದೇವತೆಗಳಿಗೆ ಅಭಿಷೇಕ ನೈವೇದ್ಯಗಳನ್ನು ಮಾಡಿಸುವೆನು. ನೀನು ಪ್ರಸನ್ನಳಾಗಿ ದಶರಥರಾಯನ ಕುಮಾರನನ್ನು ಸುಖದಿಂದ ತಿರುಗಿ ಬರುವಂತೆ ಕೃಪೆಮಾಡು ಎಂದು ಪ್ರಾರ್ಥಿಸಿದಳು.

**ಮುಂದುವರಿಯುವುದು...**



**ಕಲಾ ಸಾಹಿತ್ಯ**

ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

# ಸಾತ್ವಿಕಾಭಿನಯದ ಸೊಗಡು ಮಾಧುರಿ ಭಟ್ ನರ್ತನ

**ಮಾಧುರಿಯ ಸಾತ್ವಿಕಾಭಿನಯದ ಮೆರುಗು**



ದೈವೀಕ ಆರಾಧನೆಯ ಪ್ರತಿಬಿಂಬವಾಗಿ ಅಂದು ಬೆಂಗಳೂರಿನ 'ಸಾಧನ ಡ್ಯಾನ್ಸ್ ಸೆಂಟರ್' ನೃತ್ಯಶಾಲೆಯ ನಾಟ್ಯಗುರು ಭಾವನಾ ಶಿಷ್ಯೆಯಾದ ಶ್ರೀಮತಿ ಮಾಧುರಿ ಪವನ್ ಭಟ್ ಜಯನಗರದ 'ವಿವೇಕ' ಸಭಾಂಗಣದಲ್ಲಿ ತನ್ನ ರಂಗಪ್ರವೇಶವನ್ನು ವಿದ್ಯುಕ್ತವಾಗಿ ನೆರವೇರಿಸಿಕೊಂಡಳು. ಪ್ರಥಮ ಪೂಜಿತ ಗಣೇಶನ ಕುರಿತ ಮಾಧುರಿಯವರ ಸುಪುತ್ರ ಓಜಸ್ ಭಟ್ ಹಾಡಿದ 'ಮುದಾಕರತ್ತ ಮೋದಕಂ' ಮನನೀಯವಾಗಿತ್ತು. ಅಂದು ಕಲಾವಿದೆ ನರ್ತಿಸಲು ಆಯ್ದುಕೊಂಡ ಕೃತಿಗಳು ವೈವಿಧ್ಯಮಯವಾಗಿದ್ದವು. ಶುಭಾರಂಭಕ್ಕೆ ಮಾಧುರಿ, ಆರಭಿ ರಾಗ- ಆದಿತಾಳದ ಪುಷ್ಪಾಂಜಲಿಯನ್ನು ವಿವಿಧ ನೃತ್ತವಿನ್ಯಾಸಗಳಲ್ಲಿ ಗುರು-ಹಿರಿಯರಿಗೆ, ದೇವಾನುದೇವತೆಗಳಿಗೆ ಸವಿನಯವಾಗಿ ನೃತ್ತನಮನ ಸಲ್ಲಿಸಿ ಅಂಗಶುದ್ಧ ನರ್ತನದಿಂದ ಸೆಳೆದಳು.


ನಂತರ ರಾಘವೇಂದ್ರಸ್ವಾಮಿ ಯತಿವರರ ದಿವ್ಯ ನಾಮಸ್ಮರಣೆಯ ನೃತ್ಯದಿಂದ ಪ್ರಫುಲ್ಲವಾಗಿ ಹಸನ್ಮುಖದಿಂದ ನರ್ತಿಸಿದಳು. ಕಲಿಯುಗ ಕಾಮಧೇನುವಾದ ರಾಯರ ಸ್ತುತಿಯಲ್ಲಿ ಸುಳಿದ ಕಾಮಧೇನುವಿನ ಭಂಗಿ ಗಮನ ಸೆಳೆಯಿತು. ಇಷ್ಟದೈವ ಆರಾಧನೆಯ ಸ್ಫೂರ್ತಿಯಿಂದ ಕಲಾವಿದೆ, ಹಸನ್ಮುಖದಿಂದ, ಲೀಲಾಜಾಲವಾಗಿ ಸುಮಾರು ಎರಡು ಗಂಟೆಗಳ ಕಾಲ ಚೇತೋಹಾರಿಯಾಗಿ ನರ್ತಿಸಿದಳು.

ಶುಭಾರಂಭದ ಸಾಂಪ್ರದಾಯಕ ಕೃತಿ- ಪುಷ್ಪಾಂಜಲಿ ಮತ್ತು ಅಲರಿಪು , ಗ್ರೀವ- ಶಿರೋ ಭೇದಗಳು, ಅರೆಮಂಡಿ, ಖಚಿತ ಅಡವು, ಸ್ಫುಟವಾದ ಮುದ್ರೆಗಳಿಂದ ಕೂಡಿದ ಅಚ್ಚುಕಟ್ಟಾದ ಪ್ರದರ್ಶನವಾಗಿದ್ದು, ಅವಳು ಪಡೆದ ಉತ್ತಮ ತರಬೇತಿ ಮತ್ತು ಪರಿಶ್ರಮವನ್ನು ಅಭಿವ್ಯಕ್ತಿಸಿದವು. ನಂತರ ಭರತನಾಟ್ಯ ಪ್ರಸ್ತುತಿಯ ಕೇಂದ್ರ ಭಾಗ 'ವರ್ಣ' ಕಲಾವಿದರ ನೃತ್ತ ನಿರೂಪಣಾ ಸಾಮರ್ಥ್ಯ ಮತ್ತು ಅಭಿನಯ ಚಾತುರ್ಯ ಎರಡನ್ನೂ ಸಮಾನವಾಗಿ ಬೇಡುವ ಕೃತಿ. ಜೊತೆಗೆ ಅಗಾಧ ನೆನಪಿನ ಶಕ್ತಿ ಮತ್ತು ತಾಳ-ಲಯ ಜ್ಞಾನವನ್ನು ನಿರೀಕ್ಷಿಸುತ್ತದೆ. ಶ್ರೀ ಮಹೇಶ್ವರಸ್ವಾಮಿ ಅವರು ಕನ್ನಡದಲ್ಲಿ ರಚಿಸಿದ ಶ್ರೀರಾಮನನ್ನು ಕುರಿತಾಗಿದ್ದ ಅನುಪಮ ಕೃತಿಯನ್ನು ಕಲಾವಿದೆ ಚೇತೋಹಾರಿಯಾಗಿ ಅರ್ಪಿಸಿದಳು. 'ಬಾರಯ್ಯ ರಘುವಂಶ ಚಂದ್ರನೇ ಬಾರೋ' ಎಂದು ನಾಯಿಕೆ ತನ್ನ ಆರಾಧ್ಯದೈವ ಶ್ರೀರಾಮನನ್ನು 'ಪಾದಸೇವೆ ನೀಡೆನಗೆ' ಎಂದು ಅನನ್ಯ ಭಕ್ತಿ ತಾದತ್ಮ್ಯತೆಯಿಂದ ಬೇಡಿಕೊಳ್ಳುವ ಮೂಲಕ ಇಡೀ ರಾಮಾಯಣದ ಘಟನೆಗಳನ್ನು ಸಂಕ್ಷಿಪ್ತವಾಗಿ ಸನ್ನಿವೇಶಗಳನ್ನು ಉದ್ಧರಿಸುತ್ತ ಶ್ರೀರಾಮಚಂದ್ರನ ಮಹಿಮೆ- ಹಿರಿಮೆಯನ್ನು ಎತ್ತಿ ಹಿಡಿಯುತ್ತ, ಇಂಥ ವಿಶಿಷ್ಟ ಮಹಿಮಾನ್ವಿತ ನನ್ನ ಹೆಮ್ಮೆ ಎನ್ನುತ್ತಾಳೆ. ಕಲಾವಿದೆ, ನಾಯಿಕೆಯ ಕಲ್ಪನೆ-ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಂದು ಸಂಚಾರಿಯನ್ನೂ ಸಚಿತ್ರವಾಗಿ ಕಟ್ಟಿಕೊಟ್ಟು, ಶ್ರೀರಾಮನ ಕುರಿತ ನಾಯಿಕೆಯ ಭಕ್ತಿಭಾವವನ್ನು ಸಾಕ್ಷಾತ್ಕರಿಸಿದ ಭಕ್ತಿಪ್ರಧಾನ 'ವರ್ಣ' ಸಾತ್ವಿಕಾಭಿನಯವನ್ನು ಹೊರಸೂಸಿ ಮನಕ್ಕೆ ಮುದನೀಡಿತು. ನಡುನಡುವೆ ಕಲಾವಿದೆಯ ನೃತ್ತ ಸಾಮರ್ಥ್ಯವನ್ನು ನಿಕಷಕ್ಕೆ ಒಡ್ಡುವಂತೆ ಮೂಡಿಬಂದ, ಗುರು ಭಾವನಾರ ಸುಸ್ಪಷ್ಟ- ನಿಖರ ನಟುವಾಂಗದ ಓಘಕ್ಕೆ ಮಾಧುರಿ, ಸಮವಾಯಿಯಾಗಿ ಪಾದಭೇದಗಳಲ್ಲಿ ಹೆಜ್ಜೆಹಾಕುತ್ತ ಸುಮನೋಹರವಾಗಿ ನರ್ತಿಸಿದಳು. ಬಾಲಸುಬ್ರಹ್ಮಣ್ಯ ಶರ್ಮರ ಭಾವಪೂರ್ಣ ಗಾಯನ ನೃತ್ಯದ ಸೌಂದರ್ಯವನ್ನು ಉದ್ದೀಪನಗೊಳಿಸಿತ್ತು. ಸಾಮಾನ್ಯವಾಗಿ ಶೃಂಗಾರ ಸ್ಥಾಯಿರಸವಾಗುಳ್ಳ 'ವರ್ಣ' ಇಲ್ಲಿ ವಿಭಿನ್ನ ಆಯಾಮದಲ್ಲಿ ಭಕ್ತಿ-ಶೃಂಗಾರ ರಸಾನುಭವ ನೀಡಿತ್ತು. ಯಾವುದೇ ಆರ್ಭಟ ನೃತ್ತಗಳ ಪ್ರದರ್ಶನಕ್ಕೆ ಒತ್ತುಕೊಡದ ಈ ರಮ್ಯ ನೃತ್ಯ ಹೃದಯಂಗಮವಾಗಿ ಸಾಗಿತು.

ಮುಂದೆ- ಶ್ರೀ ಪುರಂದರದಾಸರ (ಬಿಲಹರಿ ರಾಗ-ಖಂಡಚಾಪು ತಾಳ) 'ಈ ಪರಿಯ ಸೊಬಗು ಇನ್ನಾವ ದೇವರೊಳು ಕಾಣೆ ಎಂಬ ಕೀರ್ತನೆಯನ್ನು ಭಾವಪೂರ್ಣವಾಗಿ ಅಭಿನಯಿಸಿದ ಮಾಧುರಿ, ದಶಾವತಾರದ ಸಂಚಾರಿಯನ್ನೂ ಪ್ರದರ್ಶಿಸಿದಳು. ಅದರಲ್ಲೂ ಸಮುದ್ರ ಮಂಥನ, ಗೀತೋಪದೇಶದ ಸನ್ನಿವೇಶದವರೆಗೆ, ವಿಶೇಷವಾಗಿ ಗರುಡನ ಸಂಚಾರವನ್ನು ಸೊಗಸಾಗಿ ಕಟ್ಟಿಕೊಟ್ಟಳು. ಅನಂತರ- ಶ್ರೀ ವೆಂಕಟಾದ್ರಿ ಶ್ಯಾಮರಾವ್ ವಿರಚಿತ ಬೇಹಾಗ್ ರಾಗ- ಆದಿತಾಳದ 'ಪದಂ' ನಲ್ಲಿ, ಇನಿಯನಿಗಾಗಿ ಕಾದು ಕುಳಿತ ವಾಸಿಕಸಜ್ಜಾ ನಾಯಿಕೆ ಮಾಡಿಕೊಳ್ಳುವ ಸಿದ್ಧತೆ, ನಿರೀಕ್ಷೆ, ವಿರಹದ ತೊಳಲಾಟ- ಬೇಗೆಯನ್ನು 'ಇದೇನೇ ಸಖಿ ಕಾಂತನು ಮುನಿದಿರ್ಪ ಎಂಬ ಕನ್ನಡಗೀತೆ ಬಹು ಪರಿಣಾಮಕಾರಿಯಾಗಿ ಚಿತ್ರಿಸಿತು. ಅಂತ್ಯದ ಸಂಭ್ರಮ ಚೆಲ್ಲಿದ 'ತಿಲ್ಲಾನ'ದಲ್ಲಿ ಮಿಂಚಿನ ಸಂಚಾರದ ಪಾದವೈವಿಧ್ಯಗಳೊಂದಿಗೆ, ರಂಗಾಕ್ರಮಣದಲ್ಲಿ ಆಕರ್ಷಕ ನೃತ್ತ ನಮನ ಸಲ್ಲಿಸಿದ್ದು ಇಡೀ ನರ್ತನದ ಸೌಂದರ್ಯಕ್ಕೆ ಕಳಶಪ್ರಾಯವಾಗಿತ್ತು. ಪಂಚಭೂತಗಳಿಗೆ ಸಲ್ಲಿಸಿದ ಮಂಗಳ' ಅರ್ಥಪೂರ್ಣವಾಗಿತ್ತು. ನೃತ್ಯದ ವರ್ಚಸ್ಸು ಎತ್ತಿ ಹಿಡಿದ ವಾದ್ಯಗೋಷ್ಠಿಯ ಕಲಾವಿದರು- ಭಾವಪೂರ್ಣ ಗಾಯನ ವಿ. ಬಾಲಸುಬ್ರಹ್ಮಣ್ಯ ಶರ್ಮ, ವೇಣುನಿನಾದದಲ್ಲಿ ವಿ. ವೇಣುಗೋಪಾಲ್, ಮೃದಂಗ ಝೇಂಕಾರ- ವಿ. ಜಿ.ಎಸ್. ನಾಗರಾಜ್, ವೀಣೆಯ ಮಾಧುರ್ಯದಲ್ಲಿ ವಿ. ಪ್ರಶಾಂತ್ ರುದ್ರಪಟ್ನ, ಕಂಜ್ಝೀರದ ಧ್ವನಿ – ವಿ. ರಾಜಾಪುರಂ ಕಾರ್ತೀಕ್, ನಟುವಾಂಗದ ಸೌಂದರ್ಯ- ಗುರು ಭಾವನಾ.


# ಆರ್‌ಸಿಬಿ ಸುವರ್ಣ ಕ್ಷಣ

## ಇತಿಹಾಸ ಸೃಷ್ಟಿಸಲು ಸಕಾಲ



• ಉದಯವಾಹಿನಿ ಬೆಂಗಳೂರು

ಸುದೀರ್ಘ ಕಾಲದ ನಂತರ, ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತೊಮ್ಮೆ ಶ್ಲಾಘನೀಯ ಸ್ಥಾನಕ್ಕೇರಿದೆ. 16 ಅಮೂಲ್ಯ ಅಂಕಗಳನ್ನು ಪಡೆದು ಪ್ಲೇಆಫ್ನ ರೇಸ್‌ನಲ್ಲಿ ಬಲವಾಗಿ ನಿಂತಿದೆ. ಲಕ್ನೋ ಸೂಪರ್ ಜೈಂಟ್ಸ್, ಸನ್ರೈಸರ್ಸ್ ಹೈದರಾಬಾದ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಕೇವಲ ಮೂರು ನಿರ್ಣಾಯಕ ಪಂದ್ಯಗಳು ಉಳಿದಿವೆ ಮತ್ತು ಅದರ ನಂತರ ಪ್ರೀ ಫೈನಲ್‌ಗಳು, ಸೆಮಿ ಫೈನಲ್ಸ್ ಗಳು ಮತ್ತು ಫೈನಲ್ ಪಂದ್ಯಗಳು ನಡೆಯಲಿವೆ.



ಆರ್‌ಸಿಬಿ 200ಕ್ಕೂ ಅಧಿಕ ಮೊತ್ತವನ್ನು ಪೇರಿಸುವ ಸಾಮರ್ಥ್ಯವಿರುವ ಹೆಚ್ಚಿನ ಸ್ಕೋರಿಂಗ್ ಹೊಂದಿರುವ ಎದುರಾಳಿಗಳನ್ನು ಎದುರಿಸುತ್ತಿದೆ. ಗೆಲುವನ್ನು ಖಚಿತಪಡಿಸಿಕೊಳ್ಳಲು ಮತ್ತು ಅಸ್ಕರ್ ಟ್ರೋಫಿಯಲ್ಲಿ ತಮ್ಮ ಇರುವಿಕೆಯನ್ನು ಖಚಿತಪಡಿಸಿಕೊಳ್ಳಲು ಕಾರ್ಯತಂತ್ರದ ಹೊಂದಾಣಿಕೆಗಳು, ಬದಲಾವಣೆಗಳು ಅತ್ಯಗತ್ಯವಾಗಿ ಬೇಕಾಗಿವೆ. ತಂಡದ ಆರಂಭಿಕ ಜೋಡಿಯಾದ ಜಾಕೋಬ್ ಬೆಹೆಲ್ ಮತ್ತು ವಿರಾಟ್ ಕೊಹ್ಲಿ ಪವರ್ಪ್ಲೇನಲ್ಲಿ ಅತ್ಯುತ್ತಮವಾಗಿ ಆಟ ಆಡುತ್ತಿದ್ದಾರೆ. ನಿರಂತರವಾಗಿ ಆರ್‌ಸಿಬಿಗೆ ಬಲವಾದ ಆರಂಭ ನೀಡುತ್ತಿದ್ದಾರೆ. ಆದಾಗ್ಯೂ, ಒಂದು ಸಾಮಾನ್ಯ ಸಮಸ್ಯೆಯು ಮರುಕಳಿಸುತ್ತದೆ: ವಿಕೆಟ್ ಪತನದ ನಂತರ ರನ್ ದರವು ತೀವ್ರವಾಗಿ ಕುಸಿಯುತ್ತಿದೆ. ಈ ಹಂತವು ತಕ್ಷಣದ ಬದಲಾವಣೆಯನ್ನು ಬಯಸುತ್ತದೆ. ಮೊದಲು ಟಿಮ್ ಡೇವಿಡ್ ಮತ್ತು ರೊಮಾರಿಯೊ ಶೆಫರ್ಡ್ ಅವರಿಗೆ ಬಡ್ತಿ ನೀಡುವುದು ಸೂಕ್ತ. ಅವರ ಆಕ್ರಮಣಕಾರಿ ಶೈಲಿಯು ಆವೇಗವನ್ನು ಕಾಯ್ದುಕೊಳ್ಳಬಹುದು ಮತ್ತು ಮಧ್ಯಮ ಕ್ರಮಾಂಕದ ಓವರ್ಗಳಲ್ಲಿ ಲಾಭ ಗಳಿಸಬಹುದು. ಈ ಪ್ರಯೋಗವು ವಿಫಲವಾದರೆ, ದೇವದತ್ ಪಡಿಕ್ಕಲ್ ಮತ್ತು ರಜತ್ ಪಾಟಿದಾರ್ ಅವರಂತಹ ವಿಶ್ವಾಸಾರ್ಹ ಬ್ಯಾಟರ್‌ಗಳು ಇನ್ನಿಂಗ್ಸ್ ಅನ್ನು ಸ್ಥಿರಗೊಳಿಸಲು ಹೆಜ್ಜೆ ಹಾಕಬಹುದು. ಆದಾಗ್ಯೂ, ಈ ಓವರ್ಗಳಲ್ಲಿ ನಿಧಾನಗತಿಯ ಸ್ಕೋರಿಂಗ್ ದರವು ದುಬಾರಿಯಾಗಿದೆ ಎಂದು ಸಾಬೀತುಪಡಿಸುವುದರಿಂದ ಹೆಚ್ಚಿನ ತುರ್ತು ಆಟಕ್ಕೆ ಅವರನ್ನು ಪ್ರೋತ್ಸಾಹಿಸಬೇಕು. ಇದು ಧೈರ್ಯದಿಂದಿರುವ ಸಮಯ. ಆರ್‌ಸಿಬಿ ಕನಿಷ್ಠ 250 ರನ್ಗಳ ಗುರಿಯನ್ನು ಹೊಂದಿರಬೇಕು – ಮಾನಸಿಕವಾಗಿ ಎದುರಾಳಿಯನ್ನು ಕುಗ್ಗಿಸಲು ಈ ಸ್ಕೋರ್ ಉಪಕಾರಿಯಾಗುತ್ತದೆ ಮತ್ತು ಗೆಲುವಿನ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಆರ್‌ಸಿಬಿ ಲೀಗ್‌ನಲ್ಲಿ ಪ್ರಾಬಲ್ಯ ಸಾಧಿಸಲು ಇದು ಸುವರ್ಣಾವಕಾಶವಾಗಿದೆ. ಆದರೆ ಅಂತಿಮವಾಗಿ ಅವರ ಅಭಿಮಾನಿಗಳು ಬಹುನಿರೀಕ್ಷಿತ ಟ್ರೋಫಿಯನ್ನು ಎತ್ತಿಹಿಡಿಯಲು. ಯುದ್ಧತಂತ್ರದ ಧೈರ್ಯ, ನಮ್ಯತೆ ಮತ್ತು ನಿರ್ಭೀತ ಕ್ರಿಕೆಟ್ ಪ್ರಮುಖವಾಗಿರುತ್ತದೆ. ಆರ್‌ಸಿಬಿಗೆ ಅವರ ಉಳಿದ ಪಂದ್ಯಗಳಲ್ಲಿ ನಾನು ಶುಭ ಹಾರೈಸುತ್ತೇನೆ. ಇದು ಅವರು ಇತಿಹಾಸ ಸೃಷ್ಟಿಸ ಸಕಾಲವಾಗಲಿ ಎಂದು ಹಾರೈಸುತ್ತೇನೆ. ಸಿ. ಎ ವಿಷ್ಣುಭರತ್ ಅಲಂಪಲ್ಲಿ ಅಧ್ಯಕ್ಷರು, ಆಚಾರ್ಯ ಪಾಠ ಶಾಲಾ ಶಿಕ್ಷಣ ಸಂಸ್ಥೆ.

# ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ

■ ಶ್ರೀ. ವಿನೋದ ಕಾಮತ,

ಸನಾತನ ಸಂಸ್ಥೆಯ ರಜತ ಮಹೋತ್ಸವದ ಸಂದರ್ಭದಲ್ಲಿ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ ಎಂಬ ಭವ್ಯ ಮತ್ತು ಐತಿಹಾಸಿಕ ಉತ್ಸವವನ್ನು ಆಯೋಜಿಸಲಾಗುತ್ತಿದೆ. ಈ ಐತಿಹಾಸಿಕ ಉತ್ಸವದ ನಿಮಿತ್ತ ವಿಶೇಷ ಪತ್ರಿಕಾಗೋಷ್ಠಿಯನ್ನು ಆಯೋಜಿಸಲಾಗಿದೆ. ಈ ಉತ್ಸವದ ಉದ್ದೇಶಗಳು ಮತ್ತು ಪರಿಕಲ್ಪನೆ, ಭವ್ಯ ಕಾರ್ಯಕ್ರಮದ ಬಗ್ಗೆ ವಿವರವಾದ ಮಾಹಿತಿ, ಗಣ್ಯರ ಉಪಸ್ಥಿತಿ ಮತ್ತು ವಿಶೇಷ ಕಾರ್ಯಕ್ರಮಗಳು ಈ ಎಲ್ಲ ಮಾಹಿತಿ ಈ ಪತ್ರಿಕಾಗೋಷ್ಠಿಯಲ್ಲಿ ಇರಲಿದೆ. ಪತ್ರಿಕಾಗೋಷ್ಠಿ ಸ್ಥಳ: ಪ್ರೆಸ್ ಕ್ಲಬ್, ಬೆಂಗಳೂರು ದಿನಾಂಕ: ಗುರುವಾರ , 08.05.2025 ಸಮಯ: ಮಧ್ಯಾಹ್ನ 12.00ಕ್ಕೆ ಈ ಪತ್ರಿಕಾಗೋಷ್ಠಿಗೆ ವ್ಯಾಪಕ ಪ್ರಸಿದ್ಧಿ ನೀಡಲು ನಿಮ್ಮ ಪತ್ರಿಕೆ ಸುದ್ದಿ ಚಾನೆಲ್ ಸುದ್ದಿ ಸಂಸ್ಥೆಯ ಪತ್ರಕರ್ತರನ್ನು ಕ್ಯಾಮೆರಾಮೆನ್ ಛಾಯಾಗ್ರಾಹಕರೊಂದಿಗೆ ಕಳುಹಿಸಬೇಕೆಂದು ಸವಿನಯ ವಿನಂತಿ

# ಆವಕಾಡೋ ಹಣ್ಣು ಆರೋಗ್ಯಕ್ಕೆ ಒಳ್ಳೆಯದೇ

ಆವಕಾಡೋ ಹಣ್ಣು ಪೋಷಕಾಂಶಗಳಿಂದ ಕೂಡಿದ್ದು, ಆರೋಗ್ಯಕ್ಕೆ ಒಳ್ಳೆಯದೇ, ಆದರೆ ಕೆಲವೊಂದು ಆರೋಗ್ಯ ಸಮಸ್ಯೆ ಇರುವವರು ಈ ಹಣ್ಣನ್ನು ತಿನ್ನಬಾರದು ಎನ್ನುತ್ತಾರೆ ವೈದ್ಯರು. ಆವಕಾಡೊ ಒಂದು ಸೂಪರ್ ಫುಡ್ ಆಗಿದೆ. ಇದು ಫೈಬರ್, ಜೀವಸತ್ವಗಳು, ಆರೋಗ್ಯಕರ ಕೊಬ್ಬಿನಂತಹ ಸಾಕಷ್ಟು ಪೋಷಕಾಂಶಗಳನ್ನು ಹೊಂದಿದೆ. ಆವಕಾಡೋವನ್ನು ಸ್ಮೂಥಿ, ಬ್ರೆಡ್ ಜೊತೆಗೆ ಸೇವಿಸಲಾಗುತ್ತದೆ. ಇದು ತೂಕ ನಷ್ಟದಿಂದ ಹಿಡಿದು ಹೃದಯದ ಆರೋಗ್ಯದವರೆಗೆ ಸಾಕಷ್ಟು ಪ್ರಯೋಜನಗಳನ್ನು ಹೊಂದಿದೆ. ಆದರೆ ನಿಮಗೇನಾದರೂ ಈ ಕೆಲವು ಆರೋಗ್ಯ ಸಮಸ್ಯೆಗಳಿದ್ದರೆ ನೀವು ಆವಕಾಡೋ ತಿನ್ನಲೇ ಬಾರದು ಎನ್ನುತ್ತಾರೆ ವೈದ್ಯರು.



**ಆವಕಾಡೋ ಎಲ್ಲರಿಗೂ ಸೂಕ್ತವಲ್ಲ:** ನವದೆಹಲಿಯ ಜನರಲ್ ಫಿಸಿಶಿಯನ್, ಎಂಬಿಬಿಎಸ್ ಡಾ. ಸುರೇಂದ್ರ ಕುಮಾರ್ ಅವರ ಪ್ರಕಾರ, ಆವಕಾಡೊ ಹಣ್ಣು ಎಲ್ಲರಿಗೂ ಸೂಕ್ತವಲ್ಲ. ಇದು ಕೆಲವು ಜನರ ದೇಹದ ಮೇಲೂ ಪ್ರತಿಕೂಲ ಪರಿಣಾಮಗಳನ್ನು ಬೀರಬಹುದು. ಅಲರ್ಜಿಯಾಗಿರಬಹುದು, ಜೀರ್ಣಕ್ರಿಯೆಯ ಸಮಸ್ಯೆಗಳಾಗಿರಬಹುದು ಅಥವಾ ರಕ್ತ ತೆಳುವಾಗಿರಬಹುದು. ಆವಕಾಡೊವನ್ನು ಅತಿಯಾಗಿ ಅಥವಾ ತಪ್ಪು ರೀತಿ ಯಲ್ಲಿ ಸೇವಿಸುವುದರಿಂದ ಕೆಲವೊಮ್ಮೆ ಆರೋಗ್ಯಕ್ಕೆ ಅಪಾಯವಾಗಬಹುದು.

ಆವಕಾಡೊ ತಿನ್ನುವುವವರ ಬರೀ ಅದರ ಪ್ರಯೋಜನಗಳನ್ನು ತಿಳಿದುಕೊಂಡರೆ ಸಾಲುವುದಿಲ್ಲ, ಅದರಿಂದಾಗುವ ಅಡ್ಡ ಪರಿಣಾಮಗಳ ಬಗ್ಗೆಯೂ ತಿಳಿದುಕೊಳ್ಳಬೇಕು. ಯಾವೆಲ್ಲಾ ವ್ಯಕ್ತಿಗಳಿಗೆ ಇದರ ಸೇವನೆ ಸೂಕ್ತವಲ್ಲ ಎನ್ನುವುದನ್ನ ತಿಳಿಯಬೇಕು.

**ಜೀರ್ಣಕ್ರಿಯೆಯ ಸಮಸ್ಯೆ:** ಆವಕಾಡೊ ಉತ್ತಮ ಪ್ರಮಾಣದ ಫೈಬರ್ ಅನ್ನು ಹೊಂದಿದ್ದು, ಇದು ಜೀರ್ಣಕ್ರಿಯೆಗೆ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

ಆದರೆ ಇದನ್ನು ಅತಿಯಾಗಿ ಸೇವಿಸಿದರೆ, ಅದೇ ಫೈಬರ್ ಗ್ಯಾಸ್ಟ್ರಿಕ್, ಆಮ್ಲೀಯತೆ ಅತಿಸಾರದಂತಹ ಸಮಸ್ಯೆಗಳನ್ನು ಉಂಟುಮಾಡಬಹುದು. ದುರ್ಬಲ ಜೀರ್ಣಾಂಗ ವ್ಯವಸ್ಥೆ ಇರುವವರು ಆವಕಾಡೊವನ್ನು ಸೀಮಿತ ಪ್ರಮಾಣದಲ್ಲಿ ಸೇವಿಸಬೇಕು. ವಿಶೇಷವಾಗಿ ನೀವು ಮೊದಲ ಬಾರಿಗೆ ಇದನ್ನು ಸೇವಿಸುತ್ತಿದ್ದರೆ, ಸಣ್ಣ ಪ್ರಮಾಣದಲ್ಲಿ ಸೇವಿಸಿ ಮತ್ತು ದೇಹದ ಪ್ರತಿಕ್ರಿಯೆಯನ್ನು ಗಮನಿಸಿ.

**ಅಲರ್ಜಿ ಸಮಸ್ಯೆಗಳು:** ಆವಕಾಡೊಗಳಲ್ಲಿನ ಕೆಲವು ಪ್ರೋಟೀನ್‌ಗಳು ಅಲರ್ಜಿಯ ಪ್ರತಿಕ್ರಿಯೆಗಳನ್ನು ಉಂಟು ಮಾಡಬಹುದು. ವಿಶೇಷವಾಗಿ ಲ್ಯಾಟೆಕ್ಸ್ ಅಲರ್ಜಿ ಇರುವ ಜನರಿಗೆ. ಅಂತಹ ಜನರು ಆವಕಾಡೋ ಸೇವಿಸಿದ ನಂತರ ಚರ್ಮದ ಮೇಲೆ ತುರಿಕೆ, ಊತ, ಉಸಿರಾಟದ ತೊಂದರೆ ಅಥವಾ ಹೊಟ್ಟೆನೋವು ಮುಂತಾದ ಸಮಸ್ಯೆಗಳು ಉಂಟಾಗಬಹುದು. ಆವಕಾಡೊ ತಿಂದ ನಂತರ ನಿಮಗೆ ಏನಾದರೂ ವಿಚಿತ್ರ ಅನುಭವವಾದರೆ, ತಕ್ಷಣ ವೈದ್ಯರನ್ನು ಸಂಪರ್ಕಿಸಿ.


**ತೂಕ ಇಳಿಕೆ ಅಥವಾ ಹೆಚ್ಚಳ:** ಆವಕಾಡೊವನ್ನು ತೂಕ ಇಳಿಸಲು ಅನುಕೂಲಕರ ಆಹಾರವೆಂದು ಪರಿಗಣಿಸಲಾಗಿದ್ದರೂ, ಇದರಲ್ಲಿ ಕೊಬ್ಬು ಮತ್ತು ಕ್ಯಾಲೋರಿಗಳು ಅಧಿಕವಾಗಿವೆ. ನೀವು ಅದನ್ನು ಅತಿಯಾಗಿ ಸೇವಿಸಿದರೆ, ಅದು ತೂಕ ಇಳಿಕೆಗೆ ಬದಲಾಗಿ ತೂಕ ಹೆಚ್ಚಾಗಲು ಕಾರಣವಾಗಬಹುದು.

ಇದು ಖಂಡಿತವಾಗಿಯೂ ಆರೋಗ್ಯಕರ ಕೊಬ್ಬು, ಆದರೆ ಹೆಚ್ಚಿನ ಕ್ಯಾಲೋರಿ ಸೇವನೆಯು ಯಾವುದೇ ಆಹಾರಕ್ರಮಕ್ಕೆ ಹಾನಿಕಾರಕವಾಗಿದೆ. ಆದ್ದರಿಂದ, ನಿಮ್ಮ ಆಹಾರದಲ್ಲಿ ಸಮತೋಲಿತ ಪ್ರಮಾಣದಲ್ಲಿ ಆವಕಾಡೊವನ್ನು ಸೇರಿಸಿ. ಹೆಚ್ಚಿನ ಜನರಿಗೆ ದಿನಕ್ಕೆ ಅರ್ಧ ಆವಕಾಡೊ ತಿನ್ನುವುದು ಉತ್ತಮ ಎಂದು ಪರಿಗಣಿಸಲಾಗುತ್ತದೆ.

# ಮಖಾನಾವನ್ನು ಹಾಲಿನಲ್ಲಿ ನೆನೆಸಿಟ್ಟು ತಿಂದ್ರೆ

ಮಖಾನ ಎಂದು ಕರೆಯಲ್ಪಡುವ ತಾವರೆ ಬೀಜಗಳಲ್ಲಿ, ಡ್ರೈ ಫ್ರೂಟ್ಸ್‌ಗಳಲ್ಲಿ ಸಿಗುವಷ್ಟೇ ಪ್ರಯೋಜನಗಳು ಕಂಡು ಬರುತ್ತದೆ. ಚೀನಾ ದೇಶದಲ್ಲಿ ಈ ಬೀಜಗಳನ್ನು ಔಷಧಿ ತಯಾರಿಕೆಯಲ್ಲಿ ಉಪಯೋಗ ಮಾಡುತ್ತಾರಂತೆ ಪ್ರಮುಖವಾಗಿ ಈ ಬೀಜಗಳ ಸಂಪೂರ್ಣ ಪ್ರಯೋಜನಗಳನ್ನು ಪಡೆದು ಕೊಳ್ಳಬೇಕು ಎಂದರೆ, ಹಸಿ ಹಾಲಿನಲ್ಲಿ ಸ್ವಲ್ಪ ಮಖಾನ ಬೀಜಗಳನ್ನು ನೆನೆಸಿಟ್ಟು ತಿನ್ನುವ ಅಭ್ಯಾಸ ಮಾಡಿಕೊಳ್ಳಬೇಕಂತೆ ಒಣ ಹಣ್ಣುಗಳು ಅಥವಾ ಡ್ರೈ ಫ್ರೂಟ್ಸ್ ಗಳು ಉಷ್ಣ ಸ್ವಭಾವವನ್ನು ಒಳಗೊಂಡಿರುವುದರಿಂದ, ಬೇಸಿಗೆಯಲ್ಲಿ ಹೆಚ್ಚಿನವರು ಇದರಿಂದ ಸ್ವಲ್ಪ ಅಂತರ ಕಾಯ್ದುಕೊಳ್ಳಲು ಬಯಸುತ್ತಾರೆ ಆದರೆ ಮಖಾನದ ವಿಚಾರಕ್ಕೆ ಬಂದರೆ ತಮ್ಮಲ್ಲಿನ ಅಸಂಖ್ಯಾತ ಆರೋಗ್ಯ ಪ್ರಯೋಜನಗಳನ್ನು ಮನುಷ್ಯರಿಗೆ ಒದಗಿಸುವ ಈ ಬೆಳ್ಳಗೆ ಇರುವ ಬೀಜಗಳು, ಬೇಸಿಗೆಯಲ್ಲಿ ದೇಹದ ಉಷ್ಣತೆಯನ್ನು ಕಡಿಮೆ ಮಾಡಿ ದೇಹಕ್ಕೆ ತಂಪಿನ ಅನುಭವ ನೀಡುತ್ತದೆ.

ಇನ್ನು ಈ ಬೀಜಗಳಲ್ಲಿ ಕಂಡು ಬರುವ ಪೌಷ್ಟಿಕ ಸತ್ವಗಳ ಬಗ್ಗೆ ನೋಡುವುದಾರೆ, ಈ ಬೀಜಗಳಲ್ಲಿ ಅನೇಕ ಬಗೆಯ ಮೆಗ್ನೀಸಿಯಮ್, ಪೊಟ್ಯಾಸಿಯಮ್, ನಾರಿನಾಂಶನಂತಹ ಅನೇಕ ಪೋಷಕಾಂಶಗಳಿದ್ದು, ಇದು ಆರೋಗ್ಯಕ್ಕೆ ತುಂಬಾನೇ ಪ್ರಯೋಜನಕಾರಿಯಾಗಿದೆ. ಅದೇ ರೀತಿ ಹಾಲು ಕ್ಯಾಲ್ಸಿಯಂ ಮತ್ತು ಪ್ರೋಟೀನ್ ಅನ್ನು ಹೊಂದಿರುತ್ತದೆ. ಹಾಲು ಮತ್ತು ಮಖಾನ ಎರಡರಲ್ಲೂ ಹೆಚ್ಚಿನ ಫೈಬರ್ ಅಂಶವಿದ್ದು, ಇದು ಜೀರ್ಣಾಂಗ ವ್ಯವಸ್ಥೆಯನ್ನು ಸುಧಾರಿಸುತ್ತದೆ. ಅದರಲ್ಲೂ ಮಖಾನ ಬೇಸಿಗೆಯ ಸೂಪರ್‌ಫುಡ್ ಆಗಿದ್ದು, ದೇಹದ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.



**ಮಖಾನ ಬೀಜಗಳನ್ನು ಸೇವನೆ ಮಾಡುವ ವಿಧಾನ**

ಮಖಾನ ಅಥವಾ ಫಾಕ್ಸ್ ಸೀಡ್ಸ್ ಗಳ ಸೇವನೆ ವಿಷಯಕ್ಕೆ ಬಂದರೆ ಇವುಗಳ ಮೇಲೆ ಕೆಲವು ಮಸಾಲೆ ಪದಾರ್ಥಗಳನ್ನು ಸಿಂಪಡಿಸಿ ಹುರಿದು ತಿನ್ನ ಬಹುದು. ಇವು ನಾಲಿಗೆಗೆ ಬಹಳ ರುಚಿ ಕೊಡುತ್ತವೆ. ಇದನ್ನು ಹೊರತು ಪಡಿಸಿ, ಈ ಬೀಜಗಳನ್ನು ಸೇವನೆ ಮಾಡುವಉತ್ತಮ ಮಾರ್ಗವೆಂದರೆ ಅದನ್ನು ಹಾಲಿನಲ್ಲಿ ನೆನೆಸಿ ತಿನ್ನುವುದು, ಇದರಿಂದ ದೇಹವು ಎಲ್ಲಾ ಪೋಷಕಾಂಶಗಳನ್ನು ಪಡೆಯುತ್ತದೆ ಮತ್ತು ಚರ್ಮಕ್ಕೂ ಅನೇಕ ಪ್ರಯೋಜ ನಗಳಿವೆ. ಹಸಿ ಹಾಲಿನಲ್ಲಿ ನೆನೆಸಿದ ಮಖಾನಾ ತಿನ್ನುವುದರಿಂದ ಏನೆಲ್ಲಾ ಪ್ರಯೋಜನಗಳಿವೆ ಎಂದು ತಿಳಿಯೋಣ....

**ಮೂಳೆಗಳ ಆರೋಗ್ಯಕ್ಕೆ ಒಳ್ಳೆಯದು :** ಆಯುರ್ವೇದ ತಜ್ಞ ಕಿರಣ್ ಗುಪ್ತಾ ಜಿ ಅವರು ಹೇಳಿರುವ ಪ್ರಕಾರ, ಕುದಿಸಿದ ಹಾಲಿನಲ್ಲಿ ಮಖಾನಾವನ್ನು ನೆನೆಸಿಟ್ಟು ತಿನ್ನುವುದಕ್ಕಿಂತ ಹಸಿ ಹಾಲಿನಲ್ಲಿ ಮಖಾನಾ ತಿನ್ನುವುದು ಹೆಚ್ಚು ಪ್ರಯೋಜನಕಾರಿ ಎಂದು ಸಲಹೆ ನೀಡುತ್ತಾರೆ. ಹಸಿ ಹಾಲಿನಲ್ಲಿ ನೆನೆಸಿದ ಮಖಾನಾ ತಿನ್ನುವುದರಿಂದ ದೇಹದಿಂದ ಕ್ಯಾಲ್ಸಿಯಂ ಹೊರಬರುತ್ತದೆ. ವಾಸ್ತವವಾಗಿ, ಸೂಪರ್‌ಫುಡ್ ಮಖಾನಾ ಮತ್ತು ಹಾಲು ಎರಡರಲ್ಲೂ ಕೂಡ ಬಹಳಷ್ಟು ಕ್ಯಾಲ್ಸಿಯಂ ಪ್ರಮಾಣ ಕಂಡು ಬರುತ್ತದೆ. ಆದ್ದರಿಂದ ಅವುಗಳನ್ನು ಒಟ್ಟಿಗೆ ತಿನ್ನುವುದು ಮೂಳೆಗಳನ್ನು ಬಲಪಡಿಸುತ್ತದೆ.

**ಜೀರ್ಣಾಂಗ ವ್ಯವಸ್ಥೆಯು ಆರೋಗ್ಯಕರವಾಗಿರುತ್ತದೆ** ನಿಮಗೆ ಗೊತ್ತಿರಲಿ ಮಖಾನ ಬೀಜಗಳಲ್ಲಿ ನಾರಿನಾಂಶ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ. ಹೀಗಾಗಿ ಮನುಷ್ಯನ ಜೀರ್ಣ ಪ್ರಕ್ರಿಯೆಯಲ್ಲಿ ಇದು ಬಹಳಷ್ಟು ಸಹಾಯಕ. ಮಲಬದ್ಧತೆ ಹಾಗೂ ಅಜೀರ್ಣ ಸಮಸ್ಯೆ ಎದುರಿಸುತ್ತಿರುವವರು ಸುಲಭವಾಗಿ ಮಖಾನ ಬೀಜಗಳನ್ನು ಸೇವಿಸಿ ತಮ್ಮ ಸಮಸ್ಯೆ ಯನ್ನು ಪರಿಹಾರ ಮಾಡಿಕೊಳ್ಳಬಹುದು. ಪ್ರಮುಖವಾಗಿ ಹೊಟ್ಟೆಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ದೂರ ಮಾಡಬಹುದು.

**ದೇಹದ ಶಕ್ತಿಯನ್ನು ಹೆಚ್ಚಿಸಲು ನೆರವಾಗುತ್ತದೆ:** ಹಸಿ ಹಾಲಿನಲ್ಲಿ ನೆನೆಸಿದ ಮಖಾನಾ ಬೀಜಗಳನ್ನು ಸೇವನೆ ಮಾಡುವ ಅಭ್ಯಾಸ ಮಾಡಿಕೊಂಡರೆ, ಇದರ ಪ್ರಯೋಜನಗಳು ದ್ವಿಗುಣಗೊಳ್ಳುತ್ತವೆ. ಪ್ರಮುಖವಾಗಿ ಈ ಬೀಜಗಳು ದೇಹದ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ದಿನವಿಡೀ ಕೆಲಸ ಮಾಡುವುದರಿಂದ ನೀವು ಅನುಭ ವಿಸುವ ಆಯಾಸವನ್ನು ಕಡಿಮೆ ಮಾಡುತ್ತದೆ. **ಮುಖದ ಸೌಂದರ್ಯ ಹೆಚ್ಚಿಸುತ್ತದೆ:** ಮಖಾನ ಬೀಜಗಳಲ್ಲಿ ಆಂಟಿ ಏಜಿಂಗ್ ಗುಣ ಲಕ್ಷಣಗಳ ಜೊತೆಗೆ ಆಂಟಿ ಆಕ್ಸಿಡೆಂಟ್ ಅಂಶಗಳು ಕೂಡ ಹೇರಳವಾಗಿ ಕಂಡುಬರುತ್ತದೆ. ಹೀಗಾಗಿ ಪ್ರತಿ ದಿನ ಒಂದು ಹಾಲಿನಲ್ಲಿ ನೆನೆಸಿಟ್ಟ ಹಿಡಿ ಮಖಾನ ಬೀಜಗಳನ್ನು ಸೇವಿಸುವು ದರಿಂದ ನಿಮ್ಮ ಸೌಂದರ್ಯ ಹಾಗೂ ಯೌವ್ವನ ಹಾಗೇ ಉಳಿದು ನಿಮ್ಮ ದೇಹದ ಚರ್ಮದ ಹೊಳಪು ಹೆಚ್ಚುತ್ತದೆ.

**ನಿದ್ರೆಯ ಗುಣಮಟ್ಟವನ್ನು ಸುಧಾರಿಸುತ್ತದೆ:** ಹಸಿ ಹಾಲಿನಲ್ಲಿ ನೆನೆಸಿದ ಮಖಾನಾ ತಿನ್ನುವುದರಿಂದ ನಿದ್ರೆಯ ಗುಣಮಟ್ಟ ಸುಧಾರಿಸುತ್ತದೆ. ಏಕೆಂದರೆ ಮಖಾನಾ ಮತ್ತು ಹಾಲು ಮೆಗ್ನೀಸಿಯಮ್ ಮತ್ತು ಕ್ಯಾಲ್ಸಿಯಂ ಅನ್ನು ಹೊಂದಿರುತ್ತದೆ, ಇದು ದೇಹವನ್ನು ವಿಶ್ರಾಂತಿ ಮಾಡುತ್ತದೆ ಮತ್ತು ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು ನಿಮಗೆ ಚೆನ್ನಾಗಿ ನಿದ್ರೆ ಮಾಡಲು ಸಹಾಯ ಮಾಡುತ್ತದೆ.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ.

**ವೃಷಭ** ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ಇವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮಿಥುನ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಕರ್ಕಾಟಕ** ಗರ್ಭಿಣಿಯರಿಗೆ ಉತ್ತಮ ದಿನವಲ್ಲ. ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ಬಹಳ ಪ್ರಯೋಜನಕಾರಿ ದಿನವಲ್ಲ. ಆದ್ದರಿಂದ ನಿಮ್ಮ ಹಣದ ಪರಿಸ್ಥಿತಿಯನ್ನು ಪರಿಶೀಲಿಸಿ ಮತ್ತು ನಿಮ್ಮ ವೆಚ್ಚಗಳ ಮೇಲೆ ಮಿತಿ ಹೇರಿ.

**ಸಿಂಹ** ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ. ಅವರೊಂದಿಗೆ ಗುಣಮಟ್ಟದ ಸಮಯ ಕಳೆಯಿರಿ. ದೂರು ನೀಡಲು ಯಾವುದೇ ಅವಕಾಶ ನೀಡಬೇಡಿ.

**ಕನ್ಯಾ** ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪರ ಅಥವಾ ಉದ್ಯೋಗದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಮನೆಯ ಸುಧಾರಣೆಯ ಯೋಜನೆಗಳನ್ನು ಪರಿಗಣಿಸಬೇಕು.

**ತುಲಾ** ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ.

**ವೃಶ್ಚಿಕ** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು.

**ಧನಸ್ಸು** ಸಮೃದ್ಧ ಮತ್ತು ಹೆಚ್ಚಿನ ಕೊಲೆಸ್ಟ್ರಾಲ್ ಇರುವ ಆಹಾರ ತಪ್ಪಿಸಲು ಪ್ರಯತ್ನಿಸಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

**ಮಕರ** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸಧೃಢವಾಗಿರಲು ಸಹಾಯ ಮಾಡುತ್ತದೆ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು.

**ಕುಂಭ** ಕ್ರೀಡೆಗಳು ಮತ್ತು ಇತರ ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವುದು ನಿಮ್ಮ ಕಳೆದುಕೊಂಡ ಚೈತನ್ಯವನ್ನು ಸಂಗ್ರಹಿಸಲು ಸಹಾಯ ಮಾಡುತ್ತದೆ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.

**ಮೀನ** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಇಂದು ಉತ್ತಮ ಬೆಲೆಗೆ ಮಾರಾಟ ಮಾಡಬಹುದು.

## ಪಾಕಿಸ್ತಾನ ಪ್ರಜೆಗಳನ್ನು ಭಾರತದಿಂದ ಗಡೀಪಾರು ಮಾಡಿ

• ಉದಯವಾಹಿನಿ ಬೆಳಗಾವಿ

ಭಾರತದಲ್ಲಿ ಅಕ್ರಮವಾಗಿ ನೆಲೆಸಿದ ಪಾಕಿಸ್ತಾನ ಮೂಲದ ಪ್ರಜೆಗಳನ್ನು ತಕ್ಷಣವೇ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ, ಬಿಜೆಪಿ ಮಹಾನಗರ ಮತ್ತು ಬೆಳಗಾವಿ ಗ್ರಾಮೀಣ ಜಿಲ್ಲಾ ಘಟಕದ ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಇಲ್ಲಿನ ರಾಣಿ ಚನ್ನಮ್ಮನ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯ ವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಕಾರರು, ಪಾಕಿಸ್ತಾನ ಪ್ರಜೆಗಳೇ ಭಾರತ ಬಿಟ್ಟು ತೊಲಗಿ' ಎಂದು ಘೋಷಣೆ ಕೂಗಿದರು. ತಮ್ಮ ಬೇಡಿಕೆ ಈಡೇರಿಸುವಂತೆ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಅವರಿಗೆ ಮನವಿ ಸಲ್ಲಿಸಿದರು.

ಮಾಜಿ ಶಾಸಕ ಸಂಜಯ ಪಾಟೀಲ, ಕಾಶ್ಮೀರದಲ್ಲಿ ಹಿಂದೂಗಳ ಹತ್ಯೆ ಮಾಡಿರುವ ಘಟನೆ ಖಂಡನೀಯ. ಪಾಕಿಸ್ತಾನದವರು ಭಯೋತ್ಪಾದಕರ ಮೂಲಕ ಹಿಂದೂಗಳಿಗೆ ತೊಂದರೆ ಕೊಡುತ್ತಿದ್ದಾರೆ. ವಿವಿಧ ರಾಜ್ಯದವರು ತಮ್ಮಲ್ಲಿ ಅಕ್ರಮವಾಗಿ ನೆಲೆಸಿದ್ದ


ಉದಯವಾಹಿನಿ ಚಿತ್ರ

ಪಾಕಿಸ್ತಾನ ಪ್ರಜೆಗಳನ್ನು ಹೊರಹಾಕುತ್ತಿದ್ದಾರೆ. ರಾಜ್ಯ ಸರ್ಕಾರವೂ ಇದೇ ಮಾದರಿಯಲ್ಲಿ ನಡೆದುಕೊಳ್ಳಬೇಕು. ಪಾಕಿಸ್ತಾನ ಪ್ರಜೆಗಳನ್ನು ತಕ್ಷಣವೇ ಹೊರಹಾಕಬೇಕು' ಎಂದು ಒತ್ತಾಯಿಸಿದರು. ಪಕ್ಷದ ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ಸುಭಾಷ ಪಾಟೀಲ, 'ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಪಾಕಿಸ್ತಾನ ಮೂಲದ ಪ್ರಜೆಗಳನ್ನು ಕೇಂದ್ರ ಸರ್ಕಾರದ ನಿರ್ದೇಶನದಂತೆ ಪತ್ತೆಹಚ್ಚಿ, ಗಡಿಪಾರು ಮಾಡಬೇಕು. ಇಲ್ಲದಿದ್ದರೆ ಉಗ್ರಹೋರಾಟ ಅನಿವಾರ್ಯ' ಎಂದು ಎಚ್ಚರಿಕೆ ಕೊಟ್ಟರು.

• ಜಿಲ್ಲೆಗಳಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿ

# ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮವಹಿಸಿ: ಸಿಎಂ

• ಉದಯವಾಹಿನಿ ಚಿತ್ರದುರ್ಗ

ರಾಜ್ಯದಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗಬಾರದು ಎಂದು ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಸೂಚನೆ ನೀಡಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದದಲ್ಲಿ ಅವರು ಮಾತನಾಡಿದರು.

ಶುದ್ಧ ಕುಡಿಯುವ ನೀರಿಗೆ ರಾಜ್ಯದ ಒಂದೇ ಒಂದು ಗ್ರಾಮದಲ್ಲೂ ಸಮಸ್ಯೆ ಆಗಬಾರದು. ಕುಡಿಯುವ ನೀರಿನ ನಿರ್ವಹಣೆಗೆ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ. ಪಂಚಾಯತ್ ರಾಜ್ ಇಲಾಖೆಗೆ ರೂ.60 ಕೋಟಿ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಜಿಲ್ಲೆಗಳಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾಧಿಕಾರಿಗಳು


ಉದಯವಾಹಿನಿ ಚಿತ್ರ

ಕ್ರಿಯಾ ಯೋಜನೆ ರೂಪಿಸಿ, ಟಾಸ್ಕ್ ಫೋರ್ಸ್ ಸಮಿತಿಯಿಂದ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸಲು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

**ಹಣಕಾಸಿನ ಕೊರತೆ ಇರುವುದಿಲ್ಲ**

ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ವಾಡಿಕೆಗಿಂತ ಶೇ.55ರಷ್ಟು ಮಾನ್ಸೂನ್ ಪೂರ್ವ ಹೆಚ್ಚು ಮಳೆಯಾಗಿದೆ. ವಾಡಿಕೆಗಿಂತ ಯಾವುದೇ ಜಿಲ್ಲೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿಲ್ಲ. 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಎಲ್ಲಾ ಜಲಾಶಯಗಳಲ್ಲಿ ಶೇ.50 ರಿಂದ ಶೇ.60ರಷ್ಟು ಹೆಚ್ಚಿನ ನೀರಿನ ಸಂಗ್ರಹವಿದೆ. ಈ ವರ್ಷ ವಾಡಿಕೆಗಿಂತ ಹೆಚ್ಚು ಮುಂಗಾರು ಮಳೆಯಾಗುವ ಬಗ್ಗೆ ಹವಾಮಾನ


ಉದಯವಾಹಿನಿ ಚಿತ್ರ

ಇಲಾಖೆ ಮುನ್ಸೂಚನೆ ನೀಡಿದೆ. ಮಾನ್ಸೂನ್ ವಿಳಂಬವಾದರೆ 6319 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು ಎಂದು ಗುರುತಿಸಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ 551 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 123 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಅಗತ್ಯ ಸಂದರ್ಭದಲ್ಲಿ ನೀರು ಪಡೆಯಲು ಈಗಾಗಲೇ 3 ಸಾವಿರ ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದ್ದು, 480 ಬೋರ್‌ವೆಲ್‌ಗಳನ್ನು ಖಾಸಗಿಯವರಿಂದ ಬಾಡಿಗೆ ಪಡೆದು ನೀರು ಒದಗಿಸಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಸಮಸ್ಯೆ ಶುರುವಾಗುವ

**ಅಗತ್ಯ ಬಿದ್ದರೆ ಮಾತ್ರ ಬೋರ್‌ವೆಲ್‌ಗಳನ್ನು ಕೊರೆಯಬೇಕು**

ಪ್ರತಿ ವರ್ಷ ಕುಡಿಯುವ ನೀರಿನ ತೊಂದರೆ ಎದುರಿಸುತ್ತಿರುವ ಗ್ರಾಮಗಳಲ್ಲಿ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸಲು ಯೋಜನೆ ರೂಪಿಸಬೇಕು. ಅಗತ್ಯ ಬಿದ್ದರೆ ಮಾತ್ರ ಬೋರ್‌ವೆಲ್‌ಗಳನ್ನು ಕೊರೆಯಬೇಕು. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಬೋರ್‌ವೆಲ್ ಕೊರೆದು ವೆಚ್ಚ ಮಾಡಬಾರದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮೊದಲೇ ಸಭೆ ನಡೆಸಿ ಸಮರೋಪಾದಿ ಸಿದ್ಧತೆ ಕೈಗೊಳ್ಳುವಂತೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದರು. ಸಚಿವರಾದ ಪ್ರಿಯಾಂಕ್ ಖರ್ಗೆ, ಎಂ.ಬಿ.ಪಾಟೀಲ್, ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಸೇರಿದಂತೆ ಹಿರಿಯ

> **ಬಿ-ಖಾತಾ, ಇ-ಖಾತಾವನ್ನು ಅಧಿಕಾರಿಗಳು ಸಮರ್ಪಕವಾಗಿ ಮಾಡಬೇಕು. ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪ್ರತಿ ದಿನವೂ ಒಂದು ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು**
> -ಕೃಷ್ಣಬೈರೇಗೌಡ, ಕಂದಾಯ ಸಚಿವ

ಅಧಿಕಾರಿಗಳು ವಿಡಿಯೋ ಸಂವಾದದಲ್ಲಿ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಭಾಗಿಯಾಗಿದ್ದರು.

ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಬಸನಗೌಡ ಪಾಟೀಲ್, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಮಹೇಂದ್ರ ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಹೊಸಪೇಟೆಯ ಟ್ರಕ್ ಟರ್ಮಿನಲ್ ಲೋಕಾರ್ಪಣೆ

• ಉದಯವಾಹಿನಿ ಹೊಸಪೇಟೆ

ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಸಂಸ್ಥೆ ಹೊಸಪೇಟೆ ಟ್ರಕ್ ಟರ್ಮಿನಲ್ ಲೋಕಾರ್ಪಣೆಗೊಂಡಿತು. ರಾಷ್ಟ್ರೀಯ ಹೆದ್ದಾರಿಗೆಹೊಂದಿಕೊಂಡಿರುವ ಸ್ಥಳದಲ್ಲಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಿ ಮಾತನಾಡಿ ಬೆಂಗಳೂರು, ಮೈಸೂರು ಹೊರತುಪಡಿಸಿ ಸಂಪೂರ್ಣ ಸುಸಜ್ಜಿತ ಹಾಗೂ ಎಲ್ಲಾ ಸೌಕರ್ಯಗಳನ್ನು ಒಳಗೊಂಡ ಮೊದಲ ಲಾರಿ ಟರ್ಮಿನಲ್ ಹೊಸಪೇಟೆಯಲ್ಲಿ ಲೋಕಾರ್ಪಣೆಗೊಂಡಿರುವುದು ಸಂತಸದ ವಿಷಯವಾಗಿದೆ. ರಾಜ್ಯದ ಬೆಂಗಳೂರು, ಧಾರವಾಡ, ಉತ್ತರಕನ್ನಡದ ದಾಂಡೇಲಿ, ಹುಬ್ಬಳ್ಳಿ ಹಾಗೂ ರಾಯಚೂರಿನಲ್ಲಿಯ ನೂತನ ಲಾರಿ ಟರ್ಮಿನಲ್ ನಿರ್ಮಾಣವಾಗಲಿವೆ ಎಂದರು.


ಉದಯವಾಹಿನಿ ಚಿತ್ರ

**ಒಂದು ತಿಂಗಳು ಉಚಿತ**

**ಒಂದು ತಿಂಗಳು ಉಚಿತ:** ಉದ್ಘಾಟನಾ ಸಮಾರಂಭದ ಸವಿನೆನಪಿಗಾಗಿ ಮೊದಲ ಒಂದು ತಿಂಗಳು ಉಚಿತ ಬಳಕೆಗೆ ಅನುವು ಮಾಡಲಾಗಿದೆ. ನಂತರ ಸುಸಜ್ಜಿತ ನಿರ್ವಹಣೆಗೆ ನಿಗದಿತ ದರ ಪಾವತಿಸಬೇಕು ಎಂದರು.

ಹೊಸಪೇಟೆ ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ ನಿತ್ಯವೂ ನಾಲ್ಕರಿಂದ ಐದು ಸಾವಿರ ಲಾರಿಗಳು ಸಂಚರಿಸಲಿದ್ದು ನಿತ್ಯವೂ ಅವರು ಪಡುವ ಪಾಡ ಹೇಳತೀರದಾಗಿತು ಈ ಲಾರಿ ಟರ್ಮಿನಲ್ ದೊಡ್ಡ ಕೊಡುಗೆಯಾಗಿದೆ ಲಾರಿ ಚಾಲಕರು, ಅಸೋಶಿಯೇಷನ್ ಸಂಘಗಳ ಪರವಾಗಿಯೂ ಸಾರಿಗೆ ಇಲಾಖೆಯ ಕಾರ್ಯಕ್ಕೆ ಕೃತಜ್ಞತೆ ಸಲ್ಲಿಸಿದರು.

> **ಕಾರಣಾಂತರಗಳಿಂದ ಸ್ಥಗಿತಗೊಂಡ ಕಾಮಗಾರಿ ಸಚಿವ ರಾಮಲಿಂಗಾರಡ್ಡಿ ಹಾಗೂ ಶಾಸಕ ಗವಿಯಪ್ಪರವರ ವಿಶೇಷ ಆಸಕ್ತಿ ಲಾರಿ ಚಾಲಕರಿಗೆ ಆಶ್ರಯದೊರೆತಂತಾಗಿದೆ ಎಂದರು ಹೊಸಪೇಟೆಯಲ್ಲಿ ಮೊದಲ ಮಾದರಿ ಟರ್ಮಿನಲ್ ಆಗಿದ್ದು ಉಳಿದ 17 ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಮೂಲಕ ಹೆಚ್ಚು ಪ್ರಯೋಜನ ಪಡೆಯುವಂತೆ ಮಾಡಬೇಕು** -ಷಣ್ಮುಖಪ್ಪ
> ಲಾರಿ ಅಸೋಶಿಯೇಷನ್ ಅಧ್ಯಕ್ಷ

## ಕನ್ನಡ ಮನಸ್ಸುಗಳನ್ನು ಒಗ್ಗೂಡಿಸಿದ ಕಸಾಪ

• ಉದಯವಾಹಿನಿ ಕಮಲನಗರ

ಶತ-ಶತಮಾನಗಳಿಂದ ಕನ್ನಡ ಮನಸ್ಸುಗಳು ಒಂದೇ ವೇದಿಕೆಯಡಿ ಬರಬೇಕೆಂಬ ಕನಸನ್ನು ಸಾಕಾರಗೊಳಿಸಿದ ಕೀರ್ತಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಲ್ಲುತ್ತದೆ ಎಂದು ನಿವೃತ್ತ ಪ್ರಾಚಾರ್ಯ ಎಸ್.ಎನ್.ಶಿವಣಕರ ಹೇಳಿದರು.

ಪಟ್ಟಣದ ಡಾ.ಚನ್ನಬಸವ ಪಟ್ಟದ್ದೇವರ ವಾಚನಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ವರ್ಷದ ಸಂಸ್ಥಾಪನಾ ದಿನದ ಪ್ರಯುಕ್ತ ತಾಲ್ಲೂಕು ಕಸಾಪ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡು-ನುಡಿ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನದೇ ಆದ ಪಾತ್ರವನ್ನು ಶತಮಾನಗಳಿಂದ ನಿರ್ವಹಿಸಿದೆ. ಕಸಾಪ ಉಳಿವಿಗಾಗಿ ಎಲ್ಲಾ ಕನ್ನಡಿಗರು ಕೈಜೋಡಿಸುವುದು ಅನಿವಾರ್ಯವಾಗಿದೆ ಎಂದರು.


ಉದಯವಾಹಿನಿ ಚಿತ್ರ

ತಾಪಂ ಮಾಜಿ ಅಧ್ಯಕ್ಷ ಶ್ರೀರಂಗ ಪರಿಹಾರ ಮಾತನಾಡಿ, ಕನ್ನಡಿಗರು ಒಂದೆಡೆ ಸೇರಲು ವೇದಿಕೆಯೇ ಇಲ್ಲದ ದಿನಗಳಲ್ಲಿ ಮಹಾರಾಜ ಕೃಷ್ಣರಾಜ ಒಡೆಯರ್, ದಿವಾನ್ ಸರ್. ಎಂ. ವಿಶ್ವೇಶ್ವರಯ್ಯ ಸೇರಿದಂತೆ ಅನೇಕ ಮಹನೀಯರ ಸತತ ಪರಿಶ್ರಮದ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ಇಂದು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿದೆ ಎಂದರು.

ಗ್ರಾಪಂ ಅಧ್ಯಕ್ಷೆ ಸುಶೀಲಾ ಸಜ್ಜನ್ ಕಾರ್ಯಕ್ರಮ ಉದ್ಘಾಟಿಸಿದರು. ಕಸಾಪ ತಾಲ್ಲೂಕು ಅಧ್ಯಕ್ಷ ಪ್ರಶಾಂತ ಮಠಪತಿ ಅಧ್ಯಕ್ಷತೆ ವಹಿಸಿದ್ದರು.

## ನೀರು ಸರಬರಾಜುಗಾರ ನಡೆ ಖಂಡಿಸಿ ನೀಡಿದ ಸಮಸ್ಯೆಗೆ ತಾಲ್ಲೂಕ ಪಂಚಾಯಿತ ಅಧಿಕಾರಿ ಭೇಟಿ

• ಉದಯವಾಹಿನಿ ಇಂಡಿ

ತಾಲ್ಲೂಕಿನ ಚಿಕ್ಕ ಬೆವನೂರ ಗ್ರಾ. ಪಂ ವಾರ್ಡ್ ಸಂಖ್ಯೆ 5 ರಲ್ಲಿ ಇಲ್ಲಿನ ನೀರು ಸರಬರಾಜುಗಾರ ಸಂತೋಷ್ ಹುಲ್ಲೂರ ಮಟ್ಟದ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಕುರಿತು ಸಾರ್ವಜನಿಕರು ನೀಡಿರುವ ಸಮಸ್ಯೆಯನ್ನು ಆಲಿಸಲು ತಾಲ್ಲೂಕ್ ಪಂಚಾಯತಿ ಅಧಿಕಾರಿಗಳು ಶ್ರೀ ನಂದಿಪ ರಾಥೋಡ್ ಇವರು ಭೇಟಿ ಕೊಟ್ಟರು. ಇಲ್ಲಿನ ಸಾರ್ವಜನಿಕರು ವಾಟರ್ ಮ್ಯಾನ್ ಸಂತೋಷ್ ಹುಲ್ಲೂರು ಇವನ ನೀತಿಯನ್ನು ಖಂಡಿಸಿ ಮಹಿಳೆಯರಿಗೆ ಏಕ ವಚನದಲ್ಲಿ ಮಾತನಾಡುವುದು ಸಮಯ ಬಿಟ್ಟು ಸಮಯ ನೀರು ಬಿಡುವದು ಸಾರ್ವಜನಿಕರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಿಸುವುದು ಈ ರೀತಿಯಾಗಿ ಮಾಡುತ್ತಿರುವುದನ್ನು, ಖಂಡಿಸಿ, ಮಹಿಳೆಯರು ತರಾಟೆ ತೆಗೆದುಕೊಂಡರು.

**ಸಾರ್ವಜನಿಕರ ಮೇಲೆ ಇಲ್ಲಸಲ್ಲದ ಆರೋಪ**

ಇದೇ ಸಮಯದಲ್ಲಿ ತಾಲ್ಲೂಕು ಪಂಚಾಯಿತಿ ಅಧಿಕಾರಿ ಶ್ರೀ ನಂದೀಪ್ ರಾಥೋಡ್ ಈ ವಾಟರ್ ಮ್ಯಾನ್ ಮೇಲೆ ಸರಿಯಾಗಿ ನೀರು ಪೂರೈಸಿದ ಹೋದರೆ


ಉದಯವಾಹಿನಿ ಚಿತ್ರ

ಮುಂದಿನ ದಿನಮಾನಗಳಲ್ಲಿ ಬೇರೆ ಕಡೆ ವರ್ಗ ಮಾಡಿ ಕಠಿಣ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ವಾರ್ಡಿಗೆ ಇನ್ನಿತರ ಮೂಲ ಸೌಲಭ್ಯಗಳ ವಂಚಿತ ಇರುವುದನ್ನು ಗಮನಿಸಿ ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪಂಚಾಯಿತಿ ಸಿಬ್ಬಂದಿಗಳಿಗೆ ತಿಳಿ ಹೇಳಿದರು. ಇದರಲ್ಲಿ ಮಹಿಳಾ ಸದಸ್ಯ ಶ್ರೀಮತಿ ಜಯಶ್ರೀ ವೆಂಕಟೇಶ್ ಬೈರಾಮಡಗಿ ಇವರು ಈ ವಾರ್ಡಿಗೆ ಇರುವ ಸಮಸ್ಯೆಗಳನ್ನು ಅಧಿಕಾರಿಗಳಿಗೆ ಗಮನಕ್ಕೆ ತಂದರು, ಈ ಮಹಿಳೆಯ ಅಭಿವೃದ್ಧಿ ಕೆಲಸಗಳನ್ನು ಸಹಿಸದ ಕೆಲ ಸಾರ್ವಜನಿಕರು ಹೊಟ್ಟೆಕಿಚ್ಚಿದಿಂದ ಅವಾಚ್ಯ ಶಬ್ದಗಳು ಆಡಿದ್ದು ಕಂಡು ಬಂದಿತು.

ಈ ವಾರ್ಡ್ ಕುಂದು ಕೊರತೆಗಳನ್ನು ನಿವಾರಿಸಿ ಸರಿಯಾಗಿ ಕಾರ್ಯನಿರ್ವಹಿಸದ ಪಂಚಾಯಿತಿ ಸಿಬ್ಬಂದಿ ಮೇಲೆ ಕಠಿಣ ಕ್ರಮ ಜರುಗಿಸಲು ನೀಡುತ್ತಿರುವ ಮನವಿ ಶ್ರೀ ವೆಂಕಟೇಶ ಅ ಬೈರಾಮಡಗಿ, ಬಾಬು ಅತ್ತಾರ್, ಶ್ರೀಮತಿ ನೂರಜಾನ ಅಬ್ದುಲ್ ರೆಹಮಾನ್ ಅತ್ತಾರ್, ಶ್ರೀ ಮೈಬು ಖಾಜಿ, ಮಾಜಿ ಗ್ರಾಮ ಪಂಚಾಯತಿ ಸದಸ್ಯ ಶ್ರೀಮತಿ ಅಮೀನಾ ಅಬ್ದುಲ್ ರಹಮಾನ್ ಮಣ್ಣೂರ, ಪರ್ವೀನ್ ಚಪ್ಪರ ಬಂದ್, ರೇಷ್ಮಾ ಮಾಶಾಳಕರ, ಬಸವರಾಜ್ ಅಗಸರ, ಶ್ರೀಮತಿ ಜಗದೇವಿ ಸಿದ್ದಪ್ಪ ಲಚ್ಯಾಣ, ಪ್ರಶಾಂತ್ ಉಪಾಸೆ ಸೇರಿದಂತೆ ಗ್ರಾಮದ ವಿವಿಧ ಸಾರ್ವಜನಿಕರು, ಹಾಗೂ ಪಂಚಾಯಿತಿ ಕಾರ್ಯದರ್ಶಿ ಸಿಬ್ಬಂದಿ ಒಳಗೊಂಡ ಗೊಲ್ಲ ಸಮಾಜದ ಜನತೆ ಒಳಗೊಂಡ ಅನೇಕ ಮಹಿಳಾ ಹಾಗೂ ಸಾರ್ವಜನಿಕರು ಸೇರಿದ್ದರು.

## ಪ್ರಯಾಣಿಕರ ಸುರಕ್ಷತೆ, ವಿಶ್ವಾಸಕ್ಕೆ ಚ್ಯುತಿ ಬರದಂತೆ ಕರ್ತವ್ಯ ನಿರ್ವಹಿಸಿರಿ: ರಾಮನಗೌಡರ

• ಉದಯವಾಹಿನಿ ಹುಬ್ಬಳ್ಳಿ

ಸುರಕ್ಷತೆಯ ನಂಬಿಕೆಯಿಂದ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣ ಮಾಡುವ ಮಹಿಳೆಯರು ಮಕ್ಕಳು ಸೇರಿದಂತೆ ಸಾರ್ವಜನಿಕ ಪ್ರಯಾಣಿಕರ ವಿಶ್ವಾಸಕ್ಕೆ ಚ್ಯುತಿ ಬರದಂತೆ ಸಾರಿಗೆ ಸಿಬ್ಬಂದಿ ಕರ್ತವ್ಯ ನಿರ್ವಹಿಸಬೇಕು ಎಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ ತಿಳಿಸಿದ್ದಾರೆ. ಹುಬ್ಬಳ್ಳಿ ಗ್ರಾಮಾಂತರ 1 ಹಾಗೂ 2ನೇ ಡಿಪೋದಲ್ಲಿ ಚಾಲಕರು, ನಿರ್ವಾಹಕರು, ತಾಂತ್ರಿಕ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆ ಜಾರಿಯಾದ ನಂತರ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರು ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಹುಬ್ಬಳ್ಳಿ ಗ್ರಾಮಾಂತರ


ಉದಯವಾಹಿನಿ ಚಿತ್ರ

ವಿಭಾಗದ 5 ಡಿಪೋಗಳಿಂದ 490 ಬಸ್ಸುಗಳು ಪ್ರತಿದಿನ 1.70 ಲಕ್ಷ ಕಿ.ಮೀ ಸಂಚರಿಸುತ್ತವೆ. ಮಹಿಳೆಯರು ಮಕ್ಕಳು ಹಿರಿಯ ನಾಗರಿಕರು ಸೇರಿದಂತೆ ಪ್ರತಿದಿನ 1ಲಕ್ಷದಷ್ಟು ಸ್ತ್ರೀಯರು ಹಾಗೂ 70 ಸಾವಿರ ಪುರುಷರು ಸೇರಿಮತೆ ಅಂದಾಜು 1.70ಲಕ್ಷ ಜನರು ತಮ್ಮ ನಿತ್ಯದ ಕೆಲಸ ಕಾರ್ಯಗಳಿಗಾಗಿ ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಾರೆ. ಬಸ್ಸು ಹಾಗೂ ಪ್ರಯಾಣಿಕರ ಸುರಕ್ಷತೆಯ ನಿಟ್ಟಿನಲ್ಲಿ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಿರುತ್ತದೆ ಎಂದು ಹೇಳಿದರು.

## ಆ್ಯಪ್ ಬಳಸಿ ಸೇವೆ: ಪರವಾನಗಿ ನೀಡಬೇಡಿ

• ಉದಯವಾಹಿನಿ ಬೆಳಗಾವಿ

ನಗರದಲ್ಲಿ ವಿವಿಧ ಕಂಪನಿಗಳು ಆ್ಯಪ್ ಬಳಸಿ, ಸಾರ್ವಜನಿಕರಿಗೆ ಬಾಡಿಗೆ ಆಧಾರದಲ್ಲಿ ಆಟೊರಿಕ್ಷಾ ಸೇವೆ ಒದಗಿಸಲು ತಯಾರಿ ನಡೆಸಿವೆ. ಅವುಗಳಿಗೆ ಪರವಾನಗಿ ನೀಡಬೇಡಿ' ಎಂದು ಆಗ್ರಹಿಸಿ, ಉತ್ತರ ಕರ್ನಾಟಕ ಅಟೊರಿಕ್ಷಾ ಚಾಲಕರ ಸಂಘದವರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. ಬಳಿಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರ ಶಕ್ತಿ ಯೋಜನೆ ಜಾರಿಗೊಳಿಸಿದ ನಂತರ, ನಗರದಲ್ಲಿ ಸುಮಾರು 10 ಸಾವಿರ ಆಟೊರಿಕ್ಷಾ ಚಾಲಕರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಗ್ರಾಹಕರ ಕೊರತೆ ಎದುರಿಸುತ್ತಿರುವ ಚಾಲಕರು ಬ್ಯಾಂಕಿನ ಸಾಲದ ಕಂತು ಭರಿಸಲಾಗದೆ ಒದ್ದಾಡುತ್ತಿದ್ದಾರೆ. ಈ ಮಧ್ಯೆ, ವಿವಿಧ ಖಾಸಗಿ ಕಂಪನಿಯವರು ಆ್ಯಪ್ ಬಳಸಿ ಗ್ರಾಹಕರಿಗೆ ಆಟೊರಿಕ್ಷಾ ಸೇವೆ ಒದಗಿಸಲು ಪ್ರಯತ್ನಿಸುತ್ತಿದ್ದಾರೆ. ಅವಕಾಶ ಸಿಕ್ಕರೆ ಕಂಪನಿಯವರು ಹಿಡಿತ ಸಾಧಿಸಿ ಆಟೊರಿಕ್ಷಾ ಚಾಲಕರ ಬದುಕು ಮತ್ತಷ್ಟು ಕಷ್ಟಕರವಾಗುತ್ತದೆ. ಇದಕ್ಕೆ ಆಸ್ಪದ ಕೊಡಬೇಡಿ' ಎಂದು ಆಗ್ರಹಿಸಿದರು.

## ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿ ಆಚರಣೆ

• ಉದಯವಾಹಿನಿ, ಗುಳೇದಗುಡ್ಡ

ಅದ್ವೈತ ಸಿದ್ಧಾಂತದ ಪ್ರತಿಪಾದಕರಾದ ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಪಟ್ಟಣದ ವಿಪ್ರ ಸಮಾಜದ ವತಿಯಿಂದ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆ ವಿವಿಧ ವಾದ್ಯಗಳ ಮೂಲಕ ಪಟ್ಟಣದ ಅಗ್ರಹಾರ ಮಾರುತೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಬಳಿಕ ವಾಸವಿ ಕಲ್ಯಾಣ ಮಂಟಪಕ್ಕೆ ತಲುಪಿತು. ಮೆರವಣಿಗೆಯಲ್ಲಿ ಚಿಕ್ಕಮಕ್ಕಳು ಶಂಕರಾಚಾರ್ಯರ ವೇಷಧರಿಸಿ ಗಮನಸೆಳೆದರು. ಇದಕ್ಕೂ ಮೊದಲು ಬೆಳಿಗ್ಗೆ ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜಾಕೈಂಕರ್ಯ ಜರುಗಿತು. ನಂತರ ವಾಸವಿ


ಉದಯವಾಹಿನಿ ಚಿತ್ರ

ಕಲ್ಯಾಣ ಮಂಟಪದಲ್ಲಿ ಜರುಗಿದ ಜಯಂತಿ ಕಾರ್ಯಕ್ರಮದಲ್ಲಿ ಗುರ್ಲಹೊಸುರಿನ ಪ್ರಸನ್ ಸುಂದರೇಶ ದೀಕ್ಷಿತ್ ಅವರು ಆದಿ ಶಂಕರಾಚಾರ್ಯರ ತತ್ವಸಿದ್ಧಾಂತಗಳ ಬಗ್ಗೆ ಪ್ರವಚನ ನೀಡಿದರು.

ಶ್ರೀಧರ ನರೇಗಲ್, ರಮೇಶ ಚೀಲಾಪೂರ, ರವಿ ನರೇಗಲ, ಆನಂದ ನರೇಗಲ, ಚಂದ್ರಧರ ನರೇಗಲ, ರಾಮಚಂದ್ರ ಬಾಪಟ್, ದಾಮೋದರ ಆಚಾರ್ಯ, ಚಿನ್ನಪ್ಪ ಕರಡಿ, ಮತ್ತಿತ್ತರರು ಪಾಲ್ಗೊಂಡಿದ್ದರು.

## ನಮ್ಮ ಕ್ಲಿನಿಕ್ ಆರಂಭ

• ಉದಯವಾಹಿನಿ ತರೀಕೆರೆ

ಪಟ್ಟಣದಲ್ಲಿ 2ನೇ ನಮ್ಮ ಕ್ಲಿನಿಕ್ ಆರಂಭವಾಗಿದೆ. ಇದರಿಂದ ಈ ಭಾಗದ ಜನರಿಗೆ ಸುಲಭವಾಗಿ ಆರೋಗ್ಯ ಸೌಲಭ್ಯಗಳು ಸಿಗುತ್ತಿವೆ' ಎಂದು ಶಾಸಕ ಜಿ.ಎಚ್. ಶ್ರೀನಿವಾಸ್ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ವತಿಯಿಂದ ಪಟ್ಟಣದ ಎಂ.ಜಿ. ಹಾಲ್‌ನಲ್ಲಿ ನೂತನವಾಗಿ ಆರಂಭಿಸಿರುವ ನಮ್ಮ ಕ್ಲಿನಿಕ್ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಕ್ಲಿನಿಕ್‌ನಲ್ಲಿ ಒಬ್ಬರು ತಜ್ಞ ವೈದ್ಯರು ಮತ್ತು ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಪಟ್ಟಣದಲ್ಲಿ ಈಗಾಗಲೇ 28 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ತಾಯಿ ಮಗು ಆಸ್ಪತ್ರೆಯ ಕಾಮಗಾರಿ ಶೇ 90 ರಷ್ಟು ಮುಗಿದಿದೆ. ಅತ್ಯಾಧುನಿಕ ಸೌಕರ್ಯಗಳು ದೊರಕಲಿವೆ ಎಂದರು.

ಜಿಲ್ಲಾ ಕಚೇರಿಯ ಯೋಜನಾ ನಿರ್ವಹಣಾಧಿಕಾರಿ ಡಾ. ಮಂಜುನಾಥ್ ಮಾತನಾಡಿ, ಜನರು ಸಣ್ಣ ಪುಟ್ಟ ಕಾಯಿಲೆಗಳ ಚಿಕಿತ್ಸೆಗಾಗಿ ಸಾರ್ವಜನಿಕ ಆಸ್ಪತ್ರೆಗಳಿಗೆ ಹೋಗಿ ಸಾಕಷ್ಟು ಸಮಯ ಕಾಯುವ ಪರಿಸ್ಥಿತಿಯಿತ್ತು. ಅದನ್ನು ತಪ್ಪಿಸಲು ಆರೋಗ್ಯ ಇಲಾಖೆ ಈ ಕ್ರಮ ವಹಿಸಿದೆ' ಎಂದರು.

## ಹುಲಿ ದಾಳಿಗೆ ಹಸು ಬಲಿ

• ಉದಯವಾಹಿನಿ ಮೂಡಿಗೆರೆ

ತಾಲ್ಲೂಕಿನ ಹಳೇಮೂಡಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುನ್ನಳ್ಳಿ ಗ್ರಾಮದಲ್ಲಿ ಹುಲಿ ದಾಳಿ ನಡೆಸಿ ಹಸುವನ್ನು ಕೊಂದು ಹಾಕಿದೆ. ಕುನ್ನಹಳ್ಳಿ ಗ್ರಾಮದ ಕೃಷಿಕ ಹಳೆ ಮೂಡಿಗೆರೆ ಗ್ರಾಮ ಪಂಚಾಯಿತಿ ಸದಸ್ಯ ಕೆ.ಆರ್. ಶಿವಾನಂದ ಅವರ ಭತ್ತದ ಗದ್ದೆಯಲ್ಲಿ ಸೋಮವಾರ ಹಸುವಿನ ಕಳೇಬರ ಪತ್ತೆಯಾಗಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪಶುಸಂಗೋಪನಾ ಇಲಾಖೆ ವೈದ್ಯರ ಪರಿಶೀಲಿಸಿ ಹುಲಿ ದಾಳಿಯಿಂದ ಹಸು ಮೃತಪಟ್ಟಿದೆ ಎಂದು ದೃಢಪಡಿಸಿದ್ದಾರೆ. ಸ್ಥಳದಲ್ಲಿ ಅರಣ್ಯ ಇಲಾಖೆ ವತಿಯಿಂದ ಕ್ಯಾಮೆರಾ ಅಳವಡಿಸಲಾಗಿದ್ದು, ಹುಲಿಯ ಚಲನವಲನದ ಬಗ್ಗೆ ಮಾಹಿತಿ ಕಲೆಹಾಕಲು ಪ್ರಯತ್ನಿಸಲಾಗುತ್ತಿದೆ. ಮೂಡಿಗೆರೆ ಆರ್ ಎಫ್ಒ ಕಾವ್ಯಾ, ಸಹಾಯಕ ಆರ್‌ಎಫ್ಒ ಅಶ್ವತ್, ಬೀಟ್ ಫಾರೆಸ್ಟ್ ಸುಮಂತ್, ರವಿ ಕುನ್ನಹಳ್ಳಿ ಮತ್ತಿತರರು ಇದ್ದರು.

• ವಾರ್ಡ್‌ಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿ,ಮುಂದಿನ ಸಭೆಯಲ್ಲಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು

# ಜನರಿಗೆ ಮೂಲಭೂತ ಸೌಕರ್ಯ ಒದಗಿಸುವಂತೆ ಆನಂದ ಟೈಗರ್ ತಾಕೀತು

• ಉದಯವಾಹಿನಿ, ಚಿಂಚೋಳಿ

ಪುರಸಭೆಯ 23 ವಾರ್ಡ್‌ಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು,ಚರಂಡಿ,ಕಸದ ವಾಹನ,ಬೀದಿ ದೀಪ, ಸ್ವಚ್ಛತೆ ಆದ್ಯತೆ ನೀಡಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳು ಒದಗಿಸಿಕೊಡಲು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಪುರಸಭೆ ಅಧಿಕಾರಿಗಳಿಗೆ ಸಿಬ್ಬಂದಿ ವರ್ಗದವರಿಗೆ ತಾಕೀತು ಮಾಡಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಹಮ್ಮಿಕೊಂಡ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಲ್ಯಾಂಡ್ ಆರ್ಮಿ ಇಲಾಖೆ ವತಿಯಿಂದ ಅನೇಕ ಕಟ್ಟಡಗಳು ಅರ್ಧಕ್ಕೆ ನಿಲ್ಲಿಸಲಾಗಿದೆ ಗಾಳಿ ಮಳೆಯಿಂದ ಜನರಿಗೆ ತೊಂದರೆಯಾದರೆ ಯಾರು ಹೊಣೆಗಾರರು ಇಲಾಖೆಯಿಂದ ಸಂಪೂರ್ಣ ಮಾಹಿತಿ ತರಿಸಿಕೊಳ್ಳಿ ಇಲ್ಲಾದಿದ್ದರೆ ಅವರ ಮೇಲೆ ನೋಟಿಸ್ ಜಾರಿ ಮಾಡಿ ಪ್ರಕರಣ ದಾಖಲಿಸುವಂತೆ ಸೂಚಿಸಿದರು.

ನಗರತ್ಥಾಪನಾ ಯೋಜನೆಯಲ್ಲಿ ಅನೇಕ ಕಾಮಗಾರಿಗಳು ಕ್ರೀಯಾಯೋಜನೆ ಸಿದ್ಧಪಡಿಸಲಾಗಿದೆ ಯೋಜನೆ ಯಾಕೆ ನಿಲ್ಲಿಸಲಾಗಿದೆ ಯಾಕೆ ಕಾಮಗಾರಿ ಪ್ರಾರಂಭಿಸುತ್ತಿಲ್ಲ ಎಂಬುವುದು ಮೇಲಾಧೀಕಾರಿಗಳಿಗೆ



ಉದಯವಾಹಿನಿ ಚಿತ್ರ

> **ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ನಿರ್ಮಿಸುತ್ತಿರುವ ಕಟ್ಟಡಗಳ ದಾಖಲಾತಿಗಳು ಇಲ್ಲಿಯವರೆಗೆ ಪುರಸಭೆಗೆ ಹಸ್ತಾಂತರ ಮಾಡಿರುವುದಿಲ್ಲ ಅವೆಲ್ಲವೂ ಮನೆಗಳ ಕಟ್ಟಡ ನೋಟಿಸ್ ಜಾರಿ ಮಾಡಿ ನಿಲ್ಲಿಸಿ, ಒಳಕ್ರೀಡಾಂಗಣವು ಗಾಳಿ ಉರುಳಿ ಲಕ್ಷಾಂತರ ರೂಪಾಯಿ ನಷ್ಟವಾಗಿದ್ದು ಪಕ್ಕದಲ್ಲಿ ಕಚ್ಚಾ ಮನೆಗಳಿವೆ ಯಾವುದಾದರೂ ಮನೆಗಳ ಮೇಲೆ ಬಿದ್ದು ಪ್ರಾಣಹಾನಿಯಾದರೆ ಯಾರು ಹೊಣೆಗಾರರು ಅವರು ಪುರಸಭೆಗೆ ಹಸ್ತಾಂತರ ಮಾಡಿಲ್ಲ ಕಟ್ಟಡ ನಿರ್ಮಾಣ ಹಂತದಲ್ಲಿ ಮುಖ್ಯಧಿಕಾರಿ ಜೆಇಗಳು ಮಾಹಿತಿ ಪಡೆದು ದಾಖಲಾತಿ ಪಡೆದಿಲ್ಲವೆಂದರು** -ಆನಂದ ಟೈಗರ್, ಪುರಸಭೆ ಅಧ್ಯಕ್ಷ

ಪತ್ರ ಬರೆದು ಮಾಹಿತಿ ತರಿಸಿಕೊಳ್ಳುವಂತೆ ಸೂಚಿಸಿದರು.

ಪುರಸಭೆ ಸದಸ್ಯರ ಪ್ರತಿಯೊಬ್ಬರ ಅನಿಸಿಕೆಗಳು ಪಡೆದು ಅವರು ಹೇಳಿದಂತೆ ಅವರವರ ವಾರ್ಡ್‌ಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿ,ಮುಂದಿನ ಸಭೆಯಲ್ಲಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು ಎಂದು ಹೇಳಿದರು. ಪುರಸಭೆ ಸದಸ್ಯ ಅನ್ವರ್ ಖತೀಬ್ ಮಾತನಾಡಿ

> **ಕುಡಿಯುವ ನೀರು,ಬೀದಿ ದೀಪ ಸಮಸ್ಯೆ ಯಾಕೆ ಮುಕ್ತಿ ಸಿಗುತ್ತಿಲ್ಲ ಅವರ ಬಿಲ್ಲು ಹಂತ ಹಂತವಾಗಿ ಪಾವತಿ ಸಮಸ್ಯೆ ಪರಿಸರಿಸುವಂತೆ ಹೇಳಿ,ಸಕ್ಕರೆ ಕಾರ್ಖಾನೆಯಿದೆ ಇರಲಿಬಿಡಿ ಮೊದಲು ಪಟ್ಟಣ ಅಭಿವೃದ್ಧಿ ಮಾಡುವ ದಿಸೆಯಲ್ಲಿ ವಿಚಾರಿಸಿ ಕಂಪನಿ ಟೇಕ್ಸ್ ಕಟ್ಟಿಲ್ಲ ಪರವಾನಿಗೆ ತೆಗೆದುಕೊಂಡಿಲ್ಲವೆಂಬುದು ಬಿಡಿ ಇಂದಿಲ್ಲನಾಳೆ ಟೇಕ್ಸ್ ಕಟ್ಟೆ ಕಟ್ಟುತ್ತಾರೆ**
> -ಭೀಮರಾವ ರಾಠೋಡ್, ಸದಸ್ಯ

**ಕಾರ್ಮಿಕರಿಗೆ ವೇತನ ನೀಡುವಂತೆ ಒತ್ತಾಯ**

ಅಧಿಕಾರಿಗಳಿಗೆ ಕೆಟೂಯಿಂದ ವೇತನ ಪ್ರತಿ ತಿಂಗಳ ಆಗುತ್ತದೆ ಆದರೆ ಪುರಸಭೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಯಾಕೆ ವೇತನ ನೀಡುತ್ತಿಲ್ಲಾ ಮೊದಲು ಕಾರ್ಮಿಕರಿಗೆ ವೇತನ ನೀಡುವಂತೆ ಮುಖ್ಯಾಧಿಕಾರಿಗಳಿಗೆ ಒತ್ತಾಯಿಸಿದರು.

ಎಲ್ಲಾ ಸದಸ್ಯರು ತಮ್ಮ ತಮ್ಮ ವಾರ್ಡ್‌ಗಳ ಸಮಸ್ಯೆ ಅಭಿವೃದ್ಧಿ ಪಡಿಸಲು ಸಲಹೆ ಸೂಚನೆ ನೀಡಿದರು.

ಅನ್ವರ್ ಖತೀಬ್ ಮಾತನಾಡಿ ಬುಗ್ಗಿ ಕಡೆ ಹೋಗುವ ರಸ್ತೆ ನಿರ್ಮಾಣಕ್ಕೆ 60ಲಕ್ಷ ರೂ.ಅನುದಾನ ಬಿಡುಗಡೆ ಹಾಗೂ ನದಿಯ ದಂಡೆಯ ವಾಲ್ ಫೀಲ್ಟರ್ ದುರಸ್ತಿ ಸೇರಿದಂತೆ 58ಲಕ್ಷ ರೂ.ಅನುದಾನ ಇಡಲಾಗಿದೆ ಯಾಕೆ ಕೆಲಸ ಪ್ರಾರಂಭ ಮಾಡುತ್ತಿಲ್ಲ,ಹಿಂದಿನ ಸಭೆಗಳಲ್ಲಿ ಮಾಡಿರುವ ಕ್ರೀಯಾಯೋಜನೆ ಏನಾಗಿವೆ ಕೆಲಸಗಳು ಬಯೋಮೆಟ್ರೀಕ್ ಯಾಕೆ ಮಾಡುತ್ತಿಲ್ಲವೆಂದು ಮುಖ್ಯಾಧಿಕಾರಿ ಮತ್ತು ಜೆಇಗೆ ಆಕ್ರೋಶ ಭರಿತ ಮಾತನಾಡಿ ನಾ.....ಕ ಎಂದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ, ಉಪಾಧ್ಯಕ್ಷೆ ಸುಲ್ತಾನ ಬೇಗಂ ಖಲೀಲ್ ಪಟೇಲ, ಸ್ಥಾಯಿ ಸಮಿತಿ ಅಧ್ಯಕ್ಷ ಜಗನ್ನಾಥ ಗುತ್ತೇದಾರ, ಅಬ್ದುಲ್ ಬಾಷೀದ್, ಶಬ್ಬೀರ ಅಹೇಮದ್, ಸಂತೋಷ ಮಾಳಪನೋರ, ಬಸವರಾಜ ಸಿರಸಿ, ನಾಗೇಂದ್ರಪ್ಪ, ರೂಪಕಲಾ ಕಟ್ಟಿಮನಿ, ಸುಲೋಚನಾ ಕಟ್ಟಿ, ಕವಿತಾ ಬಸವರಾಜ, ಸವಿತಾಬಾಯಿ ರಾಜು ಪವ್ವಾರ್, ಸುಶೀಲ್ ಬೋಮ್ನಳ್ಳಿ, ರಾಧಬಾಯಿ ಓಲಗೀರಿ, ಶಿವಕುಮಾರ ಪೋಚಾಲಿ, ಶಶಿ ಕಳಸ್ಕರ ಅನೇರಿದ್ದರು.

# ಮುಜುಗರಕ್ಕೀಡಾದ ಪಾಕ್ ಮೌಲ್ವಿ




• ಉದಯವಾಹಿನಿ, ಇಸ್ಲಾಮಾಬಾದ್

ಒಂದು ವೇಳೆ ಭಾರತದ ವಿರುದ್ಧ ಪಾಕಿಸ್ತಾನ ಯುದ್ಧ ಮಾಡಿದರೆ, ನೀವು ನಮ್ಮ ದೇಶದ ಪರವಾಗಿ ನಿಲ್ಲುತ್ತೀರಾ ಎಂದು ಇಸ್ಲಾಮಾಬಾದ್‌ನ ಲಾಲ್ ಮಸೀದಿಯ ವಿವಾದಾತಕ ಧರ್ಮ ಗುರು ಮೌಲಾನಾ ಅಬ್ದುಲ್ ಅಜೀಜ್ ಘಾಜಿ ಅವರು ಪ್ರೇಕ್ಷಕರನ್ನು ಕೇಳಿದಾಗ ಒಬ್ಬೇ ಒಬ್ಬರೂ ಕೂಡಾ ಕೈ ಎತ್ತದೆ ಮುಜುಗರಕ್ಕೆ ಸಿಲುಕಿಸಿರುವ ಘಟನೆ ನಡೆದಿದೆ. ಸಾಮಾಜಿಕ ಜಾಲ ತಾಣದಲ್ಲಿ ಇದು ಈಗ ಭಾರೀ ವೈರಲ್ ಆಗಿದ್ದು, ಪಾಪಿ ಪಾಕಿಸ್ತಾನಕ್ಕೆ ತನ್ನ ನೆಲದಲ್ಲೇ ಬೆಂಬಲ ಇಲ್ಲ ಎಂದು ನೆಟ್ಟಿಗರು ಕಿಚಾಯಿಸುತ್ತಿದ್ದಾರೆ. ಲಾಲ್ ಮಸೀದಿಯಲ್ಲಿ ವಿದ್ಯಾರ್ಥಿಗಳು ಮತ್ತು ಅನುಯಾಯಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ನನಗೊಂದು ಪ್ರಶ್ನೆಯಿದೆ. ಪಾಕಿಸ್ತಾನವು ಭಾರತದ ವಿರುದ್ಧ ಹೋರಾಡಿದರೆ, ನಿಮಲ್ಲಿ ಎಷ್ಟು ಮಂದಿ ಪಾಕಿಸ್ತಾನವನ್ನು ಬೆಂಬಲಿಸುತ್ತೀರಿ ಮತ್ತು ಅದಕ್ಕಾಗಿ ಹೋರಾಡುತ್ತೀರಿ? ಎಂದು ಕೇಳಿದಾಗ ಯಾರೂ ಕೂಡಾ ಕೈ ಎತ್ತದೆ ಮೌನಕ್ಕೆ ಶರಣಾಗಿದ್ದಾರೆ. ಉಗ್ರವಾದ ಮತ್ತು ರಾಜ್ಯ ಘರ್ಷಣೆಗೆ ಸಂಬಂಧಿಸಿದಂತೆ ಘಾಜಿ ಪಾಕಿಸ್ತಾನದ ಸ್ಥಾಪನೆಯನ್ನು ಟೀಕಿಸಲು ಮುಂದಾದರು, ಇಂದು ಪಾಕಿಸ್ತಾನದಲ್ಲಿ ಅಪನಂಬಿಕೆಯ ವ್ಯವಸ್ಥೆ ಇದೆ ? ಕ್ರೂರ, ಅನುಪಯುಕ್ತ ವ್ಯವಸ್ಥೆ. ಇದು ಭಾರತಕ್ಕಿಂತ ಕೆಟ್ಟದಾಗಿದೆ.ಬಲೂಚಿಸ್ತಾನ ಮತ್ತು ಖೈಬರ್ ಪಖ್ತುಂಖ್ವಾದಲ್ಲಿನ ದೌರ್ಜನ್ಯಗಳನ್ನು ಉಲ್ಲೇಖಿಸಿದ ಧರ್ಮಗುರು, ಪಾಕಿಸ್ತಾನಿ ರಾಜ್ಯವು ತನ್ನದೇ ಜನರ ಮೇಲೆ ಬಾಂಬ್ ದಾಳಿ ನಡೆಸುತ್ತಿದೆ ಎಂದು ಆರೋಪಿಸಿದರು.

ಬಲೂಚಿಸ್ತಾನದಲ್ಲಿ ಏನಾಯಿತು, ಅವರು ಪಾಕಿಸ್ತಾನದಲ್ಲಿ ಮತ್ತು ಖೈಬರ್ ಪಖ್ತುಂಖ್ವಾದಲ್ಲಿ ಏನು ಮಾಡಿದರು? ಇವುಗಳು ದೌರ್ಜನ್ಯಗಳು. ಜನರು ಸಿದ್ಧರಾದಾಗ, ರಾಜ್ಯವು ತನ್ನ ಸ್ವಂತ ನಾಗರಿಕರ ಮೇಲೆ ಬಾಂಬ್ ಸ್ಫೋಟಿಸಿತು.ಮೇ 2 ರಂದು ಜಾಮಿಯಾ ಹಫ್ಸಾ, ಲಾಲ್ ಮಸೀದಿಯಲ್ಲಿ ರೆಕಾರ್ಡ್ ಮಾಡಲಾದ ವೀಡಿಯೊ ಪಾಕಿಸ್ತಾನದ ಸಾಮಾಜಿಕ ಮಾಧ್ಯಮದಲ್ಲಿ ಆಕ್ರೋಶವನ್ನು ಹುಟ್ಟುಹಾಕಿದೆ. ಏಪ್ರಿಲ್ 22 ರಂದು ಜಮು ಮತ್ತು ಕಾಶೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಸುಮಾರು ಎರಡು ವಾರಗಳ ನಂತರ ಈ ಘಟನೆ ಸಂಭವಿಸಿದೆ, ಇದು 26 ಜೀವಗಳನ್ನು ಬಲಿ ತೆಗೆದುಕೊಂಡಿತು,ಭಾರತ-ಪಾಕಿಸ್ತಾನದ ಉದ್ವಿಗ್ನತೆಯನ್ನು ಹುಟ್ಟು ಹಾಕಿದೆ. ಇಸ್ಲಾಮಾಬಾದ್ ಸಂಭವನೀಯ ರಾಜತಾಂತ್ರಿಕ ಮತ್ತು ಮಿಲಿಟರಿ ವೈಫಲ್ಯಕ್ಕೆ ಕಟ್ಟುಬಿದ್ದಿರುವಾಗ, ಪಾಕಿಸ್ತಾನದ ಧಾರ್ಮಿಕ ಮತ್ತು ಸಾಮಾಜಿಕ ರಚನೆಯೊಳಗಿನ ಭಿನ್ನಾಭಿಪ್ರಾಯವು ಹೆಚ್ಚು ಗೋಚರಿಸುತ್ತಿದೆ.

## ಆಹಾರ ಕೊರತೆ ನೆಪ ಹೇಳಿ ಪ್ಯಾಲೆಸ್ಟೈನ್ ಜನರನ್ನು ಗಲ್ಲಿಗೇರಿಸುತ್ತಿದೆ ಹಮಾಸ್

# ಮಾನವೀಯ ನೆರವು ಸಹ ಸಮರ್ಪಕವಾಗಿ ತಲುಪುತ್ತಿಲ್ಲ

**ಜೆರುಸಲೇಂ:** ಇಸ್ರೇಲ್ ದಿಗ್ಬಂಧನದಿಂದ ತೀವ್ರ ಆಹಾರ ಬಿಕ್ಕಟ್ಟು ಎದುರಿಸುತ್ತಿರುವ ಗಾಜಾ ಪಟ್ಟಿಯಲ್ಲಿ, ಹಮಾಸ್ ಆಡಳಿತವು ಲೂಟಿ ಮಾಡಿದ ಆರೋಪದ ಮೇಲೆ ಹಲವಾರು ಪ್ಯಾಲೆಸ್ಟೈನಿಯನ್ನರನ್ನು ಗಲ್ಲಿಗೇರಿಸುತ್ತಿದೆ. ಈ ಘಟನೆಯು ಯುದ್ಧ ಪೀಡಿತ ಪ್ರದೇಶದಲ್ಲಿನ ಹತಾಶೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಹಮಾಸ್ ತೆಗೆದುಕೊಳ್ಳುತ್ತಿರುವ ಕಠಿಣ ಕ್ರಮಗಳನ್ನು ಪ್ರತಿಬಿಂಬಿಸುತ್ತದೆ. ಇಸ್ರೇಲ್, ಹಮಾಸ್ ನಡುವಿನ ಸಂಘರ್ಷ ಕಳೆದ ಅಕ್ಟೋಬರ್ 7ರಂದು ಹಮಾಸ್‌ನ ದಾಳಿಯೊಂದಿಗೆ ತೀವ್ರಗೊಂಡ ನಂತರ, ಇಸ್ರೇಲ್ ಗಾಜಾದ ಮೇಲೆ ಕಠಿಣ ದಿಗ್ಬಂಧನವನ್ನು ಹೇರಿದೆ. ಇದರಿಂದಾಗಿ ಆಹಾರ, ನೀರು, ಔಷಧಿ, ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

- ಆಹಾರ ಕೊರತೆ ಎದುರಿಸುತ್ತಿರುವ ಗಾಜಾದಲ್ಲಿ ಫುಡ್ ಪ್ಯಾಕೆಟ್ ಕದಿಯುವ ಪ್ಯಾಲೆಸ್ಟೈನಿಯನ್ನರಿಗೆ ಗಲ್ಲುಶಿಕ್ಷೆ
- ಗಾಜಾಪಟ್ಟಿಯಲ್ಲಿ ತನ್ನದೇ ಜನರನ್ನು ಗಲ್ಲುಶಿಕ್ಷೆಗೆ ಗುರಿಪಡಿಸುತ್ತಿರುವ ಹಮಾಸ್ ಉಗ್ರ ಸಂಘಟನೆ
- ಇಸ್ರೇಲ್ ದಿಗ್ಬಂಧನದ ಪರಿಣಾಮವಾಗಿ ಗಾಜಾಪಟ್ಟಿಯಲ್ಲಿ ತೀವ್ರವಾದ ಆಹಾರ ಬಿಕ್ಕಟ್ಟು, ಸಂಕಷ್ಟದಲ್ಲಿ ಪ್ಯಾಲೆಸ್ಟೈನ್ ಜನ

ಸಂಪೂರ್ಣ ಗಾಜಾ ವಶಪಡಿಸಿಕೊಳ್ಳುವ ಯೋಜನೆಗೆ ಇಸ್ರೇಲ್ ಕಾಬಿನೆಟ್ ಈಗಾಗಲೇ ಅನುಮೋದನೆ ನೀಡಿದ್ದು, ಇದು ಸಂಘರ್ಷವನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಲಕ್ಷಾಂತರ ಜನರು ಹಸಿವಿನಿಂದ ಬಳಲುತ್ತಿದ್ದು, ಮಾನವೀಯ ನೆರವು ಸಹ ಸಮರ್ಪಕವಾಗಿ ತಲುಪುತ್ತಿಲ್ಲ. ವಿಶ್ವಸಂಸ್ಥೆ ಮತ್ತು ಇತರ ಅಂತರಾಷ್ಟ್ರೀಯ ಸಂಸ್ಥೆಗಳು ಗಾಜಾದಲ್ಲಿನ ಪರಿಸ್ಥಿತಿಯನ್ನು ದುರಂತಮಯ ಎಂದು ಬಣ್ಣಿಸಿವೆ. ಗಾಜಾದಲ್ಲಿ ವಿರಳವಾಗಿ ಲಭ್ಯವಿರುವ ಆಹಾರ ಮತ್ತು ಇತರ ನೆರವಿನ ವಸ್ತುಗಳನ್ನು ಲೂಟಿ ಮಾಡಲು ಪ್ರಯತ್ನಿಸಿದ ಅಥವಾ ಲೂಟಿ ಮಾಡಿದ ವ್ಯಕ್ತಿಗಳನ್ನು ಹಮಾಸ್ ಗುರಿಯಾಗಿಸಿಕೊಂಡಿದೆ.



### ಹಮಾಸ್ ಸಿಲುಕಿರುವುದು ಸ್ಪಷ್ಟ

**ಸಾರ್ವಜನಿಕ ಸುವ್ಯವಸ್ಥೆ ಕಾಪಾಡುವ ಹೆಸರಿನಲ್ಲಿ ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಹಮಾಸ್ ಸಮರ್ಥನೆ ಕೂಡ ನೀಡಿದೆ. ಯುದ್ಧ ಮತ್ತು ದಿಗ್ಬಂಧನದ ನಡುವೆಯೂ ತಾನು ಈ ಪ್ರದೇಶದ ಮೇಲೆ ಹಿಡಿತವನ್ನು ಹೊಂದಿರುವುದಾಗಿ ತೋರಿಸಿಕೊಳ್ಳುವ ಅನಿವಾರ್ಯತೆಗೆ ಹಮಾಸ್ ಸಿಲುಕಿರುವುದು ಸ್ಪಷ್ಟ ಇದಕ್ಕಾಗಿ ಅದು ತನ್ನದೇ ಜನರನ್ನು ಕೊಲ್ಲುವ ಮಟ್ಟಿಗೆ ಇಳಿದಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ. ಶಸ್ತ್ರತ್ಯಜಿಸಿದರೆ ಗಾಜಾ ಬಿಟ್ಟು ಹೊರಹೋಗಲು ಅನುಮತಿ ನೀಡುವುದಾಗಿ ಹಮಾಸ್ ಉಗ್ರರಿಗೆ ಇಸ್ರೇಲ್ ಆಫರ್ ನೀಡಿದೆ.**

ಆಹಾರ, ಇತರ ಅಗತ್ಯ ವಸ್ತುಗಳ ತೀವ್ರ ಕೊರತೆಯಿಂದಾಗಿ, ಹತಾಶರಾಗಿರುವ ಜನ, ಕೆಲವೊಮ್ಮೆ ನೆರವು ಸಾಗಣೆ ಟ್ರಕ್‌ಗಳ ಮೇಲೆ ದಾಳಿ ಮಾಡುವುದು ಅಥವಾ ಅಂಗಡಿಗಳನ್ನು ಲೂಟಿ ಮಾಡುವಂತಹ ಕೃತ್ಯಗಳಲ್ಲಿ ತೊಡಗಿದ್ದಾರೆ. ಇಂತಹ ಅವ್ಯವಸ್ಥೆಯನ್ನು ತಡೆಯಲು ಮತ್ತು ತನ್ನ ನಿಯಂತ್ರಣವನ್ನು ಕಾಪಾಡಿಕೊಳ್ಳಲು, ಹಮಾಸ್ ಕಠಿಣ ಕ್ರಮಗಳನ್ನು ಜರುಗಿಸುತ್ತಿದೆ. ವರದಿಯೊಂದರ ಪ್ರಕಾರ, ಆಹಾರ ಲೂಟಿಯಲ್ಲಿ ಭಾಗಿಯಾದ ಆರೋಪದ ಮೇಲೆ ಕನಿಷ್ಠ ಇಬ್ಬರು ಪ್ಯಾಲೆಸ್ಟೀನಿಯನ್ನರನ್ನು ಹಮಾಸ್ ಗಲ್ಲಿಗೇರಿಸಿದೆ. ಕೆಲವು ವರದಿಗಳು ಈ ಸಂಖ್ಯೆ ಇನ್ನೂ ಹೆಚ್ಚಿರಬಹುದು ಎಂದು ಅಂದಾಜಿಸಿವೆ.

### ಅಕ್ಷರಶಃ ನರಕ ದರ್ಶನ

**ಹಮಾಸ್ ಗಾಜಾದ ಜನರಿಗೆ ಅಕ್ಷರಶಃ ನರಕ ದರ್ಶನ ಮಾಡಿಸುತ್ತಿದೆ. ಆಹಾರದ ಕೊರತೆ ನೆಪ ಹೇಳಿ ಸ್ವಂತ ಜನರನ್ನು ಕೊಲ್ಲುತ್ತಿರುವ ಹಮಾಸ್, ಗಾಜಾ ಜನರ ಪಾಲಿಗೆ ಯಮಸ್ವರೂಪಿಯಾಗಿ ಬದಲಾಗಿದೆ. ವಿಚಾರಣೆಯಿಲ್ಲದೆ ಅಥವಾ ನ್ಯಾಯಯುತವಲ್ಲದ ವಿಚಾರಣೆಯ ಮೂಲಕ, ಅಮಾಯಕ ನಾಗರಿಕರಿಗೆ ಮರಣದಂಡನೆ ವಿಧಿಸುವುದು ಅಂತರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನುಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ.**

**ಗಾಜಾ ಎಂಬ ನರಕ ನಗರಿ**

ನೇರ ಸಾಕ್ಷಿಗಳ ಹೇಳಿಕೆಗಳನ್ನು ಆಧರಿಸಿ ಪತ್ರಕರ್ತರು ಈ ಘೋರ ಘಟನೆಗಳನ್ನು ಖಚಿತಪಡಿಸಿದ್ದಾರೆ. ಆದರೆ ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ಹಮಾಸ್, ತನ್ನದೇ ಜನರನ್ನು ನಿರ್ದಯವಾಗಿ ಕೊಲ್ಲುತ್ತಿದೆ. ಆಹಾರಕ್ಕಾಗಿ ಹೆಚ್ಚುತ್ತಿರುವ ಹತಾಶೆಯು ವ್ಯಾಪಕ ಅರಾಜಕತೆಗೆ ಕಾರಣ ವಾಗುವುದನ್ನು ತಡೆಯುವುದು, ಸೀಮಿತವಾಗಿ ಲಭ್ಯವಿರುವ ನೆರವಿನ ವಿತರಣೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವುದು ಹಮಾಸ್‌ನ ಉದ್ದೇಶ ಎಂಬುದು ಸ್ಪಷ್ಟವಾಗಿದೆ. ಗಾಜಾದಲ್ಲಿನ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಶಾಶ್ವತ ಕದನ ವಿರಾಮ, ಅಡೆತಡೆಯಿಲ್ಲದ ಮಾನವೀಯ ನೆರವಿನ ಪೂರೈಕೆ ಮತ್ತು ರಾಜಕೀಯ ಪರಿಹಾರಕ್ಕಾಗಿ ಅಂತಾರಾಷ್ಟ್ರೀಯ ಸಮುದಾಯದ ಒತ್ತಡ ಹೆಚ್ಚಾಗಬೇಕಿದೆ.

ಜಾಗತಿಕ ವೇದಿಕೆ ಈ ನಿಟ್ಟಿನಲ್ಲಿ ಶೀಘ್ರವೇ ಕಾರ್ಯೋನ್ಮುಖವಾಗಬೇಕಿದೆ. ಇಲ್ಲದಿದ್ದರೆ, ಇಂತಹ ಹತಾಶ ಘಟನೆಗಳು, ಮಾನವೀಯ ದುರಂತಗಳು ಮುಂದುವರಿಯುವ ಅಪಾಯವಿದೆ. ಗಾಜಾದ ಜನರು ತಮ್ಮ ಮೂಲಭೂತ ಅಗತ್ಯಗಳಿಗಾಗಿ ಹೋರಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ನಿಜಕ್ಕೂ ಘೋರ ದುರಂತವೇ ಸರಿ. ಗಾಜಾ ಜನ ಈಗಾಗಲೇ ಹಮಾಸ್ ವಿರುದ್ಧ ಪ್ರತಿಭಟನೆ ನಡೆಸಿರುವುದು ಇಲ್ಲಿ ಉಲ್ಲೇಖನೀಯ.



## ಮಿನಿ ನ್ಯೂಸ್

### ಭಾರತದ ಉಗ್ರ ದಮನ ಕಾರ್ಯಕ್ಕೆ ಅಮೆರಿಕ ಬೆಂಬಲ

**ನವದೆಹಲಿ:** ಭಯೋತ್ಪಾದನೆಯ ವಿರುದ್ಧದ ಭಾರತದ ಹೋರಾಟಕ್ಕೆ ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ಸ್ಪೀಕರ್ ಮೈಕ್ ಜಾನ್ಸನ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಭಯೋತ್ಪಾದನೆ ವಿರುದ್ಧ ಹೋರಾಡುವ ಭಾರತದ ಪ್ರಯತ್ನಕ್ಕೆ ಸಹಾಯ ಮಾಡಲು ಯುಎಸ್ ಅಗತ್ಯ ಶಕ್ತಿ, ಸಂಪನ್ಮೂಲಗಳನ್ನು ಒದಗಿಸುತ್ತದೆ ಎಂದು ಅವರು ತಿಳಿಸಿದ್ದಾರೆ. ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತವು ಪಾಕಿಸ್ತಾನದ ವಿರುದ್ಧ ಕ್ರಮಗಳನ್ನು ಬಿಗಿಗೊಳಿಸುತ್ತಿ ರುವ ಸಂದರ್ಭದಲ್ಲಿ ಅವರ ಹೇಳಿಕೆ ಬಂದಿದೆ.

ಭಾರತ ಭಯೋತ್ಪಾದನೆ ವಿರುದ್ಧ ನಿಲ್ಲಬೇಕು. ಆ ಪ್ರಯತ್ನಗಳನ್ನು ಬೆಂಬಲಿಸಲು ನಾವು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತೇವೆ. ಟ್ರಂಪ್ ಆಡಳಿತವು ಭಯೋತ್ಪಾದನೆಯ ವಿರುದ್ಧ ಹೋರಾಡಲು ಭಾರತಕ್ಕೆ ಇಂಧನ ಮತ್ತು ಸಂಪನ್ಮೂಲಗಳೊಂದಿಗೆ ಸಹಾಯ ಮಾಡುತ್ತದೆ ಎಂದು ಜಾನ್ಸನ್ ಪ್ರತಿಪಾದಿಸಿದ್ದಾರೆ.

### ಅಮೆರಿಕಾದಲ್ಲಿ ದೋಣಿ ಮಗುಚಿ ನೀರುಪಾಲಾದ ಭಾರತೀಯ ಮಕ್ಕಳು

**ಕ್ಯಾಲಿಫೋರ್ನಿಯಾ:** ಸ್ಯಾನ್ ಡಿಯಾಗೋ ಕರಾವಳಿಯಲ್ಲಿ ಭಾರತೀಯರು ಸೇರಿದಂತೆ ವಲಸಿಗರನ್ನು ಕರೆದೊಯ್ಯುತ್ತಿದ್ದ ಸಣ್ಣ ದೋಣಿ ಮಗುಚಿ ಮೂವರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಇದಲ್ಲದೆ, ಅಪಘಾತದಲ್ಲಿ ನಾಲ್ಕು ಜನರು ಗಾಯಗೊಂಡಿದ್ದಾರೆ. ವಿನಾ ಶಕಾರಿ ಘಟನೆಯಲ್ಲಿ ಭಾರತೀಯ ಕುಟುಂಬವೂ ಬಾಧಿತವಾಗಿದೆ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಪೋಸ್ಟ್‌ನಲ್ಲಿ, ಇಬ್ಬರು ಭಾರತೀಯ ಮಕ್ಕಳು ಕಾಣೆಯಾಗಿದ್ದಾರೆ ಮತ್ತು ಅವರ ಪೋಷಕರು ಲಾ ಜೊಲ್ಲಾದ ಸ್ಕಿಪ್ಸ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಯುಎಸ್ ಕೋಸ್ಟ್ ಗಾರ್ಡ್ ಪ್ರಕಾರ, ನಾಲ್ಕು ಜನರನ್ನು ರಕ್ಷಿಸಲಾಗಿದ್ದು, ಏಳು ಜನರು ಇನ್ನೂ ಕಾಣೆಯಾಗಿದ್ದಾರೆ. ವಶಕ್ಕೆ ಪಡೆದ ಇಬ್ಬರನ್ನು ಮಾನಸ ಕಳ್ಳಸಾಗಣೆದಾರರು ಎಂದು ಶಂಕಿಸಲಾಗಿದೆ ಎಂದು ಕೋಸ್ಟ್ ಗಾರ್ಡ್ ವಕ್ತಾರ ಹಂಟರ್ ಶಾಬೆಲ್ ರಾಯಿಟರ್ಸ್‌ಗೆ ತಿಳಿಸಿದ್ದಾರೆ.

### ಕೇಂದ್ರ ಸರ್ಕಾರದ ನಿರ್ಧಾರದ ಪರ ಇಡೀ ದೇಶ ನಿಲ್ಲಲಿದೆ; ಮಾಜಿ ಸಿಎಂ

**ಜೈಪುರ:** ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಇಡೀ ದೇಶವು ಸರ್ಕಾರದ ಪರವಾಗಿ ನಿಂತಿದೆ ಎಂದು ರಾಜಸ್ಥಾನದ ಮಾಜಿ ಸಿಎಂ ಅಶೋಕ್ ಗೆಹ್ಲೋಟ್ ಹೇಳಿದ್ದಾರೆ. ದಕ್ಷಿಣ ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಜನರ ಸಾವಿಗೆ ಕಾರಣವಾದ ಭಯೋತ್ಪಾದಕ ದಾಳಿಯ ನಂತರ ತೆಗೆದುಕೊಳ್ಳಬೇಕಾದ ನಿರ್ಧಾರಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರಬೇಕು ಎಂದು ಹಿರಿಯ ಕಾಂಗ್ರೆಸ್ ನಾಯಕ ಹೇಳಿದರು. ಆದಾಗ್ಯೂ, ಏ. 22ರ ಭಯೋತ್ಪಾದಕ ದಾಳಿ ನಡೆದು 13 ದಿನಗಳು ಕಳೆದಿವೆ, ಜನರು ಇನ್ನೂ ಸರ್ಕಾರದಿಂದ ಉತ್ತರಗಳನ್ನು ಹುಡುಕುತ್ತಿದ್ದಾರೆ ಎಂದು ಅವರು ಹೇಳಿದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಗ್ಗೆ ಕೇಳಿದಾಗ, ಗೆಹ್ಲೋಟ್ ನಾನು ಅದರ ಬಗ್ಗೆ ಪ್ರತಿಕ್ರಿಯಿಸಲು ಸಾಧ್ಯವಿಲ್ಲ ಏಕೆಂದರೆ ನಾವು ಸರ್ಕಾರದೊಂದಿಗೆ ಇದ್ದೇವೆ ಎಂದು ಪ್ರತಿಪಕ್ಷಗಳು ಹೇಳಿವೆ. ಆದ್ದರಿಂದ ಯಾರೂ ಈ ಬಗ್ಗೆ ಪ್ರತಿಕ್ರಿಯಿಸಬಾರದು ಎಂದು ನಾನು ನಂಬುತ್ತೇನೆ ಎಂದು ಹೇಳಿದರು. ಸರ್ಕಾರವು ಯೋಚಿಸಿದ ನಂತರ ನಿರ್ಧಾರ ಗಳನ್ನು ತೆಗೆದು ಕೊಳ್ಳಬೇಕಾಗುತ್ತದೆ ಎಂದು ಅವರು ಹೇಳಿದರು. ಇಂತಹ ನಿರ್ಧಾರಗಳನ್ನು ಅವಸರದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ, ಅಂತಹ ನಿರ್ಧಾರಗಳನ್ನು ಅತಿಯಾದ ಉತ್ಸಾಹ ಅಥವಾ ಅತಿಯಾದ ಪ್ರತಿಕ್ರಿಯೆಯಲ್ಲಿ ತೆಗೆದುಕೊಳ್ಳಲಾಗುವುದಿಲ್ಲ ಎಂದು ಅವರು ಇದೇ ಸಂದರ್ಭದಲ್ಲಿ ವಿವರಿಸಿದರು.

### ಪಾಪಿಸ್ತಾನಕ್ಕೆ ಕಂತ್ರಿ ಬುದ್ಧಿಯ ಚೀನಾ ಬೆಂಬಲ

**ಇಸ್ಲಾಮಾಬಾದ್:** ಭಾರತಕ್ಕೆ ಮಿತ್ರ ರಾಷ್ಟ್ರ ರಷ್ಯಾ ಬೆಂಬಲ ವ್ಯಕ್ತಪಡಿಸಿರುವ ಬೆನ್ನಲ್ಲೆ ಚೀನಾ ಪಾಕಿಸ್ತಾನಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದೆ. ಪಹಲ್ಗಾಮ್‌ನಲ್ಲಿ ನಡೆದ ಹಿಂದೂಗಳ ನರಮೇಧದ ಬಳಿಕ ಭಾರತ, ಪಾಕಿಸ್ತಾನದ ನಡುವಿನ ಸಂಬಂಧ ಬಿಗಡಾಯಿಸುವ ಪರಿಸ್ಥಿತಿ ಉಂಟಾಗಿದೆ. ಒಂದು ಕಡೆ ಭಾರತಕ್ಕೆ ರಷ್ಯಾ, ಜಪಾನ್ ಬೆಂಬಲಿ ನೀಡಿದರೆ, ಇನ್ನೊಂದು ಕಡೆ ನೆರೆ ರಾಷ್ಟ್ರ ಚೀನಾ ಪಾಕ್‌ಗೆ ಬೆಂಬಲ ನೀಡುವುದಾಗಿ ಹೇಳಿದೆ. ದಕ್ಷಿಣ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ನಾವು ಸದಾ ಪಾಕಿಸ್ತಾನ ಬೆಂಬಲಿಸುತ್ತೇವೆ ಎಂದು ಚೀನಾ ಹೇಳಿಕೊಂಡಿದೆ ಎಂದು ಪಾಕ್ ಮಾಧ್ಯಮಗಳು ಬರೆದುಕೊಂಡಿವೆ.

ಪಾಕ್ ಅಧ್ಯಕ್ಷ ಅಲಿ ಜರ್ದಾರಿ ಅವರನ್ನು ಪಾಕಿಸ್ತಾನದಲ್ಲಿನ ಚೀನಾ ರಾಯಭಾರಿ ಜಿಯಾಂಗ್ ಜೈಡಾಂಗ್ ಭೇಟಿಯಾಗಿ ಮಾತುಕತೆ ನಡೆಸಿದರು. ಈ ವೇಳೆ ಚೀನಾ, ಪಾಕಿಸ್ತಾನದ ಸ್ನೇಹ ಶಾಶ್ವತವಾಗಿದೆ. ಕಾಲ ಕಾಲಕ್ಕೆ ಪರೀಕ್ಷೆಗೆ ಒಳಗಾಗಿದ್ದರೂ ಯಾವಾಗಲೂ ಸವಾಲಿನ ಸಮಯದಲ್ಲಿ ಪರಸ್ಪರ ಬೆಂಬಲಿಸಿದ ಸ್ನೇಹ ನಮ್ಮದಾಗಿದೆ. ಹೀಗಾಗಿ ದಕ್ಷಿಣ ಏಷ್ಯಾ ಶಾಂತಿಗಾಗಿ ಪಾಕ್‌ಗೆ ನಮ್ಮ ಬೆಂಬಲವಿದೆ ಎಂದಿದ್ದಾರೆ ಎಂದು ಜರ್ದಾರಿ ತಿಳಿಸಿದ್ದಾರೆ. ಪಾಕ್ ಬೆಂಬಲಿಸುವುದಾಗಿ ತಿಳಿಸಿ ಮಾತನಾಡಿದ ಜರ್ದಾರಿ, ಭಾರತವು ಬೇಜಾವಾಬ್ದಾರಿ, ಆಕ್ರಮಣಕಾರಿ ನಡೆಯನ್ನು ಅನುಸರಿಸುತ್ತಿದೆ ಎಂದು ಕಿಡಿಕಾರಿದ್ದಾರೆ.

### ಕಾಶ್ಮೀರದ ಬುಡ್ಗಾಮ್ ಜಿಲ್ಲೆಯಲ್ಲಿ ಇಬ್ಬರು ಉಗ್ರ ಸಹಚರರ ಸೆರೆ

**ಬುಡ್ಗಾಮ್:** ಜಮ್ಮು, ಕಾಶ್ಮೀರದ ಬುಡ್ಗಾಮ್ ಜಿಲ್ಲೆಯಲ್ಲಿ ನಡೆದ ನಾಕಾ-ತಪಾಸಣಾ ಕಾರ್ಯಾಚರಣೆಯ ಸಂದರ್ಭದಲ್ಲಿ ಭದ್ರತಾ ಪಡೆಗಳು ಇಬ್ಬರು ಭಯೋತ್ಪಾದಕ ಸಹಚರರನ್ನು ಬಂಧಿಸಿದ್ದು, ಭಾರಿ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ಗ್ರೆನೇಡ್‌ಗಳನ್ನು ವಶಪಡಿಸಿಕೊಂಡಿವೆ. ಬುಡ್ಗಾಮ್‌ನ ಮಾಗಮ್‌ನ ಬುಚಿಪೋರಾ ಕವೂಸಾ ಅರೇಸ್‌ನಲ್ಲಿ ನಾಕಾ ತಪಾಸಣೆ ಕಾರ್ಯಾಚರಣೆಯ ಸಂದರ್ಭದಲ್ಲಿ ಈ ಘಟನೆ ಸಂಭವಿಸಿದೆ. ಬಂಧಿತರಿಂದ ಒಂದು ಪಿಸ್ತೂಲ್, ಒಂದು ಗ್ರೆನೇಡ್, 15 ಸಜೀವ ಗುಂಡುಗಳು ಸೇರಿದಂತೆ ಹೆಚ್ಚಿನ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪೊಲೀಸರು ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ.ಏ. 22 ರಂದು ಜಮ್ಮು, ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 26 ಜನರು ಸಾವನ್ನಪ್ಪಿದ ನಂತರ, ಕೇಂದ್ರಾಡಳಿತ ಪ್ರದೇಶದ ಭದ್ರತಾ ಪಡೆಗಳು ಭದ್ರತೆಯನ್ನು ಹೆಚ್ಚಿಸಿವೆ ಮತ್ತು ಪ್ರದೇಶದಾದ್ಯಂತ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯನ್ನು ತೀವ್ರಗೊಳಿಸಿವೆ.

# ಅಣು ಬಾಂಬ್ ಬೆದರಿಕೆ ಹಾಕಿದ ಪಾಕಿಸ್ತಾನಕ್ಕೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಖಂಡನೆ

**ನವದೆಹಲಿ:** ಪಹಲ್ಲಾಮ್ ಭಯೋತ್ಪಾದಕ ದಾಳಿಯ ನಂತರ ಭಾರತದೊಂದಿಗಿನ ಉದ್ವಿಗ್ನತೆಯ ಮಧ್ಯೆ ಕಳೆದ ರಾತ್ರಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಚ್ಚಿದ ಬಾಗಿಲಿನ ಸಮಾಲೋಚನೆಯಲ್ಲಿ ಪಾಕಿಸ್ತಾನವು ಕಠಿಣ ಪ್ರಶ್ನೆಗಳನ್ನು ಎದುರಿಸಿದೆ ಎಂದು ಮೂಲಗಳು ತಿಳಿಸಿವೆ. ಕಳೆದ ತಿಂಗಳು 25 ಪ್ರವಾಸಿಗರು ಮತ್ತು ಕಾಶ್ಮೀರಿ ಕುದುರೆ ಸವಾರಿ ಆಪರೇಟರ್ ಅನ್ನು ಭಯೋತ್ಪಾದಕರು ಕೊಂದ ಪಹಲ್ಲಾಮ್ ದಾಳಿಯಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಲಷ್ಕರ್-ಎ-ತೈಬಾ ಭಾಗಿಯಾಗಿರುವ ಬಗ್ಗೆ ಯುಎಎನ್‌ಎಸ್ಸಿ ಸದಸ್ಯರು ಇಸ್ಲಾಮಾಬಾದ್ ಅನ್ನು ಪ್ರಶ್ನಿಸಿದ್ದಾರೆ.

ಜಾಗತಿಕ ಭದ್ರತಾ ಸಂಸ್ಥೆಯ ಸದಸ್ಯರು ಪಾಕಿಸ್ತಾನದ ಪರಮಾಣು ವಾಕ್ಚಾತುರ್ಯವನ್ನು ಉಲ್ಬಣಗೊಳಿಸುವ ಅಂಶವೆಂದು ಗುರುತಿಸುವುದರೊಂದಿಗೆ ಪರಿಸ್ಥಿತಿಯನ್ನು ಅಂತರರಾಷ್ಟ್ರೀಯಗೊಳಿಸುವ ಇಸ್ಲಾಮಾಬಾದ್‌ನ ಪ್ರಯತ್ನಗಳು ವಿಫಲವಾಗಿವೆ ಎಂದು ವರದಿಗಳು ತಿಳಿಸಿವೆ.

ಪಾಕಿಸ್ತಾನದ ಇತ್ತೀಚಿನ ಕ್ಷಿಪಣಿ ಪರೀಕ್ಷೆಗಳ ಬಗ್ಗೆ ಯುಎನ್‌ಎಸ್ಸಿ ಸದಸ್ಯರು ಕಳವಳ ವ್ಯಕ್ತಪಡಿಸಿದರು. ಮಂಡಳಿಯ 10 ಖಾಯಂ ಅಲ್ಲದ ಸದಸ್ಯರಲ್ಲಿ ಒಂದಾದ ಪಾಕಿಸ್ತಾನವು ಭಾರತದೊಂದಿಗಿನ ಉದ್ವಿಗ್ನತೆಯನ್ನು ಗಮನದಲ್ಲಿಟ್ಟುಕೊಂಡು ಮುಚ್ಚಿದ ಸಮಾಲೋಚನೆಗಳನ್ನು ಕೋರಿತ್ತು.



ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಮಾತುಕತೆಯಲ್ಲಿ, ಯುಎನ್ ಎಸ್ಸಿ ಸದಸ್ಯರು ಭಯೋತ್ಪಾದಕ ದಾಳಿ ಯನ್ನು ಖಂಡಿಸಿದರು, ಅದರ ಅಗತ್ಯವನ್ನು ಎತ್ತಿ ತೋರಿಸಿದರು ಎಂದು ವರದಿಯಾಗಿದೆ. ಎಲ್ಲಾ ಸದಸ್ಯರು ಭಯೋತ್ಪಾದಕ ದಾಳಿಯನ್ನು ಖಂಡಿಸಿ ದರು ಮತ್ತು ಉತ್ತರದಾಯಿತ್ವದ ಅಗತ್ಯವನ್ನು ಎತ್ತಿ ತೋರಿಸಿದರು.

ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಅವರ ಧರ್ಮದ ಆಧಾರದ ಮೇಲೆ ಗುರಿಯಾಗಿಸಲಾಗಿದೆ ಎಂದು ಅವರು ಪ್ರಸ್ತಾಪಿಸಿದರು ಎಂದು ವರದಿ ತಿಳಿಸಿದೆ. ಸಿಂಧೂ ಜಲ ಒಪ್ಪಂದವನ್ನು ಭಾರತ ಅಮಾನತುಗೊಳಿಸಿರುವುದು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ ಎಂದು ಅವರು ಹೇಳಿದರು. ಭದ್ರತಾ ಮಂಡಳಿ ಅಥವಾ ಭಾರತ ಇನ್ನೂ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಸಭೆಯಿಂದ ಹೊರಬಂದ ನಂತರ ಪರಿಸ್ಥಿತಿಯನ್ನು ಅಸ್ಥಿರ ಎಂದು ಕರೆದ ಟ್ಯುನೀಷಿಯನ್ ರಾಜತಾಂತ್ರಿಕ ಖಾಲಿದ್ ಮೊಹಮ್ಮದ್ ಖಿಯಾರಿ, ಮಾತುಕತೆ ಮತ್ತು ಸಂಘರ್ಷದ ಶಾಂತಿಯುತ ಪರಿಹಾರಕ್ಕೆ ಕರೆ ನೀಡಲಾಗಿದೆ ಎಂದು ಹೇಳಿದರು. ಮೇ ತಿಂಗಳ ಭದ್ರತಾ ಮಂಡಳಿಯ ಅಧ್ಯಕ್ಷರಾಗಿರುವ ಗ್ರೀಕ್ ರಾಯಭಾರಿ ಇವಾಂಜೆಲೋಸ್ ಸೆಕೆರಿಸ್ ಈ ಸಭೆಯನ್ನು ಫಲಪ್ರದ ಎಂದು ಕರೆದಿದ್ದಾರೆ.

> **ಪಹಲ್ಗಾಮ್ ಬಗ್ಗೆ ಪಾಕಿಸ್ತಾನದ ಸುಳ್ಳು ಧ್ವಜ ನಿರೂಪಣೆಯನ್ನು ಸ್ವೀಕರಿಸಲು ಅವರು ನಿರಾಕರಿಸಿದರು, ಭಾರತದೊಂದಿಗಿನ ತನ್ನ ಸಮಸ್ಯೆಗಳನ್ನು ದ್ವಿಪಕ್ಷೀಯವಾಗಿ ಪರಿಹರಿಸಿಕೊಳ್ಳುವಂತೆ ಕೇಳಿಕೊಂಡರು. ಯುಎನ್‌ಎಸ್ಸಿ ಮಾತುಕತೆಯ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಪಾಕಿಸ್ತಾನದ ರಾಯಭಾರಿ ಅಸಿಮ್ ಇಫಿಕರ್ ಅವರು, ಪಹಲ್ಲಾಮ್ ದಾಳಿಯಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಗಳನ್ನು ತಮ್ಮ ದೇಶ ತಿರಸ್ಕರಿಸಿದೆ ಎಂದು ಹೇಳಿದರು.**

# ರಾಹುಲ್ ಗಾಂಧಿಯಿಂದ ಹುತಾತ್ಮ ನೌಕಾಪಡೆ ಅಧಿಕಾರಿ ನರ್ವಾಲ್ ಕುಟುಂಬ ಭೇಟಿ

**ಚಂಡೀಗಢ:** ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ನೌಕಾಪಡೆಯ ಅಧಿಕಾರಿ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಕುಟುಂಬ ಸದಸ್ಯರನ್ನು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಂಗಳವಾರ ಭೇಟಿ ಮಾಡಿದರು. ರಾಹುಲ್ ಗಾಂಧಿ ಅವರು ಮಂಗಳವಾರಮಧ್ಯಾಹ್ನ ಹರಿಯಾಣದ ಕರ್ನಾಲ್‌ನಲ್ಲಿರುವ ನರ್ವಾಲ್ ಅವರ ನಿವಾಸಕ್ಕೆ ಭೇಟಿ ನೀಡಿ ಸಂತಾಪ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ರಾಹುಲ್ ಅವರೊಂದಿಗೆ ಹರಿಯಾಣ ಕಾಂಗ್ರೆಸ್ ಅಧ್ಯಕ್ಷ ಉದಯ್ ಭನ್, ರೋಹ್ಟಕ್ ಸಂಸದ ದೀಪೇಂದರ್ ಸಿಂಗ್ ಹೂಡಾ, ಶಾಸಕ ಮಂಗಳವಾರ ರಾಜ್ ನರ್ವಾಲ್, ಯುವ ಕಾಂಗ್ರೆಸ್ ಅಧ್ಯಕ್ಷ ದಿವ್ಯಾಂಶು ಬುಧಿರಾಜ, ಭೂಪಿಂದರ್ ಲಾಥರ್, ಇತರ ನಾಯಕರು ಇದ್ದರು. ರಾಹುಲ್ ಗಾಂಧಿ ಮೊದಲು ನರ್ವಾಲ್ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಹೆಚ್ಚಿನ ಸಮಯವನ್ನು ಅವರ ಕುಟುಂಬದೊಂದಿಗೆ ಖಾಸಗಿಯಾಗಿ ಕಳೆದರು ಎಂದು ದೀಪೇಂದರ್ ಸಿಂಗ್ ಹೂಡಾ ಹೇಳಿದ್ದಾರೆ. ಏತನ್ಮಧ್ಯೆ, ಮೇ 4ರಂದು ಕರ್ನಾಲ್‌ನಲ್ಲಿ ನೌಕಾ ಅಧಿಕಾರಿಯ ಸ್ಮರಣಾರ್ಥ ಪ್ರಾರ್ಥನಾ ಸಭೆ ನಡೆಸಲಾಯಿತು.



> **ಈ ಸಭೆಯಲ್ಲಿ ಹರಿಯಾಣ ಸಿಎಂ ನಯಾಬ್ ಸಿಂಗ್ ಸೈನಿ ಅವರ ಪತ್ನಿ ಸುಮನ್ ಸೈನಿ ಭಾಗವಹಿಸಿದ್ದರು. ತೀವ್ರ ದುಃಖದ ದಿನ, ಕುಟುಂಬವು ತಮ್ಮ ಪ್ರೀತಿಯ ಮಗನನ್ನು ಕಳೆದುಕೊಂಡಿದೆ ಮತ್ತು ಅವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ ಎಂದರು.**

ಇದಕ್ಕು ಮುನ್ನ ಸಿಎಂ ಸೈನಿ ಅವರು, ನರ್ವಾಲ್ ಕುಟುಂಬದ ಸದಸ್ಯರಿಗೆ 50 ಲಕ್ಷ ರೂಪಾಯಿಗಳ ಆರ್ಥಿಕ ನೆರವು ಮತ್ತು ಸರ್ಕಾರಿ ಉದ್ಯೋಗ ನೀಡುವುದಾಗಿ ಘೋಷಿಸಿದ್ದರು.

# ವಿದೇಶಿ ಚಲನಚಿತ್ರಗಳ ಮೇಲೂ ಶೇ.10ರಷ್ಟು ಸುಂಕ

**ಪ್ಯಾರಿಸ್:** ಈಗಾಗಲೇ ವಿವಿಧ ದೇಶಗಳ ಮೇಲೆ ತೆರಿಗೆ ಭಾರ ಹೆಚ್ಚಿಸಿ ವಿವಿಧ ದೇಶಗಳ ಮೇಲೆ ವ್ಯಾಪಾರ ಯುದ್ಧ ಘೋಷಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇದೀಗ ಸಿನಿಮಾಗಳ ಮೇಲೆ ತಮ್ಮ ಕಣ್ಣು ಹಾಕಿದ್ದು ವಿದೇಶಿ ಚಲನಚಿತ್ರಗಳ ಮೇಲೆ ಶೇ.100 ರಷ್ಟು ಸುಂಕ ಘೋಷಿಸಿದ್ದಾರೆ. ಇದರಿಂದ ಸಿನಿಮಾ ಉದ್ಯಮ ತತ್ತರಿಸಿದೆ, ಅಂತರರಾಷ್ಟ್ರೀಯ ಸಿನಿಮಾಗಳ ನಿರ್ಮಾಣಗಳ ಭವಿಷ್ಯದ ಬಗ್ಗೆ ಅನಿಶ್ಚಿತತೆ ಉಂಟುಮಾಡಿದೆ. ವಿದೇಶಗಳಲ್ಲಿ ನಿರ್ಮಾಣವಾಗಿ ಅಮೇರಿಕಾದಲ್ಲಿ ಪ್ರದರ್ಶನ ಕಾಣುವ ಚಿತ್ರಗಳ ಮೇಲೆ ಶೇಕಡಾ 100ರಷ್ಟು ತೆರಿಗೆ ವಿಧಿಸುವುದಾಗಿ ಘೋಷಿಸಿದ್ದಾರೆ. ಇದರಿಂದ ಜಗತ್ತಿನ ವಿವಿಧ ದೇಶಗಳ ಚಿತ್ರಗಳ ಮೇಲೆ ತೀವ್ರ ಪರಿಣಾಮ ಬೀರಿದ್ದು ಸಂಕಷ್ಟ ಎದುರಿಸುವಂತಾಗಿದೆ. ಡೊನಾಲ್ಡ್ ಟ್ರಂಪ್ ಅವರ ನಿರ್ಧಾರದಿಂದಾಗಿ



ಈಗಾಗಲೇ ಜಗತ್ತಿನ ವಿವಿಧ ದೇಶಗಳು ಅತ್ಯಧಿಕ ಸುಂಕದಿಂದ ತತ್ತರಿಸಿವೆ. ಈ ನಡುವೆ ಸಿನಿಮಾಗಳ ಮೇಲೂ ತೆರಿಗೆ ವಿಧಿಸಿರುವುದು ಚಿತ್ರ ನಿರ್ಮಾಪಕರನ್ನು ಮತ್ತಷ್ಟು ಸಂಕಷ್ಟ ಚಿಂತೆಗೆ ದೂಡಿದೆ.

ಈ ವರ್ಷದ ಆರಂಭದಲ್ಲಿ, ಡೊನಾಲ್ಡ್ ಟ್ರಂಪ್ ಅವರು ಹಿರಿಯ ಹಾಲಿವುಡ್ ತಾರೆಗಳಾದ ಸಿಲ್ವೆಸ್ಟರ್ ಸ್ಟಲ್ಲೋನ್, ಮೆಲ್ ಗಿಬ್ಸನ್, ಜಾನ್ ವಾಯ್ಟ್ ಅವರನ್ನು ಟಿನ್ಸೆಲ್‌ಟೌನ್ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಚಲನಚಿತ್ರ ಸುಂಕಗಳ ಕುರಿ ತಾದ ವಿವರಗಳು ಇನ್ನೂ ಸ್ಪಷ್ಟವಾಗಿಲ್ಲವಾದರೂ, ಅವು ಇನ್ನೂ ಆತಂಕವನ್ನುಂಟುಮಾಡಿವೆ ಮತ್ತು ಅನಿಶ್ಚಿತತೆಯನ್ನು ಹೆಚ್ಚಿಸಿವೆ ಎಂದು ವಿಶ್ವದ ನಾನಾ ದೇಶಗಳ ಚಿತ್ರ ನಿರ್ಮಾಪಕರು ತಿಳಿಸಿದ್ದಾರೆ. ನಿರ್ಮಾಪಕರು ಮತ್ತು ವಿತರಕರು ಎದುರಿಸುತ್ತಿರುವ ಸಂದಿಗ್ಧತೆ ಏನೆಂದರೆ ಇನ್ನು ಮುಂದೆ ಬೇರೆ ಯಾವುದೇ ಭಾಗದಲ್ಲಿ ಚಿತ್ರೀಕರಣ ಮಾಡಿ ಅಮೇರಿಕಾದಲ್ಲಿ ಪ್ರದರ್ಶನಗೊಳ್ಳುವ ಚಿತ್ರಗಳ ಮೇಲೆ ಅತ್ಯಧಿಕ ಸುಂಕ ವಿಧಿಸಲು ನಿರ್ಧರಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಈ ನಿರ್ಧಾರ ಅಂತರರಾಷ್ಟ್ರೀಯ ಚಲನಚಿತ್ರೋದ್ಯಮಕ್ಕೆ ಹಾನಿಕಾರಕವಾಗಬಹುದು ಎಂದು ಬ್ರಿಟಿಷ್ ಏಜೆಂಟ್ ಒಬ್ಬರು ತಿಳಿಸಿದ್ದಾರೆ. ಉದ್ಯಮಕ್ಕೆ ಅನೇಕ ಅಪರಿಚಿತರು ಇದ್ದಾರೆ, ಆದರೆ ನಾವು ಇನ್ನಷ್ಟು ತಿಳಿದುಕೊಳ್ಳುವವರೆಗೆ, ವಿಶ್ವಾದ್ಯಂತ ಆಘಾತಕಾರಿ ಅಲೆಗಳನ್ನು ಕಳುಹಿಸುವುದರಲ್ಲಿ ಸಂದೇಹವಿಲ್ಲ ಎಂದು ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ಕಾರ್ಪರೇಷನ್ ನಿರ್ದೇಶಕ ಮ್ಯಾಥ್ಯೂ ಡೀನರ್ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಈ ನಿರ್ಧಾರಕ್ಕೆ ಬ್ರಿಟನ್, ಕೆನಡಾ, ಐರ್ಲೆಂಡ್, ಹಂಗೇರಿ, ಸ್ಪೇನ್ ಮತ್ತು ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಚಲನಚಿತ್ರಗಳಿಗೆ ಸಬ್ಸಿಡಿಗಳು, ತೆರಿಗೆ ವಿನಾಯಿತಿ ಪಡೆಯುವ ಅಮೇರಿಕನ್ ಸ್ಟುಡಿಯೋಗಳು ಮತ್ತು ಚಲನಚಿತ್ರ ನಿರ್ಮಾಪಕರು ಇಷ್ಟಪಡುವ ವ್ಯವಹಾರ ಮಾದರಿ ಗುರಿಯಾಗಿಸಿಕೊಂಡು ಮಾಡಿದ ದಾಳಿ ಎಂದಿದ್ದಾರೆ. ಮಾರ್ವೆಲ್ ಸೂಪರ್‌ಹೀರೋ ಚಲನಚಿತ್ರಗಳು, ಜೇಮ್ಸ್ ಬಾಂಡ್ ಸಾಹಸಗಳು ಮತ್ತು ಇತ್ತೀಚೆಗೆ, ಈ ತಿಂಗಳು ಬಿಡುಗಡೆಯಾಗಲಿರುವ ಟಾಮ್ ಕ್ರೂಸ್ ಅವರ ಮಿಷನ್ ಇಂಪಾಸಿಬಲ್: ದಿ ಫೈನಲ್ ರೆಕನಿಂಗ್ ಸೇರಿದಂತೆ ಅನೇಕ ಬ್ಲಾಕ್‌ಬಸ್ಟರ್‌ಗಳನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಅಮೇರಿಕಾದ ಹೊರಗೆ ಚಿತ್ರೀಕರಿಸಲಾಗಿದ್ದು ಅವುಗಳ ಮೇಲೆ ಹೆಚ್ಚಿನ ತೆರಿಗೆ ಭಾರ ಬೀಳಲಿದೆ.

# ಝುಂಟು ಅಲಿ ಪತ್ನಿಗೆ ಪ. ಬಂ. ಸರ್ಕಾರದಿಂದ ಉದ್ಯೋಗ

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಮಂಗಳವಾರ ಹುತಾತ್ಮ ಭಾರತೀಯ ಸೇನಾ ಹವಿಲ್ದಾರ್ ಝುಂಟು ಅಲಿ ಶೇಖ್ ಅವರ ಪತ್ನಿಗೆ ಪೊಲೀಸ್ ಗೃಹರಕ್ಷಕ ದಳದಲ್ಲಿ ಕೆಲಸ ನೀಡಿದ್ದು, ಅವರ ಕುಟುಂಬಕ್ಕೆ ಭವಿಷ್ಯದಲ್ಲಿ ಎಲ್ಲಾ ಸಹಾಯ ನೀಡುವುದಾಗಿ ಭರವಸೆ ನೀಡಿದ್ದಾರೆ.

ಶೇಖ್ ಅವರ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ವಹಿಸಿಕೊಂಡಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಕಳೆದ ತಿಂಗಳು ಜಮ್ಮು ಮತ್ತು ಕಾಶ್ಮೀರದ ಉಧಂಪುರ ಪ್ರದೇಶದಲ್ಲಿ ನಡೆದ ಶೋಧ ಕಾರ್ಯಾಚರಣೆ ವೇಳೆ ಭದ್ರತಾ ಪಡೆಗಳು, ಭಯೋತ್ಪಾದಕರ ನಡುವಿನ ಗುಂಡಿನ ಚಕಮಕಿಯಲ್ಲಿ ಶೇಖ್ ಹುತಾತ್ಮರಾಗಿದ್ದರು. ಕೃಷ್ಣನಗರದ ತೆಹಟ್ಟಾದ ಝುಂಟು ಅಲಿ ಶೇಖ್ ರಾಷ್ಟ್ರಕ್ಕಾಗಿ ತಮ್ಮ ಪ್ರಾಣ ಅರ್ಪಿಸಿದ್ದಾರೆ. ನಮಗೆ ಅವರ ಬಗ್ಗೆ ಹೆಮ್ಮೆಯಿದೆ. ನಾವು ಅವರಿಗೆ ವಂದಿಸುತ್ತೇವೆ. ಇಂದು, ಅವರ ಪತ್ನಿ ಶಹನಾಜ್ ಶೇಖ್ ಅವರಿಗೆ ಕೃಷ್ಣನಗರ ಪೊಲೀಸ್ ಜಿಲ್ಲೆಯಲ್ಲಿ ಗೃಹರಕ್ಷಕ ದಳದ ಕೆಲಸ ನೀಡಲಾಗಿದೆ. ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ನಾವು ವಹಿಸಿಕೊಂಡಿದ್ದೇವೆ ಎಂದು ಬ್ಯಾನರ್ಜಿ ಹೇಳಿದರು.ರಾಜ್ಯ ಸರ್ಕಾರ ಅವರ ಕುಟುಂಬಕ್ಕೆ 10 ಲಕ್ಷ ರೂ.ಗಳನ್ನು ಸಹ ನೀಡಿದೆ ಎಂದು ಮಮತಾ ಸಿಎಂ ತಿಳಿಸಿದರು.



# ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಮಹಿಳಾ ಕೇಡರ್ ಹತ್ಯೆ

**ರಾಯ್‌ಪುರ:** ತೆಲಂಗಾಣಕ್ಕೆ ಹೊಂದಿಕೊಂಡಿರುವ ಬಿಜಾಪುರದ ನೈಋತ್ಯ ಅರಣ್ಯ ಗಡಿ ಪ್ರದೇಶದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಸಮವಸ್ತ್ರದಲ್ಲಿದ್ದ ಮಹಿಳಾ ಮಾವೋವಾದಿಯೊಬ್ಬರು ಹತರಾಗಿದ್ದಾರೆ ಎಂದು ಬಸ್ತಾರ್ ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಏಪ್ರಿಲ್ 24 ರಂದು ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಮಹಿಳಾ ನಕ್ಸಲರನ್ನು ಹತ್ಯೆ ಮಾಡಲಾಗಿತ್ತು. ಕಳೆದ 12 ದಿನಗಳಲ್ಲಿ 10,000 ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ಒಳಗೊಂಡ ನಿರ್ಣಾಯಕ ಅಂತರ-ರಾಜ್ಯ ಕಾರ್ಯಾಚರಣೆಯಲ್ಲಿ ಇದುಯವರೆಗೆ ನಿಷೇಧಿತ ಸಿಪಿಐನ ನಾಲ್ವರ ಶವಗಳು, ಹಲವಾರು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಿಜಾಪುರ ಜಿಲ್ಲೆಯ ನೈಋತ್ಯ ಗಡಿ ಪ್ರದೇಶಗಳಲ್ಲಿ ಮಾವೋವಾದಿಗಳ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ, ಜಿಲ್ಲಾ ಮೀಸಲು ಪಡೆ, ವಿಶೇಷ ಕಾರ್ಯಪಡೆ, ಅದರ ಕೋಬ್ರಾ ಪಡೆಯ ಸಿಬ್ಬಂದಿಯನ್ನು ಒಳಗೊಂಡ ಭದ್ರತಾ ಪಡೆಗಳ ಜಂಟಿ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿದೆ.ಕಾರ್ಯಾಚರಣೆ ನಡೆಯುತ್ತಿರುವಾಗ, ಭದ್ರತಾ ಪಡೆಗಳು, ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ಆರಂಭವಾಯಿತು. ಬಳಿಕ ಘಟನಾ ಸ್ಥಳದಿಂದ ಮಹಿಳಾ ಮಾವೋವಾದಿಯ ಮೃತದೇಹ, ಒಂದು ರೈಫಲ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಬಸ್ತಾರ್ ರೇಂಜ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಸುಂದರರಾಜ್ ಪಿ ಅವರು ತಿಳಿಸಿದ್ದಾರೆ.


# ಉದ್ವಿಗ್ನತೆ ತಗ್ಗಿಸಲು ವಿಶ್ವಸಂಸ್ಥೆ ಭದ್ರತಾ ಮಂಡಳಿ ಕರೆ

## ಪಾಕಿಸ್ತಾನಕ್ಕೆ ಕಠಿಣ ಪ್ರಶ್ನೆ | ಪರಸ್ಪರ ಗೌರವ, ಸಾರ್ವಭೌಮ ಸಮಾನತೆಯ ಆಧಾರದ ಮೇಲೆ ನಾವು ಸಂವಾದಕ್ಕೆ ಮುಕ್ತ

**ವಿಶ್ವಸಂಸ್ಥೆ:** ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ನಡೆಸಿದ ರಹಸ್ಯ ಸಮಾಲೋಚನಾ ಸಭೆಯಲ್ಲಿ ರಾಯಭಾರಿಗಳು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಭದ್ರತಾ ಮಂಡಳಿ ಅಧಿಕಾರಿಗಳು ಪಾಕಿಸ್ತಾನಕ್ಕೆ ಕಠಿಣ ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. ಮೇ ತಿಂಗಳಿನ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷರಾಗಿರುವ ಗ್ರೀಸ್, ಪ್ರಸ್ತುತ ಖಾಯಂ ಸದಸ್ಯ ರಾಷ್ಟ್ರವಲ್ಲದ ಪಾಕಿಸ್ತಾನದ ವಿನಂತಿಯ ಮೇರೆಗೆ ಸೋಮವಾರ ಸಭೆಯನ್ನು ನಿಗದಿಪಡಿಸಿದ್ದರು. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು 26 ಜನರನ್ನು, ಹೆಚ್ಚಾಗಿ ಪ್ರವಾಸಿಗರನ್ನು ಕೊಂದ ಕೆಲವು ದಿನಗಳ ನಂತರ ಈ ಸಭೆ ನಡೆದಿದೆ.

**ಭಾರತ-ಪಾಕ್ ಮಧ್ಯೆ ಆತಂಕ**

15 ಸದಸ್ಯರ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯ ನಂತರ ಯಾವುದೇ ಹೇಳಿಕೆ ನೀಡಲಿಲ್ಲ, ರಾಜಕೀಯ ಮತ್ತು ಶಾಂತಿ ಕಾರ್ಯಾಚರಣೆಗಳ ಇಲಾಖೆಗಳಲ್ಲಿ ಮಧ್ಯಪ್ರಾಚ್ಯ, ಏಷ್ಯಾ ಮತ್ತು ಪೆಸಿಫಿಕ್‌ನ ಸಹಾಯಕ ಪ್ರಧಾನ ಕಾರ್ಯದರ್ಶಿ ಟುನೀಶಿಯಾದ ಖಲೀದ್ ಮೊಹಮ್ಮದ್ ಖಿಯಾರಿ ಎರಡೂ ಇಲಾಖೆಗಳ ಪರವಾಗಿ ಮಂಡಳಿಗೆ ವಿವರಿಸಿದರು. ಸಭೆಯಿಂದ ಹೊರಬಂದ ಖಿಯಾರಿ, ಸಂವಾದ ಮತ್ತು ಸಂಘರ್ಷದ ಶಾಂತಿಯುತ ಪರಿಹಾರಕ್ಕಾಗಿ ಕರೆ ನೀಡಲಾಗಿದೆ ಎಂದು ಹೇಳಿದರು. ವಿಶ್ವಸಂಸ್ಥೆಗೆ ಗ್ರೀಸ್ ಖಾಯಂ ಪ್ರತಿ ನಿಧಿ, ಪ್ರಸ್ತುತ ಯುಎನ್ ಎಸ್ ಸಿ ಅಧ್ಯಕ್ಷರಾಗಿರುವ ರಾಯಭಾರಿ ಇವಾಂ ಜೆಲೋಸ್ ಸೆಕೆರಿಸ್ ಇದನ್ನು ಫಲಪ್ರದ ಸಭೆ ಎಂದು ಬಣ್ಣಿಸಿದ್ದಾರೆ. ರಷ್ಯಾದ ರಾಜತಾಂತ್ರಿಕರೊಬ್ಬರು, ಭಾರತ ಮತ್ತು ಪಾಕಿಸ್ತಾನ ನಡುವಣ ಉಲ್ಬಣವನ್ನು ಶಮನಗೊಳಿಸಲು ನಾವು ಆಶಿಸುತ್ತೇವೆ ಎಂದು ಹೇಳಿದರು. 15 ರಾಷ್ಟ್ರಗಳ ಭದ್ರತಾ ಮಂಡಳಿಯ ಸದಸ್ಯರು ಪಾಕಿಸ್ತಾನಕ್ಕೆ ಕಠಿಣ ಪ್ರಶ್ನೆಗಳನ್ನು ಎತ್ತಿದ್ದಾರೆ ಎಂದು ಇಲ್ಲಿನ ಮೂಲಗಳು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದೆ. ಭಾರತದೊಂದಿಗೆ ದ್ವಿಪಕ್ಷೀಯವಾಗಿ ಸಮಸ್ಯೆಗಳನ್ನು ಬಗೆಹರಿಸಲು ಸೂಚಿಸಲಾಗಿದೆ ಎಂದು ಹೇಳಿದರು. ಭಯೋತ್ಪಾದಕ ದಾಳಿಗೆ ವ್ಯಾಪಕ ಖಂಡನೆ ಮತ್ತು ಹೊಣೆಗಾರಿಕೆಯ ಅಗತ್ಯವನ್ನು ಗುರುತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



### ಸಭೆಯಲ್ಲಿ ಏನೇನು ವಿಷಯಗಳು ಪ್ರಸ್ತಾಪವಾದವು?

**1960ರ ಸಿಂಧೂ ಜಲ ಒಪ್ಪಂದವನ್ನು ಭಾರತ ಅಮಾನತುಗೊಳಿಸಿದ ವಿಷಯವನ್ನು ಪಾಕಿಸ್ತಾನವು ಎತ್ತಿತು. ನೀರು ಜೀವ, ಆಯುಧವಲ್ಲ. ಈ ನದಿಗಳು 240 ಮಿಲಿಯನ್ ಗಿಂತಲೂ ಹೆಚ್ಚು ಪಾಕಿಸ್ತಾನಿಗಳನ್ನು ಪೋಷಿಸುತ್ತವೆ. ಸಭೆಯಲ್ಲಿ ಪಾಕಿಸ್ತಾನವು ಭಾರತ ಸೇರಿದಂತೆ ನಮ್ಮ ಎಲ್ಲಾ ನೆರೆಹೊರೆಯವರೊಂದಿಗೆ ಶಾಂತಿಯುತ, ಸಹಕಾರಿ ಸಂಬಂಧಗಳಿಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿತು ಎಂದು ಅಹ್ಮದ್ ಹೇಳಿದರು.**

ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಮುಚ್ಚಿದ ಬಾಗಿಲಿನ ಸಭೆಯು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕೊಠಡಿಯಲ್ಲಿ ನಡೆಯಲಿಲ್ಲ, ಬದಲಾಗಿ ಅದರ ಪಕ್ಕದ ಸಮಾಲೋಚನಾ ಕೊಠಡಿಯಲ್ಲಿ ನಡೆಯಿತು. ಪಾಕಿಸ್ತಾನದ ಕ್ಷಿಪಣಿ ಪರೀಕ್ಷೆಗಳು ಮತ್ತು ಪರಮಾಣು ವಾಕ್ಚಾತುರ್ಯವು ಉದ್ವಿಗ್ನತೆಯನ್ನು ಹೆಚ್ಚಿಸುವ ಅಂಶಗಳಾಗಿವೆ ಎಂದು ಅನೇಕ ಸದಸ್ಯರು ಕಳವಳ ವ್ಯಕ್ತಪಡಿಸಿದರು. ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ಖಾಯಂ ಪ್ರತಿನಿಧಿ ರಾಯಭಾರಿ ಅಸಿಮ್ ಇಫ್ತಿಕರ್ ಅಹ್ಮದ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಸಭೆಯಲ್ಲಿ ದೇಶದ ಉದ್ದೇಶಗಳನ್ನು ಹೆಚ್ಚಾಗಿ ಮುಂದಿಡಲಾಗಿದೆ ಎಂದರು.






# ಸದಾ ಬಿಕಿನಿಯಲ್ಲಿ ಕಾಣಿಸಿಕೊಳ್ತಿದ್ದ ದಿವ್ಯ ಭಾರತಿ



ಸದಾ ಇನ್ಸ್ಟಾದಲ್ಲಿ ಬಿಕಿನಿಯಲ್ಲಿ ಕಾಣಿಸಿಕೊಂಡು ಪಡ್ಡೆ ಹುಡುಗರ ನಿದ್ದೆ ಕದಿಯುತ್ತಿದ್ದ ತಮಿಳು ನಟಿ ದಿವ್ಯಾ ಭಾರತಿ, ಈ ಬಾರಿ ಸ್ಟೈಲೀಶ್ ಆಗಿ ಸೀರೆ ಉಟ್ಟು ಫೋಟೋಶೂಟ್ ಮಾಡಿಸಿದ್ದಾರೆ.

ಇನ್ಸ್ಟಾದಲ್ಲಿ ರೆಡ್ ಸೀರೆಯಲ್ಲಿ ಮಿಂಚುತ್ತಿರುವ ಫೋಟೋಗಳು ಸೌಂದರ್ಯ ಪ್ರಿಯರ ಕಣ್ಣನ್ನು ಕುಕ್ಕುತ್ತಿವೆ. 'ಬ್ಯಾಚುಲರ್' ಚಿತ್ರದ ಮೂಲಕ ನಟಿ ದಿವ್ಯ ಭಾರತಿ ಯುವಜನರ ಹೃದಯ ಕದ್ದಿದ್ದರು. ಇತ್ತೀಚೆಗೆ ಬಿಡುಗಡೆಯಾದ ಅವರ 'ಕಿಂಗ್‌ಸ್ಟನ್' ಚಿತ್ರದ ಮೇಲೆ ತುಂಬಾ ನಿರೀಕ್ಷೆ ಇಟ್ಟಿದ್ದರು. ಆದರೆ ಅದು ಅಷ್ಟು ಯಶಸ್ವಿಯಾಗಿರಲಿಲ್ಲ. ತಮಿಳಿನಲ್ಲಿ ಸರಿಯಾದ ಅವಕಾಶಗಳು ಸಿಗದೆ ಪರದಾಡುತ್ತಿರುವ ದಿವ್ಯ ಈಗ ತೆಲುಗು ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಇದರ ಬೆನ್ನಲ್ಲೇ ಗ್ಲಾಮರ್ ಆಗಿ ಆಧುನಿಕ ಶೈಲಿಯ ಸೀರೆಯಲ್ಲಿ ಪೋಸ್ ನೀಡಿದ್ದಾರೆ. ಈ ಮೂಲಕ ಸಾಮಾಜಿಕ ಜಾಲತಾಣಗಳಿಗೆ ಕಿಚ್ಚು ಹಚ್ಚಿದ್ದಾರೆ. ಈ ಕಿಚ್ಚಿನಿಂದಲೇ ಮೂವತ್ತು ಲಕ್ಷಕ್ಕೂ ಹೆಚ್ಚು ಫಾಲೋವರ್ಸ್‌ಗಳ ಕಣ್ಣನ್ನು ತಂಪು ಮಾಡಿದ್ದಾರೆ.

ಕೆಂಪು ಬಣ್ಣದ ಮಾಡರ್ನ್ ಸೀರೆಯಲ್ಲಿ ವಿವಿಧ ಭಂಗಿಗಳಲ್ಲಿ ದಿವ್ಯ ಪೋಸ್ ನೀಡಿದ್ದಾರೆ. ಈ ರೀತಿಯ ಆಧುನಿಕ ಶೈಲಿ ಸೀರೆ ಪಾರ್ಟಿಗಳು ಮತ್ತು ಮದುವೆಗಳಂತಹ ಸಮಾರಂಭದಲ್ಲಿ ಎಲ್ಲಾರ ಕಣ್ಣು ನಿಮ್ಮ ಮೇಲೆ ಬೀಳುವಂತೆ ಮಾಡುತ್ತವೆ! ಸದ್ಯ ದಿವ್ಯಾ ಅವರ ಮನಮೋಹಕ ಫೋಟೋಗಳು ಅಂತರ್ಜಾಲದಲ್ಲಿ ವೈರಲ್ ಆಗುತ್ತಿವೆ.

2021ರಲ್ಲಿ 'ಬ್ಯಾಚುಲರ್' ಸಿನಿಮಾದಲ್ಲಿ ಜಿ.ವಿ ಪ್ರಕಾಶ್ ಮತ್ತು ದಿವ್ಯಾ ಭಾರತಿ ಒಟ್ಟಿಗೆ ಕೆಲಸ ಮಾಡಿದ್ದರು.



# ಸಿನಿಮಾಗಳು ಸೋಲುತ್ತಿರುವುದೇಕೆ



**ಚಿತ್ರರಂಗದ ಹುಳುಕು ತೆರೆದಿಟ್ಟ ಖಾನ್**

ನಟ ಆಮಿರ್ ಖಾನ್, ಸಿನಿಮಾ ಉದ್ಯಮದ ಮಾಡೆಲ್ ಅನ್ನು ಟೀಕೆ ಮಾಡುತ್ತಲೇ ಬಂದಿದ್ದಾರೆ. ಜನ ಚಿತ್ರಮಂದಿರಗಳಿಗೆ ಏಕೆ ಬರುತ್ತಿಲ್ಲ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ ಆಮಿರ್ ಖಾನ್. ಸಿನಿಮಾಗಳಲ್ಲಿ ಹೊಸ ಪ್ರಯೋಗಗಳನ್ನು ಮಾಡುವ ಆಮಿರ್ ಖಾನ್, ಸಿನಿಮಾದ ಬ್ಯುಸಿನೆಸ್ ಮಾಡೆಲ್ ಅನ್ನು ಬದಲಾಯಿಸುವ ಒತ್ತಾಯ ಮಾಡಿದ್ದಾರೆ. ಆಮಿರ್ ಖಾನ್ ಅದ್ಭುತವಾದ ನಟ ಆಗಿರುವ ಜೊತೆಗೆ ಅದ್ಭುತ ಸಿನಿಮಾ ಪ್ರೇಮಿ. ಇತರೆ ಖಾನ್‌ಗಳು ಕಮರ್ಶಿಯಲ್ ಸಿನಿಮಾ ಕೊಟ್ಟು ಬಾಕ್ಸ್ ಆಫೀಸ್ ಯಶಸ್ಸಿನ ಹಿಂದೆ ಓಡುತ್ತಿದ್ದರೆ ಆಮಿರ್ ಖಾನ್ ಮಾತ್ರ ಬಾಕ್ಸ್ ಆಫೀಸ್ ಕಡೆಗೆ ತಿರುಗಿ ಸಹ ನೋಡುವುದಿಲ್ಲ, ಅವರ ಗುರಿ ಏನಿದ್ದರೂ ಒಳ್ಳೆಯ ಸಿನಿಮಾ ಕೊಡಬೇಕು, ಹೊಸ ಪ್ರಯೋಗಗಳನ್ನು ಮಾಡಬೇಕು ಎಂಬುದೇ ಆಗಿರುತ್ತದೆ. ಸಿನಿಮಾ ಬಗ್ಗೆ ಕಲೆಯಾಗಿ ಮಾತ್ರವಲ್ಲ ಒಂದು ಉದ್ಯಮವಾಗಿಯೂ ಭಿನ್ನ ರೀತಿಯ ಆಲೋಚನೆಗಳನ್ನೇ ಅವರು ಇರಿಸಿಕೊಂಡಿದ್ದಾರೆ. ಇತ್ತೀಚೆಗೆ ಮುಂಬೈನಲ್ಲಿ ನಡೆದ ವೇವ್ಸ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಆಮಿರ್ ಖಾನ್, ಸಿನಿಮಾ ಉದ್ಯಮದ ಬಗ್ಗೆ ಚರ್ಚೆ ಮಾಡಿದರು. ಪಿವಿಆರ್ ಸಿನಿಮಾಸ್ ಮಾಲೀಕ ಅಜಯ್ ಬಿಜಲಿ, ಕೆಲ ನಿರ್ಮಾಪಕರು ಸಹ ಭಾಗಿ ಆಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಆಮಿರ್ ಖಾನ್ ಸಿನಿಮಾ ಉದ್ಯಮದ ಬಗ್ಗೆ ತಮ್ಮ ಅಭಿಪ್ರಾಯ ಮುಂದಿಟ್ಟಿದ್ದಾರೆ.

# ಅಲ್ಲುಗೆ ಕಠಿಣ ತಯಾರಿ

## ಫಿಸಿಕಲ್ ಜೊತೆ ಮೆಂಟಲ್ ತರಬೇತಿ



**ಸಿನಿಮಾದಲ್ಲಿ ಚಿತ್ರ ವಿಚಿತ್ರ ಜೀವಿಗಳು**

ನಟ ಅಲ್ಲು ಅರ್ಜುನ್ 'ಪುಷ್ಪ 2' ಬಳಿಕ ತ್ರಿವಿಕ್ರಮ್ ಬದಲಿಗೆ ಅಟ್ಲಿ ಜೊತೆಗೆ ಸಿನಿಮಾ ಮಾಡುತ್ತಿದ್ದಾರೆ. ಭಾರಿ ಬಜೆಟ್‌ನ ಈ ಸಿನಿಮಾಕ್ಕಾಗಿ ತಯಾರಿಯನ್ನು ಅಲ್ಲು ಅರ್ಜುನ್ ಈಗಾಗಲೇ ಆರಂಭಿಸಿದ್ದಾರೆ. ವಿದೇಶಿ ಫಿಟ್‌ನೆಸ್ ಕೋಚ್ ಅನ್ನು ಪಡೆದುಕೊಂಡಿರುವ ಅಲ್ಲು ಅರ್ಜುನ್, ದೈಹಿಕ ತರಬೇತಿ ಜೊತೆಗೆ ಮಾನಸಿಕ ತರಬೇತಿಯನ್ನು ಸಹ ಪಡೆಯುತ್ತಿದ್ದಾರೆ.

ಅಲ್ಲು ಅರ್ಜುನ್ ನಟನೆಯ 'ಪುಷ್ಪ 2' ಸಿನಿಮಾ ಸಾವಿರ ಕೋಟಿಗೂ ಹೆಚ್ಚಿನ ಕಲೆಕ್ಷನ್ ಮಾಡಿದ್ದು, ಹಲವು ದಾಖಲೆಗಳನ್ನು ಮುರಿದು ಹೊಸ ದಾಖಲೆಗಳನ್ನು ಬರೆದಿದೆ. 'ಪುಷ್ಪ 2'ನ ಭರ್ಜರಿ ಗೆಲುವಿನ ಬಳಿಕ ಅಂತಹುದೇ ದೊಡ್ಡ ಸ್ಕೇಲ್‌ನ ಸಿನಿಮಾಗಳನ್ನು ಅಲ್ಲು ಅರ್ಜುನ್ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. 'ಪುಷ್ಪ 2' ಸಿನಿಮಾ ಬಳಿಕ ತ್ರಿವಿಕ್ರಮ್ ನಿರ್ದೇಶನದ ಸಿನಿಮಾದಲ್ಲಿ ಅಲ್ಲು ಅರ್ಜುನ್ ನಟಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಆ ಸಿನಿಮಾ 'ಸಾಮಾನ್ಯ' ಬಜೆಟ್‌ನ ಸಿನಿಮಾ ಆಗಿರುವ ಕಾರಣ ಇದೀಗ ಅಲ್ಲು ಅರ್ಜುನ್ ಭಾರಿ ಬಜೆಟ್‌ನ ಫ್ಯಾಂಟಸಿ ಕತೆಯುಳ್ಳ ಅಟ್ಲಿ ಸಿನಿಮಾದ ಚಿತ್ರೀಕರಣ ಪ್ರಾರಂಭಿಸಲಿದ್ದಾರೆ.

ಅಟ್ಲಿ, ಹಾಲಿವುಡ್‌ನ ಮಾರ್ವೆಲ್ ಸ್ಟುಡಿಯೋಸ್ ಮಾದರಿಯ ಕತೆಯನ್ನು ಮಾಡಿದ್ದು, 'ಗಾರ್ಡಿಯನ್ಸ್ ಆಫ್ ದಿ ಗ್ಯಾಲೆಕ್ಸಿ' ರೀತಿ ಯಾವುದೋ ಬೇರೆ ಲೋಕದಲ್ಲಿ ನಡೆಯುವಂತೆ ಕತೆ ಹೆಣೆದುಕೊಂಡಿದ್ದಾರೆ. ಸಿನಿಮಾದಲ್ಲಿ ಚಿತ್ರ ವಿಚಿತ್ರ ಜೀವಿಗಳು, ಜನರು, ಅತ್ಯಾಧುನಿಕ ಆಯುಧಗಳು, ವಾಹನಗಳು ಇರಲಿವೆ. ಈ ಸಿನಿಮಾದಲ್ಲಿ ಅಲ್ಲು ಅರ್ಜುನ್ ಸೂಪರ್ ಹೀರೋ ಪಾತ್ರದಲ್ಲಿ ನಟಿಸಲಿದ್ದಾರೆ. ಈ ಸಿನಿಮಾಕ್ಕಾಗಿ ಅಲ್ಲು ಅರ್ಜುನ್ ಈಗಾಗಲೆ ತಯಾರಿ ಆರಂಭಿಸಿದ್ದಾರೆ.

# ದೈಜಿ ಚಿತ್ರದಲ್ಲಿ ದಿಗಂತ್

ರಮೇಶ್ ಅರವಿಂದ್ ನಟನೆಯ 'ದೈಜಿ' ಸಿನಿಮಾಗೆ ದೂದ್‌ಪೇಡ ದಿಗಂತ್ ಸಾಥ್ ನೀಡಿದ್ದಾರೆ. ಈ ಚಿತ್ರದಲ್ಲಿ ಪವರ್‌ಫುಲ್ ಪಾತ್ರಕ್ಕೆ ಅವರು ಬಣ್ಣ ಹಚ್ಚಿದ್ದಾರೆ.

ಇದೀಗ ದಿಗಂತ್ 'ದೈಜಿ' ಸೆಟನಲ್ಲಿರುವ ಫೋಟೋಗಳು ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿವೆ. ರಮೇಶ್ ನಟನೆಯ 106ನೇ ಚಿತ್ರ 'ದೈಜಿ' ಟೀಮ್‌ಗೆ ದಿಗಂತ್ ಸೇರಿಕೊಂಡಿದ್ದಾರೆ. ರಮೇಶ್ ಅರವಿಂದ್ ತಮ್ಮನ ಪಾತ್ರದಲ್ಲಿ ನಟಿಸಲಿದ್ದಾರೆ. ಚಿತ್ರದಲ್ಲಿ ತಿರುವು ಕೊಡುವ ಪವರ್‌ಫುಲ್ ಪಾತ್ರ ಇದಾಗಿದೆ. ಗಗನ್ ಪಾತ್ರಕ್ಕೆ ಅವರು ಜೀವ ತುಂಬಲಿದ್ದಾರೆ. 'ದೈಜಿ' ಸಿನಿಮಾದಲ್ಲಿ ರಮೇಶ್ ಅವರು ಸೂರ್ಯ ಪಾತ್ರದಲ್ಲಿ ನಟಿಸಿದ್ರೆ, ನಾಯಕಿ ರಾಧಿಕಾ ನಾರಾಯಣ್ ಭೂಮಿ ಪಾತ್ರದಲ್ಲಿ ನಟಿಸಿದ್ದಾರೆ. ಈ ಹಿಂದೆ ತೆರೆಕಂಡ 'ಅಮೆರಿಕ ಅಮೆರಿಕ' ಚಿತ್ರದ ಪ್ರಮುಖ ಪಾತ್ರಗಳ ಹೆಸರನ್ನೇ ಈ ಚಿತ್ರಕ್ಕೂ ಇಡಲಾಗಿದೆ. ಈಗಾಗಲೇ 'ದೈಜಿ' ಸಿನಿಮಾ 50% ರಷ್ಟು ಚಿತ್ರೀಕರಣ ನಡೆದಿದೆ. ಮುಂದಿನ ಶೆಡ್ಯೂಲ್‌ನಲ್ಲಿ ದಿಗಂತ್ ಕೂಡ ಭಾಗಿಯಾಗಲಿದ್ದಾರೆ. ಹೊಸ ಶೇಡ್‌ನಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರಕ್ಕೆ 'ಶಿವಾಜಿ ಸುರತ್ಕಲ್' ನಿರ್ದೇಶನ ಮಾಡಿದ್ದ ಆಕಾಶ್ ಶ್ರೀವತ್ಸ ನಿರ್ದೇಶನ ಮಾಡಿದ್ದಾರೆ.

# ಗೆಲುವಿಗಾಗಿ ಕಾಯ್ತಿದ್ದಾರೆ ಪೂಜಾ ಹೆಗ್ಡೆ



**ಸತತ 7 ಸಿನಿಮಾಗಳು ಫ್ಲಾಪ್**

ಕರಾವಳಿ ಬೆಡಗಿ ಪೂಜಾ ಹೆಗ್ಡೆ ನಟಿಸಿರುವ ಸಾಲು ಸಾಲು 7 ಸಿನಿಮಾಗಳು ಫ್ಲಾಪ್ ಆಗಿವೆ. ಈ ಮಂಗಳೂರಿನ ಬೆಡಗಿಗೆ ಅದೃಷ್ಟ ಕೈಹಿಡಿಯೋದು ಯಾವಾಗ ಎಂದು ಅಭಿಮಾನಿಗಳು ಎದುರು ನೋಡುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಪೂಜಾ ನಟಿಸಿರುವ ಸತತ 7 ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ಮಕಾಡೆ ಮಲಗಿವೆ. ಸ್ಟಾರ್ ನಟರಿಗೆ ಅವರು ನಾಯಕಿಯಾದ್ರೂ ಸಕ್ಸಸ್ ಸಿಗಲಿಲ್ಲ. ಪ್ರಭಾಸ್ ಜೊತೆ ರಾಧೆ ಶ್ಯಾಮ್, ದಳಪತಿ ವಿಜಯ್ ಜೊತೆ ಬೀಸ್ಟ್, ರಾಮ್ ಚರಣ್ ಜೊತೆ ಆಚಾರ್ಯ, ರಣವೀರ್ ಸಿಂಗ್ ಜೊತೆ ಸರ್ಕಸ್, ಸಲ್ಮಾನ್ ಖಾನ್ ಜೊತೆ 'ಕಿಸಿ ಕಾ ಭಾಯ್ ಕಿಸಿ ಕಿ ಜಾನ್', ಶಾಹಿದ್ ಕಪೂರ್ ಜೊತೆ ದೇವ ಸಿನಿಮಾಗಳಲ್ಲಿ ನಟಿಸಿದ್ದರು. ಈ ಸಿನಿಮಾಗಳೆಲ್ಲಾ ಸಕ್ಸಸ್ ಸಿಗದೆ ನೆಲಕಚ್ಚಿದೆ. ಮೇ 1ರಂದು ಸೂರ್ಯ ಜೊತೆ ನಟಿಸಿದ್ದ 'ರೆಟ್ರೋ' ಸಿನಿಮಾಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬ್ಯಾಕ್ ಟು ಬ್ಯಾಕ್ ಸಿನಿಮಾಗಳು ಸಕ್ಸಸ್ ಸಿಗದೆ ಇರೋದನ್ನು ನೋಡಿ ಅಭಿಮಾನಿಗಳು ಕಂಗಲಾಗಿದ್ದಾರೆ. ಕರಾವಳಿ ಬೆಡಗಿಗೆ ಅದೃಷ್ಟ ಕೈ ಹಿಡಿಯೋದು ಯಾವಾಗ ಎಂಬುದೇ ಅಭಿಮಾನಿಗಳ ಪ್ರಶ್ನೆಯಾಗಿದೆ. 'ಒಕಾ ಲೈಲಾ ಕೋಸಂ' ಚಿತ್ರದ ಮೂಲಕ ಪೂಜಾ ಟಾಲಿವುಡ್‌ಗೆ ಎಂಟ್ರಿ ಕೊಟ್ಟರು. ಈ 7 ಫ್ಲಾಪ್ ಚಿತ್ರಕ್ಕೂ ಮುನ್ನ ಸಮತಾ, ಮಹರ್ಷಿ, ಅಲ ವೈಕುಂಠಪುರಮಲ್ಲೋ, ಮೋಸ್ಟ್ ಎಲಿಜಿಬಲ್ ಬ್ಯಾಚುಲರ್ ಸಿನಿಮಾಗಳ ಮೂಲಕ ಪೂಜಾ ಸಕ್ಸಸ್ ಕಂಡಿದ್ದಾರೆ.

# ಈಗ ಅದನ್ನು ಒಪ್ಪಿಕೊಳ್ಳಿ

## ವಿರಾಟ್ ಕೊಹ್ಲಿ ಟೀಕಿಸುವವರ ಮೇಲೆ RCB ಮಾಜಿ ಆಟಗಾರ ಎಬಿ ಡಿ ವಿಲಿಯರ್ಸ್ ಕಿಡಿ




ಸಂಜಯ್ ಮಂಜ್ರೇಕರ್, ವಿರೇಂದ್ರ ಸೆಹ್ವಾಗ್ ಮತ್ತು ಸುನೀಲ್ ಗವಾಸ್ಕರ್ ಅವರಂತಹ ಕೆಲವು ಮಾಜಿ ಕ್ರಿಕೆಟಿಗರು ಕೊಹ್ಲಿ ಮಧ್ಯಮ ಓವರ್‌ಗಳಲ್ಲಿ ರನ್ ಗಳಿಸುವಾಗ ಹೆಚ್ಚಿನ ವೇಗವನ್ನು ತೋರಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸಿದ್ದಾರೆ. ಈ ವರ್ಷ ಮಾತ್ರವಲ್ಲದೆ, ಕಳೆದ ಎರಡು ಆವೃತ್ತಿಗಳಲ್ಲಿಯೂ ಕೊಹ್ಲಿ ವಿರುದ್ಧ ಟೀಕೆಗಳು ವ್ಯಕ್ತವಾಗಿವೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2025ರ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಆಡಿರುವ 11 ಪಂದ್ಯಗಳಲ್ಲಿ 8ರಲ್ಲಿ ಜಯಗಳಿಸಿ, ಪಾಯಿಂಟ್ಸ್ ಟೇಬಲ್‌ನಲ್ಲಿ ಮೊದಲ ಸ್ಥಾನದಲ್ಲಿದೆ. ಆರ್‌ಸಿಬಿ ಪ್ಲೇಆಫ್ ತಲುಪುವುದು ಬಹುತೇಕ ಖಚಿವಾಗಿದ್ದು, ಲೀಗ್ ಹಂತದಲ್ಲಿ ಇನ್ನೂ ಮೂರು ಪಂದ್ಯಗಳು ಬಾಕಿ ಉಳಿದಿವೆ. ಆರ್‌ಸಿಬಿ ಅದ್ಭುತ ಪ್ರದರ್ಶನದ ಹಿಂದೆ ಇಡೀ ತಂಡವಿದ್ದರೂ, ಈ ಆವೃತ್ತಿಯಲ್ಲಿ ಪರಿಸ್ಥಿತಿಯನ್ನು ಅವಲಂಬಿಸಿ ಉತ್ತಮ ಪ್ರದರ್ಶನ ನೀಡಿರುವ ವಿರಾಟ್ ಕೊಹ್ಲಿಗೆ ದೊಡ್ಡ ಶ್ರೇಯಸ್ಸು ಸಲ್ಲುತ್ತದೆ. ಈ ಆವೃತ್ತಿಯಲ್ಲಿ ಸದ್ಯ ಆರೆಂಜ್ ಕ್ಯಾಪ್ ಮಾಲೀಕರಾಗಿದ್ದರೂ, ವಿರಾಟ್ ಕೊಹ್ಲಿ ಟೀಕೆಗಳಿಂದ ಮುಕ್ತರಾಗಿಲ್ಲ.


**ಕೊಹ್ಲಿ ವಿರುದ್ಧ ಟೀಕೆಗಳು**


ಸಂಜಯ್ ಮಂಜ್ರೇಕರ್, ವಿರೇಂದ್ರ ಸೆಹ್ವಾಗ್ ಮತ್ತು ಸುನೀಲ್ ಗವಾಸ್ಕರ್ ಅವರಂತಹ ಕೆಲವು ಮಾಜಿ ಕ್ರಿಕೆಟಿಗರು ಕೊಹ್ಲಿ ಮಧ್ಯಮ ಓವರ್‌ಗಳಲ್ಲಿ ರನ್ ಗಳಿಸುವಾಗ ಹೆಚ್ಚಿನ ವೇಗವನ್ನು ತೋರಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸಿದ್ದಾರೆ. ಈ ವರ್ಷ ಮಾತ್ರವಲ್ಲದೆ, ಕಳೆದ ಎರಡು ಆವೃತ್ತಿಗಳಲ್ಲಿಯೂ ಕೊಹ್ಲಿ ವಿರುದ್ಧ ಟೀಕೆಗಳು ವ್ಯಕ್ತವಾಗಿವೆ. ಆದಾಗ್ಯೂ, ಆರ್‌ಸಿಬಿ ತಂಡದ ಮಾಜಿ ಆಟಗಾರ ಎಬಿ ಡಿವಿಲಿಯರ್ಸ್, ಕೊಹ್ಲಿ ಎಂತದ್ದೇ ಪರಿಸ್ಥಿತಿಗೆ ಹೊಂದಿಕೊಳ್ಳುವ ಮತ್ತು ತಂಡಕ್ಕೆ ಏನು ಬೇಕೋ ಆ ಆಟದ ಶೈಲಿಯನ್ನು ಹೊಂದಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ. ಇದುವೇ ಅವರನ್ನು ಆರ್‌ಸಿಬಿಗೆ ಅಮೂಲ್ಯ ಆಸ್ತಿಯನ್ನಾಗಿ ಮಾಡುತ್ತದೆ ಎಂದು ಹೇಳುವ ಮೂಲಕ ಟೀಕಾಕಾರರಿಗೆ ತಿರುಗೇಟು ನೀಡಿದ್ದಾರೆ. 'ವಿರಾಟ್ ಯಾವಾಗಲೂ ಇರುತ್ತಾರೆ. ಅವರು ಆರ್‌ಸಿಬಿಗೆ ಮಿಸ್ಟರ್ ಸೇಫ್ಟಿ. ಅವರು ಅಲ್ಲಿರುವಾಗ, ನೀವು ಭಯಪಡುವ ಅಗತ್ಯವಿಲ್ಲ. ವಿರಾಟ್ ಹತ್ತಿರದಲ್ಲಿದ್ದಾಗ ಎಂದಿಗೂ ಭಯಪಡಬೇಡಿ. ಅದೇ ಕಥೆ. ಏನೂ ಬದಲಾಗಿಲ್ಲ ಮತ್ತು ಮಾಧ್ಯಮದ ಮಂದಿಗೆ ನಾನು ಏನು ಹೇಳಲು ಬಯಸುತ್ತಿದ್ದೇನೋ ಅದನ್ನು ನಾನು ಮರೆತಿಲ್ಲ. ನನಗೆ ಆನೆಯ ಮೆದುಳು ಇದೆ. ನನ್ನ ಎಲ್ಲ ಪತ್ರಕರ್ತ ಸ್ನೇಹಿತರನ್ನು ನಾನು ಪ್ರೀತಿಸುತ್ತೇನೆ. ವಿರಾಟ್ ಸ್ಕೋರ್ ಮಾಡಲು ತುಂಬಾ ಸಮಯ ತೆಗೆದುಕೊಳ್ಳುತ್ತಾರೆ ಎಂದು ನೀವು ಹೇಳಿದ್ದೀರಿ, ಆದರೆ, ಈಗ ನೀವು ಅವರನ್ನು ನೋಡಿ. ಅವರು 200ರ ಸ್ಟ್ರೈಕ್ ರೇಟ್‌ನೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದಾರೆ!' 'ಈಗ ಅದನ್ನು ಒಪ್ಪಿಕೊಳ್ಳಿ' ಎಂದು ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡ ವೀಡಿಯೊದಲ್ಲಿ ಹೇಳಿದ್ದಾರೆ. ಆಡಿರುವ 11 ಪಂದ್ಯಗಳಲ್ಲಿ 505 ರನ್ ಗಳಿಸಿರುವ ಕೊಹ್ಲಿ ಈ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಆಗಿದ್ದಾರೆ. ಅವರ ಸರಾಸರಿ 63.13 ಮತ್ತು 143.46 ಸ್ಟ್ರೈಕ್ ರೇಟ್ ಇದೆ. ಬೆಂಗಳೂರಿನಲ್ಲಿ ಸಿಎಸ್‌ಕೆ ವಿರುದ್ಧದ ಕೊನೆಯ ಪಂದ್ಯದಲ್ಲಿ ವಿರಾಟ್ 187.87 ಸ್ಟ್ರೈಕ್‌ರೇಟ್‌ನಲ್ಲಿ 33 ಎಸೆತಗಳಲ್ಲಿ 62 ರನ್ ಗಳಿಸಿದರು.

# ಟೀಮ್ ಇಂಡಿಯಾ ನಾಯಕತ್ವಕ್ಕಾಗಿ ಹಿರಿಯ ಆಟಗಾರನ ತೆರೆಮರೆಯ ಪ್ರಯತ್ನ

ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯು ಜೂನ್ 20 ರಿಂದ ಶುರುವಾಗಲಿದೆ. ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಈ ಸರಣಿಗಾಗಿ ಬಿಸಿಸಿಐ 35 ಆಟಗಾರರ ಶಾರ್ಟ್ ಲಿಸ್ಟ್ ಮಾಡಿಕೊಂಡಿದೆ. ಈ ಪಟ್ಟಿಯಿಂದ 18 ಆಟಗಾರರು ಇಂಗ್ಲೆಂಡ್ ವಿರುದ್ಧದ ಸರಣಿಗೆ ಆಯ್ಕೆಯಾಗುವ ಸಾಧ್ಯತೆಯಿದೆ. ಅಲ್ಲದೆ ಈ ಸರಣಿಯ ಮೂಲಕ ಭಾರತ ಟೆಸ್ಟ್ ತಂಡದ ನಾಯಕನನ್ನು ಸಹ ಬದಲಿಸಲು ಬಿಸಿಸಿಐ ಚಿಂತಿಸಿದೆ.

ಇಂಗ್ಲೆಂಡ್ ವಿರುದ್ಧದ ಸರಣಿಗೆ ರೋಹಿತ್ ಶರ್ಮಾ ಅವರನ್ನು ಆಯ್ಕೆ ಮಾಡಲಿದ್ದು, ಇದಾಗ್ಯೂ ಅವರಿಗೆ ನಾಯಕತ್ವ ನೀಡುವ ಬಗ್ಗೆ ಯಾವುದೇ ಖಚಿತತೆ ಇಲ್ಲ. ಹಾಗೆಯೇ ಉಪನಾಯಕನನ್ನು ಸಹ ಬದಲಿಸಲು ಬಿಸಿಸಿಐ ಚರ್ಚಿಸಿದೆ. ಇಲ್ಲಿ ರೋಹಿತ್ ಶರ್ಮಾ ಅವರನ್ನು ಈ ಸರಣಿಗೆ ನಾಯಕನಾಗಿ ಮುಂದುವರೆಸಿದರೂ, ಉಪನಾಯಕ ಬದಲಾಗುವುದು ಖಚಿತ ಎಂದು ಬಿಸಿಸಿಐ ಮೂಲ ಗಳು ತಿಳಿಸಿವೆ.





ಪ್ರಸ್ತುತ ಭಾರತ ಟೆಸ್ಟ್ ತಂಡದ ಉಪನಾಯಕನಾಗಿ ಜಸ್‌ಪ್ರೀತ್ ಬುಮ್ರಾ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಪದೇ ಪದೇ ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಬುಮ್ರಾ ಅವರ ಬದಲಿಗೆ ಉಪನಾಯಕನಾಗಿ ಶುಭ್‌ಮನ್ ಗಿಲ್ ಅವರನ್ನು ಆಯ್ಕೆ ಮಾಡುವ ಬಗ್ಗೆ ಕೂಡ ಚರ್ಚಿಸಲಾಗಿದೆ. ಹೀಗಾಗಿ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ವೈಸ್ ಕ್ಯಾಪ್ಟನ್ ಆಗಿ ಗಿಲ್ ಕಾಣಿಸಿಕೊಂಡರೂ ಅಚ್ಚರಿಪಡಬೇಕಿಲ್ಲ.


ಮತ್ತೊಂದೆಡೆ ಭಾರತ ಟೆಸ್ಟ್ ತಂಡದ ನಾಯಕತ್ವ ವಹಿಸಿಕೊಳ್ಳಲು ಹಿರಿಯ ಆಟಗಾರರೊಬ್ಬರು ಆಸಕ್ತಿ ತೋರಿದ್ದಾರೆ. ಈ ಹಿಂದೊಮ್ಮೆ ಟೀಮ್ ಇಂಡಿಯಾವನ್ನು ಮುನ್ನಡೆಸಿದ ಆಟಗಾರರೊಬ್ಬರು ಮತ್ತೆ ನಾಯಕನಾಗಲು ಆಸಕ್ತಿ ವ್ಯಕ್ತಪಡಿಸಿದ್ದು, ಇದಾಗ್ಯೂ ಈ ಕೋರಿಕೆಯನ್ನು ಬಿಸಿಸಿಐ ನಯವಾಗಿ ತಿರಸ್ಕರಿಸಿದೆ ಎಂದು ತಿಳಿದು ಬಂದಿದೆ.

ಈ ಹಿಂದೆ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿ ವೇಳೆ ಹಿರಿಯ ಆಟಗಾರರೊಬ್ಬರು ಕ್ಯಾಪ್ಟನ್ ಪಟ್ಟಕ್ಕಾಗಿ ತೆರೆಮರೆಯ ಪ್ರಯತ್ನ ಮಾಡುತ್ತಿದ್ದಾರೆ ಎಂದು ವರದಿಯಾಗಿತ್ತು. ಈ ವೇಳೆ ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರೀತ್ ಬುಮ್ರಾ ಹೆಸರುಗಳು ಕೇಳಿ ಬಂದಿದ್ದವು.



ಇದೀಗ ಇಂಗ್ಲೆಂಡ್ ವಿರುದ್ಧದ ಸರಣಿಗೂ ಮುನ್ನ ಮತ್ತೆ ಹಿರಿಯ ಆಟಗಾರೊಬ್ಬರು ನಾಯಕತ್ವಕ್ಕಾಗಿ ಡಿಮ್ಯಾಂಡ್ ಮಾಡಿದ್ದಾರೆ ಎಂದು ವರದಿಯಾಗಿದೆ. ಇದಾಗ್ಯೂ ಭವಿಷ್ಯದ ದೃಷ್ಟಿಯಿಂದ ಯುವ ಆಟಗಾರರಿಗೆ ನಾಯಕತ್ವ ನೀಡಲು ಬಿಸಿಸಿಐ ಮುಂದಾಗಿದೆ ಎಂದು ತಿಳಿದು ಬಂದಿದೆ. ಹೀಗಾಗಿ ಇಂಗ್ಲೆಂಡ್ ವಿರುದ್ಧದ ಸರಣಿ ವೇಳೆ ಭಾರತ ಟೆಸ್ಟ್ ತಂಡದ ನಾಯಕ ಹಾಗೂ ಉಪನಾಯಕ ಬದಲಾದರೂ ಅಚ್ಚರಿಪಡಬೇಕಿಲ್ಲ.

# ವಜ್ರದ ಉಂಗುರ ನೀಡಿದ ರೋಹಿತ್




**ಉಂಗುರದ ಮೇಲೆ ಆಟಗಾರನ ಹೆಸರು**

ಐಪಿಎಲ್ 2025 ರ 56 ನೇ ಪಂದ್ಯವು ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯಕ್ಕೂ ಮುನ್ನ ರೋಹಿತ್ ಶರ್ಮಾ ಟೀಮ್ ಇಂಡಿಯಾ ವೇಗಿ ಮೊಹಮ್ಮದ್ ಸಿರಾಜ್‌ಗೆ ವಜ್ರದ ಉಂಗುರವನ್ನು ಹಸ್ತಾಂತರಿಸಿದ್ದಾರೆ. 2024ರ ಟಿ20 ವಿಶ್ವಕಪ್ ಗೆದ್ದ ಟೀಮ್ ಇಂಡಿಯಾ ಆಟಗಾರರಿಗೆ ಬಿಸಿಸಿಐ ವಜ್ರದ ಉಂಗುರವನ್ನು ಉಡುಗೊರೆಯಾಗಿ ಘೋಷಿಸಿತ್ತು.

ಬಿಸಿಸಿಐನ ನಮನ್ ಪ್ರಶಸ್ತಿ ಸಮಾರಂಭದಲ್ಲಿ ಈ ಉಡುಗೊರೆಯನ್ನು ನೀಡಲಾಗಿತ್ತು. ಆದರೆ ಮೊಹಮ್ಮದ್ ಸಿರಾಜ್ ಆಗ ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಇದೀಗ ಸಿರಾಜ್‌ಗೆ ರೋಹಿತ್ ಶರ್ಮಾ ವಜ್ರದುಂಗುರವನ್ನು ಹಸ್ತಾಂತರಿಸಿದ್ದಾರೆ. ಈ ವಿಡಿಯೋವನ್ನು ಬಿಸಿಸಿಐ ತನ್ನ ಅಧಿಕೃತ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ. ಇನ್ನು ಈ ವಜ್ರದ ಉಂಗುರವು 60 ಗ್ರಾಂ 18 ಕ್ಯಾರೆಟ್ ಚಿನ್ನವನ್ನು ಸಹ ಒಳಗೊಂಡಿದೆ. ಅಲ್ಲದೆ ಉಂಗುರದ ಮೇಲೆ ಆಟಗಾರನ ಹೆಸರು ಮತ್ತು ಜೆರ್ಸಿ ಸಂಖ್ಯೆಯನ್ನು ಬರೆಯಲಾಗಿದೆ. ಇದಲ್ಲದೆ, 2024 ರ ಟಿ 20 ವಿಶ್ವಕಪ್‌ನಲ್ಲಿ ಟೀಮ್ ಇಂಡಿಯಾ ಯಾವ ತಂಡವನ್ನು ಎಷ್ಟು ರನ್ ಅಥವಾ ವಿಕೆಟ್‌ಗಳಿಂದ ಸೋಲಿಸಿದೆ ಎಂಬುದನ್ನು ಸಹ ಈ ಉಂಗುರದ ಮೇಲೆ ಬರೆಯಲಾಗಿರುವುದು ವಿಶೇಷ. 2024 ರಲ್ಲಿ ನಡೆದ ಟಿ20 ವಿಶ್ವಕಪ್‌ನ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ಸೌತ್ ಆಫ್ರಿಕಾ ತಂಡಗಳು ಮುಖಾಮುಖಿಯಾಗಿದ್ದವು. ಈ ಮ್ಯಾಚ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 176 ರನ್ ಕಲೆಹಾಕಿತ್ತು. ಈ ಗುರಿಯನ್ನು ಬೆನ್ನತ್ತಿದ ಸೌತ್ ಆಫ್ರಿಕಾ ತಂಡ 20 ಓವರ್‌ಗಳಲ್ಲಿ 169 ರನ್‌ಗಳಿಸಲಷ್ಟೇ ಶಕ್ತರಾಗಿದ್ದರು. ಈ ಮೂಲಕ ಭಾರತ ತಂಡ 7 ರನ್‌ಗಳ ರೋಚಕ ಜಯ ಸಾಧಿಸಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು.

# ಬಿಬಿಎಂಪಿ ಕಾರ್ಯವನ್ನು ಶ್ಲಾಘಿಸಿದ ಡೇವಿಡ್




ರಾಯಲ್ ಚಾಲೆಂಜರ್ಸ್ ಬೆಂಗಳೂರು ( ಆರ್‌ಸಿಬಿ ) ತಂಡದ ಬ್ಯಾಟ್ಸ್‌ಮನ್ ಟಿಮ್ ಡೇವಿಡ್ ಬೃಹತ್ ಬೆಂಗಳೂರು ಮಹಾನಗರ ಪಾಲಿಗೆಯ ಸಾರ್ವಜನಿಕ ಪಾರ್ಕ್‌ನ ಸೌಲಭ್ಯಗಳನ್ನು ಶ್ಲಾಘಿಸಿದ್ದಾರೆ. ಆರ್‌ಸಿಬಿಯ ಮಿಸ್ಟರ್ ನಾಗ್ಸ್ ಶೋನಲ್ಲಿ ಕಾಣಿಸಿಕೊಂಡ ಟಿಮ್ ಡೇವಿಡ್‌ಗೆ ನೀವು ಈಗ ಸಿಂಗಾಪೂರ್‌ನಲ್ಲಿ ಇಲ್ಲ, ಅಲ್ಲಿನ ಯಾವ ಕೆಲಸವನ್ನು ಬೆಂಗಳೂರಿನಲ್ಲಿ ಮಾಡುತ್ತೀರಾ ಎಂದು ಪ್ರಶ್ನಿಸಲಾಗಿತ್ತು.

ಈ ವೇಳೆ ಮಾತನಾಡಿದ ಟಿಮ್ ಡೇವಿಡ್, ನಾನು ಸಿಂಗಾಪುರ್‌ನಲ್ಲಿದ್ದ ಸಾಕಷ್ಟು ವ್ಯಾಯಾಮಗಳನ್ನು ಮಾಡುತ್ತಿದ್ದೆ. ಇಲ್ಲಿ ಬಂದ ಮೇಲೆ ಆರ್‌ಸಿಬಿ ತಂಡದ ಕಂಡೀಷನಿಂಗ್ ತರಬೇತುದಾರ ಬಸು ಶಂಕರ್ ಒಂದು ದಿನ ಬೆಳಿಗ್ಗೆ ನನ್ನನ್ನು ಬಿಬಿಎಂಪಿ ಪಾರ್ಕ್‌ಗೆ ಕರೆದೊಯ್ದಿದ್ದರು. ಈ ವೇಳೆ ನಾನು ಅಲ್ಲಿ ವ್ಯಾಯಾಮ, ವಾಕಿಂಗ್, ಶೋಲ್ಡರ್ ವರ್ಕೌಟ್‌ಗಳನ್ನು ಮಾಡಿದ್ದೆ.

ಸಿಂಗಾಪೂರ್‌ನಲ್ಲಿ ಇರುವಂತೆ ಬೆಂಗಳೂರಿನಲ್ಲಿಯೂ ಬಿಬಿಎಂಪಿ ಪಾರ್ಕ್‌ನಲ್ಲಿ ಓಪನ್ ಜಿಮ್‌ಗಳಿವೆ ಎಂದು ಟಿಮ್ ಡೇವಿಡ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೌಲಭ್ಯಗಳ ಬಗ್ಗೆ ಮಾತನಾಡಿದ್ದಾರೆ. ಈ ವಿಡಿಯೋ ಕ್ಲಿಪ್ ಅನ್ನು ಬಿಬಿಎಂಪಿಯ ಅಧಿಕೃತ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ. ಅಂದಹಾಗೆ ಟಿಮ್ ಡೇವಿಡ್ ಮೂಲತಃ ಸಿಂಗಾಪೂರ್‌ನವರು. ಆದರೆ ಆಸ್ಟ್ರೇಲಿಯಾ ಪರ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ಕೆರಿಯರ್ ಮುಂದುವರೆಸಿದ್ದಾರೆ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966